ಮಂಗಳವಾರ, ಜುಲೈ 25, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 205 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಮಕ್ಕಳಿಗೆ ಕಥೆಗಳನ್ನು ಹೇಳಿ; ಅವರ ಬೆಳವಣಿಗೆಗೆ ಅವು ಪೂರಕ



ಆಳ-ಅಗಲ
ಏಕರೂಪ ಎಲ್ಲರಿಗೂ ಅನ್ವಯ ಸಂವಿಧಾನ ರಚನಾ ಸಭೆಯಲ್ಲಿ ಪ್ರತಿಪಾದನೆ

ವಿದ್ಯುತ್ ಮಗ್ಗಗಳಿಗೆ ₹1.25ರ ದರದಲ್ಲಿ ವಿದ್ಯುತ್ ಪೂರೈಕೆ: ಸಿ.ಎಂ 5

ಮಸೀದಿ ಉದ್ಘಾಟಿಸಿದ ಸ್ವಾಮೀಜಿಗಳು 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
66,384 ▼	19,672 ▼	₹61,250 (ಬೆಂಗಳೂರು)	₹76,300 (ಬೆಂಗಳೂರು)	81.81 ▲

ಉಕ್ಕುತ್ತಿರುವ ಅಘನಾಶಿನಿ • ಕೆಲ ಗ್ರಾಮಗಳು ಜಲಾವೃತ

ಮಳೆ ಅಬ್ಬರ: ನಾಲ್ವರ ಸಾವು

ಪ್ರಜಾವಾಣಿ ವಾರ್ತೆ



ದಕ್ಷಿಣ ಕನ್ನಡ ಜಿಲ್ಲೆಯ ಸುಬ್ರಮಣ್ಯದ ಕುಮಾರಧಾರಾ ಸ್ನಾನಘಟ್ಟದ ಬಳಿ ಜಲಾವೃತಗೊಂಡ ರಸ್ತೆಯಲ್ಲೇ ಕಾಲೇಜು ವಿದ್ಯಾರ್ಥಿನಿಯರು ಪದವಿ ಪರೀಕ್ಷೆಗಾಗಿ ನಡೆದುಕೊಂಡು ಹೋದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ರಾಜ್ಯದ ಬಹುತೇಕ ಭಾಗಗಳಲ್ಲಿ ಸೋಮವಾರವೂ ಮಳೆಯ ಅಬ್ಬರ ಜೋರಾಗಿತ್ತು. ನದಿಗಳು ಉಕ್ಕಿ ಹರಿಯುತ್ತಿದ್ದು, ನೆರೆ ಪರಿಸ್ಥಿತಿ ಉಂಟಾಗಿದೆ. ಕೆಲವೆಡೆ ಗ್ರಾಮಗಳು, ರಸ್ತೆಗಳು ಜಲಾವೃತವಾಗಿದ್ದು, ಸೇತುವೆಗಳು ಮುಳುಗಡೆಯಾಗಿವೆ. ಇದರ ಪರಿಣಾಮ ಸಂಪರ್ಕ ಕಡಿತವಾಗಿದೆ.

ಮಳೆ ಸಂಬಂಧಿ ಅವಘಡಗಳೂ ಹೆಚ್ಚಾಗಿದ್ದು, ನಾಲ್ವರು ಮೃತಪಟ್ಟಿದ್ದಾರೆ. ಒಬ್ಬರು ಜಲಪಾತದಲ್ಲಿ ಕೊಚ್ಚಿ ಹೋಗಿದ್ದಾರೆ. ಕೆಲವೆಡೆ ಮಳೆ ನೀರು ಮನೆಗಳಿಗೆ ನುಗ್ಗಿ ಅವಾಂತರ ಸೃಷ್ಟಿಯಾಗಿದೆ. ಇನ್ನೂ ಕೆಲವೆಡೆ ಗುಡ್ಡ ಕುಸಿತ ಸಂಭವಿಸಿದ್ದು, ವಿದ್ಯುತ್ ಕಂಬಗಳು ಧರೆಗುರುಳಿ, ವಿದ್ಯುತ್ ವ್ಯತ್ಯಯ ಉಂಟಾಗಿದೆ.

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹಳ್ನಾಡಿಯ ಗೋಕುಲದಾಸ್ ಪ್ರಭು (53) ಸೋಮವಾರ ಕರ್ಕುಂಜೆಯ ತೋಡಿಗೆ ಬಿದ್ದು ಮೃತಪಟ್ಟಿದ್ದಾರೆ. ಹೆಬ್ರಿ ತಾಲ್ಲೂಕು ಶೇಡಿಮನೆಯ ಬಡಬೈಲು ದರಕಾಸು ಎಂಬಲ್ಲಿ ಬಾಲಕಿ ರಚನಾ (12) ಭಾನುವಾರ ಹೊಳೆಗೆ ಬಿದ್ದು ಮೃತಪಟ್ಟಿದ್ದಾಳೆ.

ಬೈಂದೂರು ತಾಲ್ಲೂಕಿನ ಕೊಲ್ಲೂರು ಬಳಿಯ ಅರಶಿನಗುಂಡಿ ಜಲಪಾತ ವೀಕ್ಷಣೆಗೆ ತೆರಳಿದ್ದ ಭದ್ರಾವತಿಯ ಶರತ್ ಕುಮಾರ್ (23) ಕೊಚ್ಚಿಹೋಗಿದ್ದಾರೆ. ಬಂಡೆಯ ತುದಿಯಲ್ಲಿ ನಿಂತು ಜಲಪಾತ ವೀಕ್ಷಣೆ ಮಾಡುವಾಗ ಈ ದುರ್ಘಟನೆ ಸಂಭವಿಸಿದೆ. ಯುವಕನ ಪತ್ತೆಗೆ ಶೋಧ ಕಾರ್ಯಾಚರಣೆ ನಡೆಯುತ್ತಿದೆ.

ಕೆಲವೆಡೆ ಶಾಲೆ- ಕಾಲೇಜುಗಳಿಗೆ ಇಂದು ರಜೆ

ನಿರಂತರ ಮಳೆಯಾಗುತ್ತಿರುವ ದಕ್ಷಿಣ ಕನ್ನಡ, ಉಡುಪಿ, ಕೊಡಗು, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಹಾಗೂ ಹಾಸನ ಜಿಲ್ಲೆಯ ಹಾಸನ, ಸಕಲೇಶಪುರ, ಆಲೂರು, ಬೇಲೂರು, ಅರಕಲಗೂಡು ತಾಲ್ಲೂಕುಗಳಲ್ಲಿ ಅಂಗನವಾಡಿ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಆಯಾ ಜಿಲ್ಲಾಡಳಿತಗಳು ಮಂಗಳವಾರ ರಜೆ ಘೋಷಿಸಿವೆ.

ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಬಿರಾಳ (ಬಿ)ಯಲ್ಲಿ ಎರಡು ಅಂತಸ್ತಿನ ಮನೆ ಕುಸಿದು ಬಸಮ್ಮ ಬಸವರಾಜ (35) ಮೃತಪಟ್ಟಿದ್ದಾರೆ. ಮನೆಯಲ್ಲಿ ಬಸಮ್ಮ ಹಾಗೂ ಅವರ ಪುತ್ರಿ ಅಶ್ವಿನಿ ಇದ್ದರು. ಮನೆ ಕುಸಿಯುತ್ತಿರುವ ಸಪ್ಪಳ ಕೇಳುತ್ತಿದಂತೆಯೇ ಪುತ್ರಿ ಅಶ್ವಿನಿ ಓಡಿ ಹೊರಗೆ ಬಂದಿದ್ದರಿಂದ ಅಪಾಯದಿಂದ ಪಾರಾಗಿದ್ದಾರೆ.

ಬಾಲಕ ಸಾವು: ಮಳೆ ನೀರು ತುಂಬಿದ್ದ ಗುಂಡಿಯಲ್ಲಿ ಬಿದ್ದು ನಾಲ್ಕು ವರ್ಷದ ಬಾಲಕ ಮೃತಪಟ್ಟಿದ್ದಾನೆ. ಕಲಬುರಗಿಯ ಮಿಸ್ಬಾ ನಗರದ ನಿವಾಸಿ ಮೆಹಬೂಬ್ ಪಾಷಾ ಅವರ ಪುತ್ರ ಮಹಮದ್ ನಹೀಮ್(4) ಮೃತ ಬಾಲಕ.

ಚಿಂಚೋಳಿ, ಚಿತ್ತಾಪುರ ಹಾಗೂ ಕಮಲಾಪುರ ತಾಲ್ಲೂಕುಗಳಲ್ಲಿ ರಾತ್ರಿ ಭಾರಿ ಮಳೆಯಾಗಿದೆ. ಚಿಂಚೋಳಿ ತಾಲ್ಲೂಕಿನ ದೇಗಲಮಡಿ, ಕೊಳ್ಳೂರು, ನಾಗಾಈದಲಾಯಿ ಗ್ರಾಮಗಳಲ್ಲಿ ಮನೆಗಳಿಗೆ ನೀರು ನುಗ್ಗಿದೆ.

ಗ್ರಾಮಗಳು ಜಲಾವೃತ: ನಿರಂತರ ಮಳೆಗೆ ಉತ್ತರ ಕನ್ನಡ ಜಿಲ್ಲೆಯ ಅಘನಾಶಿನಿ ನದಿ ಉಕ್ಕಿ ಹರಿಯುತ್ತಿರುವ ಪರಿಣಾಮ ಕುಮಟಾ ತಾಲ್ಲೂಕಿನ ಹೆಗಡೆ, ಮುರೂರು, ಮಣಕಿ, ದಿವಗಿ ಗ್ರಾಮಗಳು ಜಲಾವೃತಗೊಂಡಿವೆ. ಹೊನ್ನಾವರದ ಗುಂಡಬಾಳ ನದಿ ಪಾತ್ರದಲ್ಲೂ ನೆರೆ ಸ್ಥಿತಿ ಮುಂದುವರಿದಿದೆ.

ಇನ್ನಷ್ಟು ಸುದ್ದಿಗಳು 7



ಜ್ಞಾನವಾಪಿ ಮಸೀದಿ ಸಮೀಕ್ಷೆಗೆ 'ಸುಪ್ರೀಂ' ತಡೆ

ವಾರಾಣಸಿ/ನವದೆಹಲಿ (ಪಿಟಿಐ): ಇಲ್ಲಿನ ಜ್ಞಾನವಾಪಿ ಮಸೀದಿ ಸಂಕೀರ್ಣದ 'ವಿಸ್ತೃತ ವೈಜ್ಞಾನಿಕ ಸಮೀಕ್ಷೆ'ಗೆ ಜು.26ರ ಸಂಜೆ 5 ಗಂಟೆವರೆಗೆ ಸುಪ್ರೀಂ ಕೋರ್ಟ್ ತಡೆ ನೀಡಿದ್ದು, ಮಸೀದಿ ಸ್ಥಳದಲ್ಲಿ ಯಾವುದೇ ಸಮೀಕ್ಷೆ ನಡೆಸಬಾರದು ಎಂದು ಸೂಚಿಸಿದೆ.

'ವಾರಾಣಸಿ ಜಿಲ್ಲಾ ಕೋರ್ಟ್ ಜುಲೈ 21ರಂದು ಸಮೀಕ್ಷೆಗೆ ಆದೇಶಿಸಿದೆ. ಮೇಲ್ಮನವಿ ಸಲ್ಲಿಸಲು ಕಾಲಾವಕಾಶ ಅಗತ್ಯ ಇರುವುದರಿಂದ ಕೆಳ ನ್ಯಾಯಾಲಯದ ಆದೇಶಕ್ಕೆ ತಡೆಯಾಜ್ಞೆ ನೀಡಲಾಗಿದೆ ಎಂದು ತಿಳಿಸಿದ ಸುಪ್ರೀಂ ಕೋರ್ಟ್, ಇದನ್ನು ತಕ್ಷಣ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್ಐ) ಗಮನಕ್ಕೆ ತರಬೇಕು' ಎಂದು ಉತ್ತರ ಪ್ರದೇಶ ಸರ್ಕಾರ ಪ್ರತಿನಿಧಿಸಿದ್ದ ಸಾಲಿಸಿಟರ್ ಜನರಲ್ ಅವರಿಗೆ ಕೋರ್ಟ್ ಸೂಚಿಸಿತು. ಅಲ್ಲದೆ ಪ್ರತಿವಾದಿಯಾದ ಮಸೀದಿ ಸಮಿತಿಯ ಅಹವಾಲು ಆಲಿಸಬೇಕು ಎಂದು ಅಲಹಾಬಾದ್ ಹೈಕೋರ್ಟ್‌ಗೆ ನಿರ್ದೇಶನ ನೀಡಿತು.



ಜ್ಞಾನವಾಪಿ ಮಸೀದಿ ಆವರಣದಲ್ಲಿ ಸೋಮವಾರ ಬಿಗಿ ಭದ್ರತೆ ಕಲ್ಪಿಸಲಾಗಿತ್ತು –ಪಿಟಿಐ ಚಿತ್ರ

ಜಿಲ್ಲಾ ಕೋರ್ಟ್ ಆದೇಶದಂತೆ ಜ್ಞಾನವಾಪಿ ಮಸೀದಿಯ ವೈಜ್ಞಾನಿಕ ಸಮೀಕ್ಷೆ ಕೈಗೊಳ್ಳುವ ಹಿನ್ನೆಲೆಯಲ್ಲಿ, ತುರ್ತು ವಿಚಾರಣೆ ಕೋರಿ ಜ್ಞಾನವಾಪಿ ಮಸೀದಿಯ ಅಂಜುಮನ್ ಇಂತೆಜಾಮೀಯಾ ಸಮಿತಿಯು ಸುಪ್ರೀಂ ಮೆಟ್ಟಿಲೇರಿತ್ತು.

ಜಿಲ್ಲಾ ಕೋರ್ಟ್ ಆದೇಶವನ್ನು ಪ್ರಶ್ನಿಸಿ, ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಬಹುದು ಎಂದು ಸಂವಿಧಾನದ ವಿಧಿ 227ರಲ್ಲಿ ದತ್ತವಾಗಿರುವ ಅಧಿಕಾರ ವ್ಯಾಪ್ತಿಯಲ್ಲಿ ಸೂಚನೆ ನೀಡಲಾಗುತ್ತಿದೆ ಎಂದು ಸುಪ್ರೀಂ ಕೋರ್ಟ್ ತಿಳಿಸಿತು.

ಸ್ಥಗಿತ: ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್ಐ) ಸುಮಾರು 30 ಸದಸ್ಯರ ತಂಡವು ಸೋಮವಾರ ಬೆಳಿಗ್ಗೆ 7 ಗಂಟೆಗೆ ಮಸೀದಿ ಆವರಣಕ್ಕೆ ಆಗಮಿಸಿತ್ತು. ತಡೆಯಾಜ್ಞೆ ಹಿನ್ನೆಲೆಯಲ್ಲಿ ಸಮೀಕ್ಷೆಯನ್ನು ಸ್ಥಗಿತಗೊಳಿಸಿತು.

5ನೇ ಪುಟ ನೋಡಿ

ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ಕೊಲೆ ಬೆದರಿಕೆ

ಬೆಂಗಳೂರು: ಕೇಳಿದಷ್ಟು ಹಣವನ್ನು ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡದಿದ್ದರೆ ಹೈಕೋರ್ಟ್ ನ್ಯಾಯಮೂರ್ತಿಗಳನ್ನು ಕೊಲೆ ಮಾಡುವುದಾಗಿ ವಾಟ್ಸ್‌ಆ್ಯಪ್ ಸಂದೇಶದ ಮೂಲಕ ಬೆದರಿಕೆ ಹಾಕಲಾಗಿದೆ.

5

ಚಿನಕುರಳಿ

ಪ್ರಕಾಶ್ ಶೆಟ್ಟಿ



ಪ್ರಶಸ್ತಿ ಮರಳಿಸುವುದಿಲ್ಲ: ಪುರಸ್ಕೃತರಿಂದ ಪೂರ್ವ ಹೇಳಿಕೆ ಪಡೆಯಲು ಶಿಫಾರಸು

ಪ್ರಜಾವಾಣಿ ವಾರ್ತೆ

ನವದೆಹಲಿ: ಭವಿಷ್ಯದಲ್ಲಿ ರಾಜಕೀಯ ಕಾರಣಕ್ಕಾಗಿ ಸಾಂಸ್ಕೃತಿಕ ಪ್ರಶಸ್ತಿಗಳನ್ನು ಮರಳಿಸುವುದಿಲ್ಲ ಎಂಬುದಾಗಿ ಪ್ರಶಸ್ತಿಗಳನ್ನು ಸ್ವೀಕರಿಸುವವರಿಂದ ದೇಶದ ಸಾಂಸ್ಕೃತಿಕ ಅಕಾಡೆಮಿಗಳು ಪೂರ್ವ ಹೇಳಿಕೆಗಳನ್ನು ಪಡೆಯಬೇಕು ಎಂದು ಸಾರಿಗೆ, ಸಂಸ್ಕೃತಿ ಮತ್ತು ಪ್ರವಾಸೋದ್ಯಮದ ಸಂಸದೀಯ ಸಮಿತಿ ಶಿಫಾರಸು ಮಾಡಿದೆ.

ಈ ಸ್ಥಾಯಿ ಸಮಿತಿ ಸಲ್ಲಿಸಿರುವ 'ರಾಷ್ಟ್ರೀಯ ಅಕಾಡೆಮಿಗಳು ಮತ್ತು ಇತರ ಸಾಂಸ್ಕೃತಿಕ ಸಂಸ್ಥೆಗಳ ಕಾರ್ಯಶೀಲತೆ' ಕುರಿತ ವರದಿಯ ಭಾಗವಾಗಿ ಈ ಶಿಫಾರಸುಗಳನ್ನು ಸೋಮವಾರ ಸಂಸತ್ತಿನಲ್ಲಿ ಮಂಡಿಸಲಾಯಿತು.

ಈ ವಿಷಯ ಕುರಿತು ವಿವರಿಸುವಾಗ, ಕರ್ನಾಟಕದ ಸಂಶೋಧಕ ಎಂ.ಎಂ.ಕಲಬುರ್ಗಿ ಅವರ ಹತ್ಯೆಯ ನಂತರ 39 ಲೇಖಕರು ಸಾಹಿತ್ಯ ಅಕಾಡೆಮಿಗೆ ತಮ್ಮ ಪ್ರಶಸ್ತಿಗಳನ್ನು ಮರಳಿಸಿದ್ದಾರೆ ಎಂದು ಸಂಸ್ಕೃತಿ ಸಚಿವಾಲಯವು ಸಂಸದೀಯ ಸಮಿತಿಗೆ ಮಾಹಿತಿ ನೀಡಿತು.

5ನೇ ಪುಟ ನೋಡಿ

ನವಜಾತ ಶಿಶುಗಳನ್ನು ಬೆಚ್ಚಗೆ ಇಡಲು ತಾಯಂದಿರ ಪರದಾಟ

ಸೋರುವ ಆಸ್ಪತ್ರೆ: ನಡುಗುವ ರೋಗಿಗಳು!

• ಸಿದ್ದು ಆರ್.ಜಿ.ಹಳ್ಳಿ

ಪ್ರಜಾವಾಣಿ ವಿಶೇಷ

ಹಾವೇರಿ: ನಗರದ ಜಿಲ್ಲಾಸ್ಪತ್ರೆ ಕಟ್ಟಡವು ಮಳೆಯಿಂದ ವಿಪರೀತ ಸೋರುತ್ತಿದ್ದು, ನವಜಾತ ಶಿಶುಗಳನ್ನು ಚಳಿಯಿಂದ ರಕ್ಷಿಸಿ ಬೆಚ್ಚಗಿಡಲು ತಾಯಂದಿರು ಕಷ್ಟಪಡುತ್ತಿದ್ದಾರೆ. ಇಡೀ ಆಸ್ಪತ್ರೆ ಶೀತಮಯವಾಗಿದ್ದು ಗರ್ಭಿಣಿಯರು, ಬಾಣಂತಿಯರು, ವಯೋವೃದ್ಧರು ಮತ್ತು ರೋಗಿಗಳು ಚಳಿಯಿಂದ ನಡುಗುವಂತಾಗಿದೆ.

ನವಜಾತ ಶಿಶುಗಳ ತೀವ್ರ ನಿಗಾ ಘಟಕವೂ (ಎಸ್.ಎನ್.ಸಿ.ಯು) ಸೋರುತ್ತಿದ್ದು, ಕೃತಕ ಶಾಖೋಪಕರಣಗಳಲ್ಲಿ ಮಲಗಿರುವ ಎಳೆಯ ಕಂದಮ್ಮಗಳ ಸ್ಥಿತಿ ನೆನೆದು ವಾರ್ಡ್ ಹೊರಗಡೆ ಇರುವ ತಾಯಂದಿರು ಕಣ್ಣೀರು ಹಾಕುತ್ತಿದ್ದಾರೆ. ಮನೆಯಿಂದ ತಂದ ಬಟ್ಟೆಗಳನ್ನು ಹೊದಿಸಿ ಮಕ್ಕಳಿಗೆ ಶೀತವಾಗದಂತೆ ನೋಡಿಕೊಳ್ಳಲು ಹರಸಾಹಸ ಪಡುತ್ತಿದ್ದಾರೆ.



ಹಾವೇರಿ ಜಿಲ್ಲಾಸ್ಪತ್ರೆಯ ತಾಯಂದಿರ ವಾರ್ಡ್‌ನಲ್ಲಿ ಮಳೆ ನೀರು ಸೋರುತ್ತಿರುವುದರಿಂದ ಬಕೆಟ್ ಇಟ್ಟಿರುವುದು –ಪ್ರಜಾವಾಣಿ ಚಿತ್ರ/ ಮಾಲತೇಶ ಇಚ್ಚಂಗಿ

ವೈದ್ಯಕೀಯ ವಾರ್ಡ್, ಮಕ್ಕಳ ಆರೋಗ್ಯ ಪುನಶ್ಚೇತನಾ ಕೇಂದ್ರ (ಎನ್.ಆರ್.ಸಿ), ಜನರಲ್ ವಾರ್ಡ್ ಸೇರಿ ಆಸ್ಪತ್ರೆಯ ಬಹುತೇಕ ಕೊಠಡಿಗಳು ಸೋರುತ್ತಿವೆ. ಮಳೆ ನೀರು ಗೋಡೆಗಳನ್ನು ಒದ್ದೆಯಾಗಿಸಿದೆ. ಬಹುತೇಕ ಕಡೆ ನೆಲದ ಮೇಲೆ ನೀರು ನಿಂತು ತೇವಮಯವಾಗಿದ್ದು, ಸ್ವಲ್ಪ ಆಯ ತಪ್ಪಿದರೂ ಗಾಯಗೊಳ್ಳುವುದು ನಿಶ್ಚಿತ. ಆಸ್ಪತ್ರೆಯ ಕಾರಿಡಾರ್ ಮತ್ತು ವಾರ್ಡ್‌ಗಳಲ್ಲಿ ತೊಟ್ಟಿಕ್ಕುವ ನೀರನ್ನು ಸಂಗ್ರಹಿಸಲು ಬಕೆಟ್‌ಗಳನ್ನು ಇಡಲಾಗಿದೆ.

> **ಜಿಲ್ಲಾಸ್ಪತ್ರೆ ಕಟ್ಟಡದ ಮೇಲ್ಭಾಗ ಕಾಮಗಾರಿ ನಡೆಯುತ್ತಿರುವುದರಿಂದ ನೀರು ಸೋರುತ್ತಿದೆ. ಸಿಮೆಂಟ್ ಹಾಕಿ ಸೋರಿಕೆ ತಡೆಗಟ್ಟಲು ಎಂಜಿನಿಯರ್‌ಗೆ ಸೂಚಿಸಿದ್ದೇನೆ**
> **ಡಾ.ಪಿ.ಆರ್.ಹಾವನೂರು,** ಜಿಲ್ಲಾ ಶಸ್ತ್ರಚಿಕಿತ್ಸಕ, ಹಾವೇರಿ ಜಿಲ್ಲಾಸ್ಪತ್ರೆ

> **ಮಗಳು ಕೆಮ್ಮು, ಜ್ವರದಿಂದ ಬಳಲುತ್ತಿದ್ದಾಳೆ. ಸೋರುತ್ತಿರುವ ಕಾರಣ ವಾರ್ಡ್ ಖಾಲಿ ಮಾಡಿಸಿ ಪಡಸಾಲೆಯಲ್ಲಿ ಹಾಕಿದ್ದಾರೆ. ಶೀತದಲ್ಲಿ ಹುಷಾರಾಗಲು ಸಾಧ್ಯವೇ?**
> **ಪುಷ್ಪಾ ಕಂಬಳಿ,** ಹಾವೇರಿ

5ನೇ ಪುಟ ನೋಡಿ

ಎಲ್‌ಎಲ್‌ಎಂ ಕೋರ್ಸ್‌ಗೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜು ಮತ್ತು ಕಾನೂನು ಅಧ್ಯಯನ ವಿಭಾಗದಲ್ಲಿ ಎರಡು ವರ್ಷದ ಎಲ್‌ಎಲ್‌ಎಂ ಸ್ನಾತಕೋತ್ತರ ಪದವಿ ಕೋರ್ಸ್‌ನ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಮೂರು ವರ್ಷದ ಎಲ್‌ಎಲ್‌ಬಿ ಪದವಿಯಲ್ಲಿ ಕನಿಷ್ಠ ಶೇ 45 ಅಂಕ ಗಳಿಸಿರುವವರು (ಎಸ್ಸಿ, ಎಸ್ಟಿ ಮತ್ತು ಪ್ರವರ್ಗ-1 ಹಾಗೂ ಅಂಗವಿಕಲರು ಶೇ 40ರಷ್ಟು) ಅರ್ಜಿ ಸಲ್ಲಿಸಲು ಅರ್ಹರಾಗಿದ್ದಾರೆ.

ಹೆಚ್ಚಿನ ಮಾಹಿತಿಗೆ www.bangaloreuniversity.ac.in ಅಥವಾ www.ulcbangalore.com ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಎಂದು ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಮೆರಿಕದ ನಿವೃತ್ತ ಬಿಷಪ್ ಸುದರ್ಶನ ದೇವಧರ್ ನಿಧನ



ಮಂಗಳೂರು: ಅಮೆರಿಕದ ಯುನೈಟೆಡ್ ಮೆಥಡಿಸ್ಟ್ ಚರ್ಚ್‌ನ ನಿವೃತ್ತ ಬಿಷಪ್ ಸುದರ್ಶನ ದೇವಧರ್ (72) ಈಚೆಗೆ ನಿಧನರಾಗಿದ್ದಾರೆ.

ಅವರು ಅಮೆರಿಕದ ಯುನೈಟೆಡ್ ಮೆಥಡಿಸ್ಟ್ ಚರ್ಚ್‌ನಲ್ಲಿ ಬಿಷಪ್ ಆಗಿ ಸೇವೆ ಸಲ್ಲಿಸಿದ ಮೊದಲ ಭಾರತೀಯ ಪ್ರಜೆ. ಯುನೈಟೆಡ್ ಮೆಥಡಿಸ್ಟ್ ಚರ್ಚ್‌ನ ಈಶಾನ್ಯ ವ್ಯಾಪ್ತಿಗೆ ಸಂಬಂಧಿಸಿದ ಈ ಹುದ್ದೆಗೆ ಅವರು 2004ರಲ್ಲಿ ಆಯ್ಕೆಯಾಗಿದ್ದರು. 'ಸುದಾ' ಎಂದೇ ಖ್ಯಾತರಾಗಿದ್ದ ಅವರು ಮಡಿಕೇರಿಯ ಸಿಎಸ್‌ಐ ಚರ್ಚ್‌ನ ಪಾಲನಾ ಮಂಡಳಿಯಲ್ಲಿ ಧರ್ಮಾಧಿಕಾರಿಯಾಗುವ ಮೂಲಕ ತಮ್ಮ ಧಾರ್ಮಿಕ ಯಾನ ಆರಂಭಿಸಿದ್ದರು.

1982ರಲ್ಲೇ ಪಾದ್ರಿಯಾಗಿದ್ದ ಅವರು, ಆಂಟೋರಿಯೊ ನಾರ್ಥ್ ಸೆಂಟ್ರಲ್ ನ್ಯೂಯಾರ್ಕ್‌ನ ಆ್ಯನುವಲ್ ಕಾನ್ಫರೆನ್ಸ್‌ನ ಡಿಸ್ಟ್ರಿಕ್ಟ್‌ನ ಸೂಪರಿಂಟೆಂಡೆಂಟ್ ಆಗಿ ಎಂಟು ವರ್ಷ ಕಾರ್ಯ ನಿರ್ವಹಿಸಿದ್ದರು. 2023ರ ಜ. 1ರಂದು ಅವರು ನಿವೃತ್ತರಾಗಿದ್ದರು.

ಬಿಷಪ್ ದೇವಧರ್ ಅವರು ನ್ಯೂಜೆರ್ಸಿ ಧರ್ಮ ಪ್ರಾಂತ್ಯದ ಬಿಷಪ್ ಆಗಿ 2004ರ ಸೆ.1ರಂದು ನೇಮಕಗೊಂಡಿದ್ದರು. ನ್ಯೂಜೆರ್ಸಿಯಲ್ಲಿ ಎಂಟು ವರ್ಷ ಕರ್ತವ್ಯ ನಿರ್ವಹಿಸಿದ ಬಳಿಕ 650ಕ್ಕೂ ಅಧಿಕ ಚರ್ಚ್‌ಗಳನ್ನೊಳಗೊಂಡ ಬಾಸ್ಟನ್ ಪ್ರದೇಶದ ಹೊಣೆಯನ್ನು ಅವರಿಗೆ 2012ರ ಜೂನ್‌ನಲ್ಲಿ ವಹಿಸಲಾಗಿತ್ತು.

ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿ ವಿಜಯಾ ಕಾಲೇಜಿನಲ್ಲಿ ಬಿ.ಕಾಂ ಪದವೀಧರರಾಗಿದ್ದ ಅವರು ಬೆಂಗಳೂರಿನ ಥಿಯಾಲಾಜಿಕಲ್ ಕಾಲೇಜಿನಲ್ಲಿ ಬಿ.ಡಿ ಪದವಿ ಪಡೆದಿದ್ದರು.

ಅವರಿಗೆ ಪತ್ನಿ ಪ್ರೇಮಾ, ಮಗಳು ತೃಣಾ, ಅಳಿಯ ಗೇಜ್ ಹಾಗೂ ಮೊಮ್ಮಕ್ಕಳು ಇದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಕಾರ್ಯಸಾಧ್ಯತಾ ವರದಿ ಕೈಗೆತ್ತಿಕೊಳ್ಳಲು ಅನುಮತಿ ಕೋರಿ ಪತ್ರ– ಎಂ.ಬಿ. ಪಾಟೀಲ

ಉಪನಗರ ರೈಲು ವಿಸ್ತರಣೆ: ರೈಲ್ವೆಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪನಗರ ರೈಲು ಯೋಜನೆಯನ್ನು ಮೈಸೂರು, ಚಿಕ್ಕಬಳ್ಳಾಪುರ, ತುಮಕೂರು, ಕೋಲಾರ, ಮಾಗಡಿ, ಗೌರಿಬಿದನೂರು, ಬಂಗಾರಪೇಟೆಗೆ ವಿಸ್ತರಿಸಲು ಅನುಕೂಲವಾಗುವಂತೆ ಕಾರ್ಯಸಾಧ್ಯತಾ ವರದಿ ಕೈಗೆತ್ತಿಕೊಳ್ಳಲು ಅನುಮತಿ ನೀಡುವಂತೆ ನೈರುತ್ಯ ರೈಲ್ವೆ ವಲಯದ ಪ್ರಧಾನ ವ್ಯವಸ್ಥಾಪಕರಿಗೆ ಪತ್ರ ಬರೆಯಲಾಗಿದೆ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಅವರು ತಿಳಿಸಿದ್ದಾರೆ.

ಉಪನಗರ ರೈಲು ಯೋಜನೆಯ ಪ್ರಗತಿ ಕುರಿತು ಕರ್ನಾಟಕ ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ ನಿಯಮಿತದ (ಕೆ-ರೈಡ್) ಅಧಿಕಾರಿಗಳ ಜೊತೆ ಸೋಮವಾರ ಅವರು ಸಭೆ ನಡೆಸಿದರು.



ಎಂ.ಬಿ. ಪಾಟೀಲ

ಸಭೆಯ ಬಳಿಕ ಮಾತನಾಡಿದ ಅವರು, 'ರಾಜಧಾನಿಯಲ್ಲಿನ ಸಂಚಾರ ದಟ್ಟಣೆ ನಿವಾರಣೆ ಗುರಿಯೊಂದಿಗೆ ಕೈಗೆತ್ತಿಕೊಂಡಿರುವ ಉಪ ನಗರ ರೈಲು ಯೋಜನೆಯ ಹಂತ-1ರಲ್ಲಿ 148.17 ಕಿ.ಮೀ. ಕಾಮಗಾರಿ ನಡೆಯುತ್ತಿದೆ. ಅದನ್ನು ಸುತ್ತಲಿನ ಹಲವು ನಗರಗಳಿಗೆ ವಿಸ್ತರಿಸುವ ಅಗತ್ಯವಿದೆ. ಈ ಸಂಬಂಧ ಜೂನ್ 6ರಂದು ಸಭೆ ನಡೆಸಲಾಗಿತ್ತು. ಕೆ-ರೈಡ್ ಈ ಪ್ರಸ್ತಾವನೆಗೆ ಅಂದು ತಾತ್ವಿಕ ಒಪ್ಪಿಗೆ ನೀಡಲಾಗಿತ್ತು' ಎಂದರು.

'ಹಂತ-1ರ ಕಾಮಗಾರಿಗಳು ಅಬಾಧಿತವಾಗಿ ಮುಂದುವರಿದುಕೊಂಡು ಹೋಗಲಿವೆ. ಹಂತ-2 ಅನ್ನು 452 ಕಿ.ಮೀ.ಗಳಿಗೆ ವಿಸ್ತರಿಸಲು ಯೋಚಿಸಿದ್ದು, ನಿಯಮಗಳ ಪ್ರಕಾರ ರಾಜ್ಯ ಸರ್ಕಾರದ ಸಂಸ್ಥೆಯು ಕಾರ್ಯಸಾಧ್ಯತಾ ವರದಿ ತಯಾರಿಸಲು ಸಾಧ್ಯವಿಲ್ಲ. ರೈಲ್ವೆ ಮಂಡಳಿಯೇ ಮಾಡಬೇಕು' ಎಂದು ಮಾಹಿತಿ ನೀಡಿದ್ದಾರೆ.

'ಉಪನಗರ ರೈಲು ಯೋಜನೆಯ ವ್ಯಾಪ್ತಿಯಲ್ಲಿ ಭೂಸ್ವಾಧೀನಕ್ಕೆ ಸಂಬಂಧಪಟ್ಟಂತೆ ಇರುವ ಸಮಸ್ಯೆಗಳನ್ನು ಬಗೆಹರಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ರೈಲು ವ್ಯವಸ್ಥೆಗೆ ಬೇಕಾದ ಬೋಗಿಗಳ ತಯಾರಿಕೆಗೆ ಬಿಡ್ ಅಂತಿಮಗೊಳಿಸಲಾಗಿದೆ' ಎಂದು ವಿವರಿಸಿದರು.

'ಈ ಯೋಜನೆಗೆ 177.22 ಎಕರೆ ಭೂಮಿ ಅಗತ್ಯವಿದ್ದು, 164 ಎಕರೆಯ ಸ್ವಾಧೀನ ಮುಗಿದಿದೆ. ಉಳಿದ 12.39 ಎಕರೆ ಭೂಮಿ ರಕ್ಷಣಾ ಇಲಾಖೆ ಮತ್ತು ಸರ್ಕಾರದ್ದಾಗಿದ್ದು, ಸ್ವಲ್ಪ ಕಗ್ಗಂಟಾಗಿದೆ. ಕೆ-ರೈಡ್ ಅಧಿಕಾರಿಗಳು ಸಂಬಂಧಿಸಿದವರ ಜತೆ ಮಾತುಕತೆ ನಡೆಸಿ ಗೊಂದಲ ಬಗೆಹರಿಸಲಿದ್ದಾರೆ. ಯೋಜನೆಯ ಭಾಗವಾಗಿ ಸೋಲದೇವನಹಳ್ಳಿ ಮತ್ತು ದೇವನಹಳ್ಳಿಯಲ್ಲಿ ಎರಡು ಡಿಪ್ಪೋ ನಿರ್ಮಿಸಲಾಗುವುದು' ಎಂದು ಸಚಿವರು ಹೇಳಿದರು.

ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕ ಗೌರವ್ ಗುಪ್ತ, ಯೋಜನಾ ನಿರ್ದೇಶಕ ರಾಜೇಂದ್ರಕುಮಾರ್ ಸಿಂಗ್ ಇದ್ದರು.



ರೈಲು ವಿಸ್ತರಣೆಯ ಚಿತ್ರಣ
ಪ್ರಗತಿಯಲ್ಲಿರುವ 148 ಕಿ.ಮೀ. ವ್ಯಾಪ್ತಿಯ ಉಪ ನಗರ ರೈಲು ಯೋಜನೆಯಲ್ಲಿ,
ಬೆಂಗಳೂರು ನಗರ ರೈಲು ನಿಲ್ದಾಣ– ದೇವನಹಳ್ಳಿ (41.4 ಕಿ.ಮೀ)
ಬೈಯಪ್ಪನಹಳ್ಳಿ– ಚಿಕ್ಕಬಾಣಾವರ (25.01 ಕಿ.ಮೀ)
ಕೆಂಗೇರಿ– ವೈಟ್‌ಫೀಲ್ಡ್ (35.32 ಕಿ.ಮೀ)
ಹೀಳಲಿಗೆ– ರಾಜಾನುಕುಂಟೆ (46.25 ಕಿ.ಮೀ) ಹೀಗೆ ನಾಲ್ಕು ಕಾರಿಡಾರ್‌ಗಳಿವೆ.
ಎರಡನೇ ಹಂತದಲ್ಲಿ
ದೇವನಹಳ್ಳಿ– ಕೋಲಾರ (107 ಕಿ.ಮೀ)
ಚಿಕ್ಕಬಾಣಾವರದಿಂದ ಡಾಬಸ್‌ಪೇಟೆ ಮೂಲಕ ತುಮಕೂರು (55 ಕಿ.ಮೀ)
ಚಿಕ್ಕಬಾಣಾವರ– ಮಾಗಡಿ (45 ಕಿ.ಮೀ)
ಕೆಂಗೇರಿ–ಮೈಸೂರು (125 ಕಿ.ಮೀ)
ವೈಟ್‌ಫೀಲ್ಡ್– ಬಂಗಾರಪೇಟೆ (45 ಕಿ.ಮೀ)
ಹೀಳಲಿಗೆಯಿಂದ ತಮಿಳುನಾಡಿನ ಹೊಸೂರು (23 ಕಿ.ಮೀ)
ರಾಜಾನುಕುಂಟೆಯಿಂದ ದೊಡ್ಡ ಬಳ್ಳಾಪುರದ ಮಾರ್ಗವಾಗಿ ಗೌರಿಬಿದನೂರಿನವರೆಗೆ (52 ಕಿ.ಮೀ) ವಿಸ್ತರಿಸಲು ಎಂ.ಬಿ. ಪಾಟೀಲ ಅವರು ಚಿಂತನೆ ನಡೆಸಿದ್ದಾರೆ.

ನಗರದಲ್ಲಿ ದಿನವಿಡೀ ಮಳೆಯ ಸಿಂಚನ



ರಾಜಾಜಿನಗರದಲ್ಲಿ ಶಾಲಾ ಮಕ್ಕಳು ಮಳೆಯಿಂದ ರಕ್ಷಣೆ ಪಡೆಯಲು ಕೊಡೆ ಹಿಡಿದು ಸಾಗಿದರು. – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಸೋಮವಾರ ದಿನವಿಡೀ ಸಾಧಾರಣ ಮಳೆ ಸುರಿಯಿತು.

ಭಾನುವಾರ ರಾತ್ರಿಯೂ ನಗರದ ಹಲವೆಡೆ ಮಳೆಯಾಗಿತ್ತು. ಸೋಮವಾರ ಬೆಳಿಗ್ಗೆಯಿಂದಲೇ ಬಿಡುವು ಕೊಡುತ್ತಲೇ ಮಳೆ ಸುರಿಯಿತು.

ಮಲ್ಲೇಶ್ವರ, ಬ್ಯಾಟರಾಯನಪುರ, ಪೀಣ್ಯ ಕೈಗಾರಿಕಾ ವಲಯ, ಜಾಲಹಳ್ಳಿ, ಯಲಹಂಕ, ಕೆಂಗೇರಿ, ಸೇರಿದಂತೆ ನಗರದ ಎಲ್ಲೆಡೆ ಜಿಟಿಜಿಟಿ ಮಳೆ ಸುರಿಯಿತು.

ಜಿಟಿ ಜಿಟಿ ಮಳೆ ನಡುವೆಯೂ ಜನರ ಓಡಾಟವಿತ್ತು. ದ್ವಿಚಕ್ರ ವಾಹನ ಸವಾರರು, ಮಾರ್ಗಮಧ್ಯೆ ಮಳೆ ಜೋರಾದ ಸಂದರ್ಭದಲ್ಲಿ ರಸ್ತೆ ಬದಿ ವಾಹನಗಳನ್ನು ನಿಲ್ಲಿಸಿ ಸುರಕ್ಷಿತ ಸ್ಥಳಗಳಲ್ಲಿ ಆಶ್ರಯ ಪಡೆದಿದ್ದ ದೃಶ್ಯಗಳು ಸಾಮಾನ್ಯವಾಗಿತ್ತು. ಮಾರುಕಟ್ಟೆ ಪ್ರದೇಶಗಳು, ಪೆಟ್ರೋಲ್ ಬಂಕ್‌ಗಳು, ಅಂಗಡಿ, ಮಳಿಗೆ ಹಾಗೂ ಮಾಲ್‌ಗಳಲ್ಲಿ ಜನ ಗುಂಪು ಗುಂಪಾಗಿ ನಿಂತು ಆಶ್ರಯ ಪಡೆದಿದ್ದರು.

ರೇಸ್‌ಕೋರ್ಸ್ ರಸ್ತೆ, ಬಳ್ಳಾರಿ ರಸ್ತೆ, ತುಮಕೂರು ರಸ್ತೆ, ಮೈಸೂರು ರಸ್ತೆ, ಕನಕಪುರ ರಸ್ತೆ ಹಾಗೂ ಸುತ್ತಮುತ್ತಲ ರಸ್ತೆಗಳಲ್ಲಿ ವಾಹನಗಳ ಸಂಚಾರ ನಿಧಾನಗತಿಯಲ್ಲಿತ್ತು. ಮಳೆ ಜೋರಾಗಿ ಸುರಿಯುವ ವೇಳೆ, ಹಲವೆಡೆ ದಟ್ಟಣೆ ಉಂಟಾಯಿತು.

ಶಾಲೆ-ಕಾಲೇಜು ಆರಂಭದ ಸಮಯ ಹಾಗೂ ಮುಕ್ತಾಯದ ಸಮಯದಲ್ಲೂ ಮಳೆ ಇತ್ತು. ಹಲವು ವಿದ್ಯಾರ್ಥಿಗಳು ಮತ್ತು ಪೋಷಕರು ಮಳೆಯಲ್ಲೇ ಕೊಡೆ ಹಿಡಿದು ಹೆಜ್ಜೆ ಹಾಕಿದರು.

₹3 ಏರಿಕೆ, ಆ.1ರಿಂದ ಅನ್ವಯ; ರೈತರಿಗೆ ಲಾಭ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: 'ಪ್ರತಿ ಲೀಟರ್ ಹಾಲಿನ ದರವನ್ನು ₹3 ಹೆಚ್ಚಿಸಲಾಗಿದೆ. ರಾಜ್ಯ ಸರ್ಕಾರ ದರ ಹೆಚ್ಚಳಕ್ಕೆ ಒಪ್ಪಿಗೆ ನೀಡಿದ್ದು, ಆಗಸ್ಟ್ 1 ರಿಂದ ಅನ್ವಯವಾಗಲಿದೆ' ಎಂದು ಬೆಂಗಳೂರು ಹಾಲು ಒಕ್ಕೂಟ (ಬಮೂಲ್) ಅಧ್ಯಕ್ಷ ಎಚ್.ಪಿ.ರಾಜಕುಮಾರ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಬಮೂಲ್ ವ್ಯಾಪ್ತಿಯಲ್ಲಿ 2275 ಹಾಲು ಉತ್ಪಾದಕ ಸಹಕಾರ ಸಂಘಗಳಿದ್ದು, 1,11,547 ಸದಸ್ಯರು ಪ್ರತಿ ದಿನ 16 ಲಕ್ಷ ಲೀಟರ್ ಹಾಲು ಪೂರೈಸುತ್ತಿದ್ದಾರೆ. ಇದರಲ್ಲಿ ಶೇ 40ರಷ್ಟು ಮಹಿಳೆಯರಿದ್ದಾರೆ. ಕೆಲ ಖಾಸಗಿ ಕಂಪನಿಗಳು ಹೆಚ್ಚಿನ ಮೊತ್ತದ ದರ ನೀಡಿ ಹಾಲು ಖರೀದಿ ಮಾಡುತ್ತಿರುವುದರಿಂದ ಬಮೂಲ್ ಹಾಲು ಸಂಗ್ರಹ ಕುಸಿತವಾಗಿದೆ. ಮಾರುಕಟ್ಟೆ ಪೈಪೋಟಿ ಎದುರಿಸಲು ದರ ಹೆಚ್ಚಳದ ಪೂರ್ತಿ ಲಾಭವನ್ನು ರೈತರಿಗೆ ನೀಡಲಾಗುವುದು' ಎಂದು ಹೇಳಿದರು.

'ಸದ್ಯ ಪ್ರತಿ ಲೀಟರ್‌ಗೆ ₹31.50 ರೈತರಿಗೆ ನೀಡಲಾಗುತ್ತಿದೆ. ಆಗಸ್ಟ್ 1 ರಿಂದ ₹34.50ರಂತೆ ದರ ನಿಗದಿಯಾಗಲಿದೆ. ರೈತರು ಮತ್ತು ಸಂಸ್ಥೆಯ ಹಿತದೃಷ್ಟಿಯಿಂದ ದರ ಏರಿಕೆ ಮಾಡಲಾಗಿದ್ದು, ಇದರಲ್ಲಿ ಮಂಡಳಿಯು ಯಾವುದೇ ಪಾಲು ಪಡೆಯುವುದಿಲ್ಲ' ಎಂದು ವಿವರಿಸಿದರು.

'₹5 ದರ ಹೆಚ್ಚಳ ಮಾಡುವಂತೆ ರಾಜ್ಯ ಸರ್ಕಾರವನ್ನು ಕೋರಲಾಗಿತ್ತು. ರೈತರ ಲಾಭದ ಜತೆಗೆ ಗ್ರಾಹಕರಿಗೂ ಹೊರೆಯಾಗದಂತೆ ₹3 ಹೆಚ್ಚಿಸಲಾಗಿದೆ' ಎಂದು ತಿಳಿಸಿದರು.

'ದರ ಏರಿಕೆಯ ನಂತರವೂ ದೇಶದಲ್ಲೇ ಕಡಿಮೆ ಬೆಲೆಗೆ ಹಾಲು ಮಾರಾಟ ಮಾಡುತ್ತಿರುವ ಸಂಸ್ಥೆ ನಮ್ಮದು. ಸದ್ಯ ಗುಜರಾತ್‌ನಲ್ಲಿ ₹52, ಆಂಧ್ರಪ್ರದೇಶದಲ್ಲಿ ₹56, ದೆಹಲಿಯಲ್ಲಿ ₹54, ಕೇರಳದಲ್ಲಿ ₹50, ಮಹಾ ರಾಷ್ಟ್ರದಲ್ಲಿ ₹54 ದರ ನಿಗದಿಪಡಿಸಲಾಗಿದೆ. ಸಹಕಾರ ಸಂಸ್ಥೆಯಾಗಿ ಲಾಭವೇ ಮುಖ್ಯವಾಗಬಾರದು, ಸಮಸ್ತ ಫಲಾನುಭವಿಗಳ ಹಿತ ಕಾಯುವುದು ಮುಖ್ಯ' ಎಂದು ಬಮೂಲ್ ಉಪಾಧ್ಯಕ್ಷ ಎಂ. ಮಂಜುನಾಥ್ ಅವರು ಹೇಳಿದರು.

ಗೃಹಲಕ್ಷ್ಮಿ ನೋಂದಣಿ: ಹಣ ಪಡೆದರೆ ಪ್ರಕರಣ ದಾಖಲು

ಬೆಳಗಾವಿ: 'ಗೃಹಲಕ್ಷ್ಮಿ ಯೋಜನೆ ನೋಂದಣಿ ಪ್ರಕ್ರಿಯೆಗೆ ಜನರಿಂದ ಹಣ ಪಡೆಯುವ ಅಥವಾ ಯೋಜನೆ ಅನುಷ್ಠಾನಕ್ಕೆ ನಿರ್ಲಕ್ಷ್ಯ ತೋರಿದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಎಚ್ಚರಿಕೆ ನೀಡಿದರು.

'ನೋಂದಣಿ ಪ್ರಕ್ರಿಯೆಗೆ ಜನರಿಂದ ಹಣ ಪಡೆಯುತ್ತಿದ್ದ ಮೂರು ಕೇಂದ್ರಗಳ ಲಾಗಿನ್ ಐಡಿ ಹಿಂಪಡೆಯಲಾಗಿದೆ. ಯೋಜನೆ ದುರ್ಬಳಕೆ ತಡೆಯಲು ಸರ್ಕಾರ ಕ್ರಮ ಕೈಗೊಂಡಿದೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಈ ಯೋಜನೆಯಡಿ ನೋಂದಣಿಗೆ ಫಲಾನುಭವಿಗಳಿಂದ ಹಣ ಪಡೆಯುವುದು ಕಂಡುಬಂದರೆ, ಅಂತಹವರ ಲಾಗಿನ್ ಐಡಿ, ಪಾಸ್‌ವರ್ಡ್ ಹಿಂಪಡೆಯಬೇಕು. ನಿಯಮ ಮೀರಿದವರ ವಿರುದ್ಧ ಪ್ರಕರಣವನ್ನೂ ದಾಖಲಿಸಲು ಸೂಚಿಸಲಾಗಿದೆ. ಹಣ ಪಡೆಯುತ್ತಿರುವುದು ಕಂಡುಬಂದರೆ ತಹಶೀಲ್ದಾರರು, ಪಿಡಿಒಗಳು, ಗ್ರಾಮ ಲೆಕ್ಕಾಧಿಕಾರಿಗಳು, ಜಿಲ್ಲಾಧಿಕಾರಿಯವರ ತಿಳಿಸಬೇಕು. ಪೊಲೀಸರಿಗೂ ಮಾಹಿತಿ ಕೊಡಬೇಕು' ಎಂದರು.

'ಪ್ರತಿ ಅರ್ಜಿ ಅಪ್‌ಲೋಡ್ ಮಾಡುವವರಿಗೆ ಸರ್ಕಾರ ₹12 ಕೊಡುತ್ತದೆ' ಎಂದರು.

ಕಾಯ್ದೆ ಉಲ್ಲಂಘಿಸಿ ಪೂರ್ಣಾವಧಿ ನೀಡಿದ್ದ ಹಿಂದಿನ ಸರ್ಕಾರ

ಶಾಂತ್ ತಿಮ್ಮಯ್ಯ ನೇಮಕಾತಿಯಲ್ಲೇ ಅಕ್ರಮ!

• ಚಿರಂಜೀವಿ ಕುಲಕರ್ಣಿ

ಬೆಂಗಳೂರು: ಶಾಂತ್ ಎ. ತಿಮ್ಮಯ್ಯ ಅವರನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು (ಕೆಎಸ್‌ಪಿಸಿಬಿ) ಕಾನೂನು ಉಲ್ಲಂಘಿಸಿ ಅಧ್ಯಕ್ಷರ ಹುದ್ದೆಗೆ ಮೂರು ವರ್ಷಗಳ ಪೂರ್ಣಾವಧಿಗೆ ನೇಮಿಸುವ ಮೂಲಕ ರಾಜ್ಯ ಸರ್ಕಾರ ಕಾನೂನು ಉಲ್ಲಂಘಿಸಿರುವುದು ಬೆಳಕಿಗೆ ಬಂದಿದೆ.

ಜಲ (ಮಾಲಿನ್ಯ ನಿಯಂತ್ರಣ) ಕಾಯ್ದೆ–1972ರ ಪ್ರಕಾರ, 'ಹಾಲಿ ಅಧ್ಯಕ್ಷರ ಅಧಿಕಾರದ ಅವಧಿಯಲ್ಲಿ ಮಧ್ಯಂತರ ನೇಮಕಾತಿಯ ಸಂದರ್ಭ ಉದ್ಭವಿಸಿದಲ್ಲಿ ಮೂರು ವರ್ಷಗಳಲ್ಲಿ ಬಾಕಿ ಉಳಿದಿರುವ ಅವಧಿಗೆ ಸೀಮಿತವಾಗಿ ಹೊಸ ಅಧ್ಯಕ್ಷರನ್ನು ನೇಮಿಸಬೇಕು'. ಈ ಸೆಕ್ಷನ್ ಅನ್ನು ಉಲ್ಲಂಘಿಸಿ ಶಾಂತ್ ತಿಮ್ಮಯ್ಯ ಅವರನ್ನು ಪೂರ್ಣ ಅವಧಿಗೆ ನೇಮಕ ಮಾಡಿರುವುದು ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದಿರುವ ದಾಖಲೆಗಳಿಂದ ಬಹಿರಂಗಗೊಂಡಿದೆ.

ಮಂಡಳಿಯ ಅಧ್ಯಕ್ಷರ ಹುದ್ದೆಗೆ ನಿವೃತ್ತ ಐಎಫ್‌ಎಸ್ ಅಧಿಕಾರಿ ಎನ್. ಜಯರಾಂ ಅವರನ್ನು ನೇಮಿಸುವುದರೊಂದಿಗೆ 2019ರ ಮಾರ್ಚ್ 5ರಂದು ಹೊಸ ಅವಧಿ ಆರಂಭವಾಗಿತ್ತು. 2022ರ ಮಾರ್ಚ್ 4ಕ್ಕೆ ಕೊನೆಗೊಳ್ಳಬೇಕಿತ್ತು. ಮೂರು ತಿಂಗಳಲ್ಲೇ ಜಯರಾಂ ರಾಜೀನಾಮೆ ನೀಡಿದ್ದರಿಂದ ಈ ಹುದ್ದೆ ಖಾಲಿಯಾಗಿತ್ತು. ನಂತರದಲ್ಲಿ ಐದು ಮಂದಿ ಈ ಹುದ್ದೆಗೆ ಆಕಾಂಕ್ಷಿಗಳಾಗಿದ್ದರು. ಆಯ್ಕೆಯಾದ ಸುಧೀಂದ್ರ ರಾವ್ ಕೂಡ ಕೆಲವೇ ದಿನಗಳಲ್ಲಿ ರಾಜೀನಾಮೆ ನೀಡಿದ್ದರು. ನಂತರವೂ ಹೊಸ ನೇಮಕಾತಿ ಆರು ತಿಂಗಳಷ್ಟು ವಿಳಂಬವಾಗಿತ್ತು.

ಬಳಿಕ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರ ಹುದ್ದೆ ಭರ್ತಿಗೆ 'ಸಾಮಾನ್ಯ ನೇಮಕಾತಿ' ಎಂಬ ಶೀರ್ಷಿಕೆಯಡಿ ಜಾಹೀರಾತು ಪ್ರಕಟಿಸಲಾಗಿತ್ತು. ಆದರೆ, 'ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ, ಶಾಂತ್ ತಿಮ್ಮಯ್ಯ ಅವರನ್ನು ಮೂರು ವರ್ಷಗಳ ಪೂರ್ಣ ಅವಧಿಗೆ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸುವುದು ಜಲ (ಮಾಲಿನ್ಯ ನಿಯಂತ್ರಣ) ಕಾಯ್ದೆಯ ಉಲ್ಲಂಘನೆಯಾಗುತ್ತದೆ' ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯ ಅಧಿಕಾರಿಗಳು ನಡಾವಳಿಯಲ್ಲಿ ಉಲ್ಲೇಖಿಸಿದ್ದರು.

ಇಲಾಖೆಯ ವಿಷಯ ಶಾಖಾಧಿಕಾರಿಗಳಿಂದ ಅಧೀನ ಕಾರ್ಯದರ್ಶಿಗಳವರೆಗೆ ವಿವಿಧ ಅಧಿಕಾರಿಗಳು ಶಾಂತ್ ತಿಮ್ಮಯ್ಯ ಅವರನ್ನು ಮೂರು ವರ್ಷಗಳ ಪೂರ್ಣ ಅವಧಿಗೆ ನೇಮಿಸಲು ಸಾಧ್ಯವಿಲ್ಲ ಎಂದು ಹಲವು ಬಾರಿ ಕಡತದಲ್ಲಿ ದಾಖಲಿಸಿದ್ದರು. ಕಡತವನ್ನು ಹಿಂದಿನ ಪರಿಸರ ಸಚಿವ ಆನಂದ್ ಸಿಂಗ್ ಅವರಿಗೆ ಸಲ್ಲಿಸಿದ ಕೆಲವೇ ದಿನಗಳಲ್ಲಿ ಸರ್ಕಾರ ನಿಲುವು ಬದಲಿಸಿತ್ತು.

'ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರನ್ನು ಪೂರ್ಣಾವಧಿಗೆ ನೇಮಕ ಮಾಡುವುದು ಸರ್ಕಾರದ ನಿರ್ಧಾರಕ್ಕೆ ಬಿಟ್ಟದ್ದು. ಈ ವಿಷಯವನ್ನು ಸೂಕ್ತ ತೀರ್ಮಾನಕ್ಕಾಗಿ ಸಕ್ಷಮ ಪ್ರಾಧಿಕಾರದ ಮುಂದೆ ಮಂಡಿಸಲಾಗಿದೆ' ಎಂದು ಪರಿಸರ ಇಲಾಖೆಯ ಅಧಿಕಾರಿಗಳು ಕಡತವೊಂದನ್ನು ಆನಂದ್ ಸಿಂಗ್ ಅವರಿಗೆ ಮಂಡಿಸಿದ್ದರು.

'ಎಲ್ಲ 47 ಪ್ಯಾರಾಗಳನ್ನೂ ಪರಿಶೀಲಿಸಿದ್ದೇನೆ ಮತ್ತು ಶಾಂತ್ ತಿಮ್ಮಯ್ಯ ಅವರನ್ನು ಮೂರು ವರ್ಷಗಳ ಪೂರ್ಣಾವಧಿಗೆ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರ ಹುದ್ದೆಗೆ ನೇಮಿಸಲು ನಿರ್ಧರಿಸಿದ್ದೇನೆ' ಎಂದು ಸಕ್ಷಮ ಪ್ರಾಧಿಕಾರಿಯಾಗಿದ್ದ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟಿಪ್ಪಣಿಯಲ್ಲಿ ಉಲ್ಲೇಖಿಸಿದ್ದರು.

'ಶಾಂತ್ ತಿಮ್ಮಯ್ಯ ಅವರನ್ನು ಪೂರ್ಣಾವಧಿಗೆ ನೇಮಕ ಮಾಡಲು ಕಾಯ್ದೆಯಲ್ಲಿ ಅವಕಾಶ ಇರಲಿಲ್ಲ. ಅವರು ಒಂದು ವರ್ಷ ಅಕ್ರಮವಾಗಿ ವೇತನ ಮತ್ತು ಇತರ ಸೌಲಭ್ಯಗಳನ್ನು ಪಡೆದಿದ್ದಾರೆ' ಎಂದು ಮಾಹಿತಿ ಹಕ್ಕು ಕಾಯ್ದೆಯಡಿ ದಾಖಲೆಗಳನ್ನು ಪಡೆದಿರುವ ಆಕಾಶ್ ಜೆ. ಅವರು ಹೇಳಿದ್ದಾರೆ.

ತನಿಖೆಗೆ ಮುಖ್ಯಮಂತ್ರಿ ಆದೇಶ

ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಜಾಗೃತಿ ಕಾರ್ಯಕ್ರಮಗಳಿಗೆ ₹17 ಕೋಟಿಯನ್ನು ಕಾನೂನು ಉಲ್ಲಂಘಿಸಿ ವೆಚ್ಚ ಮಾಡಲಾಗಿದೆ ಎಂಬ ಆರೋಪದ ಕುರಿತು ಮಂಡಳಿ ಅಧ್ಯಕ್ಷ ಶಾಂತ್ ತಿಮ್ಮಯ್ಯ ವಿರುದ್ಧ ತನಿಖೆ ನಡೆಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಅವರಿಗೆ ಆದೇಶಿಸಿದ್ದಾರೆ.

₹17 ಕೋಟಿ ಬಳಕೆಯಲ್ಲಿ ಅಕ್ರಮ ನಡೆದಿದೆ ಎಂದು ಕಾಂಗ್ರೆಸ್ ಮುಖಂಡ ಪಿ.ಆರ್. ರಮೇಶ್ ದೂರು ನೀಡಿದ್ದರು. ಅದನ್ನು ಆಧರಿಸಿ ತನಿಖೆಗೆ ಆದೇಶಿಸಿರುವ ಮುಖ್ಯಮಂತ್ರಿ, ಈ ಕಾರ್ಯಕ್ರಮದ ಬಿಲ್ ಪಾವತಿ ತಡೆ ಹಿಡಿಯುವಂತೆ ಸೂಚಿಸಿದ್ದಾರೆ.

ಬೀದರ್‌ನಲ್ಲಿ ಪರಿಸರ ಮಾಲಿನ್ಯ ಕುರಿತು ತಪಾಸಣೆ ನಡೆಸುವಂತೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ನೀಡಿದ್ದ ಆದೇಶ ಪಾಲಿಸುವಲ್ಲಿ ವಿಫಲವಾಗಿರುವ ಆರೋಪದ ಮೇಲೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಕೂಡ ಶಾಂತ್ ತಿಮ್ಮಯ್ಯ ಅವರಿಗೆ ಶೋಕಾಸ್ ನೋಟಿಸ್ ಜಾರಿಗೊಳಿಸಿದೆ.

ಸಿಇಟಿ: ಎಲ್ಲ ಕೋರ್ಸ್‌ಗಳಿಗೂ ಏಕಕಾಲಕ್ಕೆ ಸೀಟು ಹಂಚಿಕೆ

ಈ ಬಾರಿ ಸಂಯೋಜಿತ ಸೀಟು ಹಂಚಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ಇತರ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಇದುವರೆಗೂ ಪ್ರತ್ಯೇಕವಾಗಿಯೇ ಸೀಟು ಹಂಚಿಕೆ ಪ್ರಕ್ರಿಯೆ ನಡೆಸುತ್ತಿದ್ದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಪ್ರಸಕ್ತ ಸಾಲಿನಿಂದ (2023-24) ಎಲ್ಲವನ್ನೂ ಏಕಕಾಲಕ್ಕೆ ನಡೆಸಲು ತೀರ್ಮಾನಿಸಿದೆ.

ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ಅನಗತ್ಯ ವಿಳಂಬವನ್ನು ತಪ್ಪಿಸುವ ಉದ್ದೇಶದಿಂದ ಈ ಸುಧಾರಣಾ ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವೈದ್ಯಕೀಯ, ದಂತ ವೈದ್ಯಕೀಯ, ಎಂಜಿನಿಯರಿಂಗ್, ಪಶುವೈದ್ಯ, ಕೃಷಿ, ನರ್ಸಿಂಗ್, ಅರ್ಕಿಟೆಕ್ಟ್ ಹಾಗೂ ಫಾರ್ಮಸಿ ಕೋರ್ಸ್‌ಗಳ ಪ್ರವೇಶಕ್ಕೆ ಸಂಯೋಜಿತ ಸೀಟು ಹಂಚಿಕೆ ಪ್ರಕ್ರಿಯೆಯನ್ನು ನಡೆಸಲಾಗುತ್ತದೆ. ಹೀಗೆ ಮಾಡುತ್ತಿರುವುದು ಇದೇ ಮೊದಲು ಎಂದು ಅವರು ವಿವರಿಸಿದ್ದಾರೆ.

ಪ್ರತ್ಯೇಕ ಸೀಟು ಹಂಚಿಕೆ ಪ್ರಕ್ರಿಯೆಯಿಂದಾಗಿ ಹಲವು ಅನನುಕೂಲಗಳು ಇದ್ದವು. ಒಬ್ಬ ಅಭ್ಯರ್ಥಿ ಒಮ್ಮೆಗೇ ಒಂದಕ್ಕಿಂತ ಹೆಚ್ಚು ಕೋರ್ಸ್‌ಗಳಲ್ಲಿ ಸೀಟು ಪಡೆದು, ನಂತರ ಆತ ಯಾವುದಾದರೂ ಒಂದಕ್ಕೆ ಪ್ರವೇಶ ಪಡೆಯುವವರೆಗೂ ಉಳಿದ ಕೋರ್ಸ್‌ಗಳಲ್ಲಿನ ಸೀಟು ಬೇರೆಯ ಅಭ್ಯರ್ಥಿಗಳಿಗೆ ಲಭ್ಯವಾಗುತ್ತಿರಲಿಲ್ಲ. ಇದರಿಂದ ಪ್ರತಿಭಾವಂತರಿಗೆ ಆಯ್ಕೆ ಸುತ್ತಿನಲ್ಲಿ ಸೀಟು ಕೈತಪ್ಪುತ್ತಿತ್ತು ಎಂದು ಅವರು ಹೇಳಿದ್ದಾರೆ.

ಅಭ್ಯರ್ಥಿಗಳು ಯಾವುದೇ ಕೋರ್ಸ್‌ಗಳಿಗೆ ಪ್ರವೇಶ ಬಯಸಿದ್ದಲ್ಲಿ ಸೀಟ್ ಮ್ಯಾಟ್ರಿಕ್ಸ್ ಪ್ರಕಾರ ಶುಲ್ಕ ಮತ್ತು ಲಭ್ಯವಿರುವ ಸೀಟುಗಳನ್ನು ಪರಿಶೀಲಿಸಿ, ನಂತರ ತಮ್ಮ ಆದ್ಯತೆ ಅನುಸಾರ ಸೀಟುಗಳ 'ಆಪ್ಷನ್ ಎಂಟ್ರಿ' ಮಾಡಬೇಕು ಎಂದು ಅವರು ಸಲಹೆ ನೀಡಿದ್ದಾರೆ.

ಹೊಸ ವ್ಯವಸ್ಥೆ ಹೇಗೆ?

ಅಭ್ಯರ್ಥಿಯು 'ಆಪ್ಷನ್ ಎಂಟ್ರಿ' ಮಾಡುವಾಗ ಆದ್ಯತೆಯ ಕೋರ್ಸ್‌ಗಳನ್ನು ಮೊದಲು ದಾಖಲಿಸಬೇಕು. ಆದ್ಯತೆಯ ಕೋರ್ಸ್ ಸಿಗದಿದ್ದರೆ ಎರಡನೇ ಆದ್ಯತೆಯಾಗಿ ದಾಖಲಿಸಬೇಕು ಎಂದು ಕಾರ್ಯನಿರ್ವಾಹಕ ನಿರ್ದೇಶಕಿ ವಿವರಿಸಿದ್ದಾರೆ.

ಕೆಲ ಅಭ್ಯರ್ಥಿಗಳಿಗೆ ಮೊದಲ ಸುತ್ತಿನಲ್ಲಿ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಎರಡೂ ಕೋರ್ಸ್‌ಗಳಲ್ಲಿ ಸೀಟು ದೊರೆಯುವ ಸಾಧ್ಯತೆ ಇರುತ್ತದೆ. ಅಂತಹವರು ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ನಂತರ ಚಲನ್ ಮೂಲಕ ಶುಲ್ಕ ಪಾವತಿಸಿ ಪ್ರವೇಶಾತಿಯ ದಾಖಲಾತಿ ಆದೇಶವನ್ನು ಆನ್‌ಲೈನ್ ಮೂಲಕ ಪಡೆದು ಸಂಬಂಧಪಟ್ಟ ಕಾಲೇಜಿಗೆ ವರದಿ ಮಾಡಿಕೊಳ್ಳಬೇಕು. ಬಳಿಕ ಅದನ್ನು ಕಾಲೇಜಿನ ಪೋರ್ಟಲ್‌ನಲ್ಲಿ ತಪ್ಪದೇ ಅಪ್‌ಡೇಟ್ ಮಾಡಿಸಬೇಕು. ಒಂದು ವೇಳೆ ಹಾಗೆ ಮಾಡದಿದ್ದರೆ ಸದರಿ ಸೀಟು ಖಾಲಿ ಇದೆ ಎಂದು ಭಾವಿಸಿ, ಅದನ್ನು ಮುಂದಿನ ಸುತ್ತಿನ ಹಂಚಿಕೆಗೂ ಬಳಸಿಕೊಳ್ಳುವ ಅಪಾಯ ಇರುತ್ತದೆ ಎಂದು ವಿವರಿಸಿದ್ದಾರೆ.

ಎರಡನೇ ಸುತ್ತಿನ ಸೀಟು ಹಂಚಿಕೆಯಲ್ಲಿ ಅಭ್ಯರ್ಥಿಯು ಮಾಡಿರುವ 'ಆಪ್ಷನ್ ಎಂಟ್ರಿ' ಪ್ರಕಾರ ಯಾವುದಾದರೊಂದು ಕೋರ್ಸ್‌ನಲ್ಲಿ ಸೀಟು ಪಡೆಯಬೇಕು. ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕೋರ್ಸ್‌ಗಳಲ್ಲಿ ಎರಡನೇ ಸುತ್ತಿನ ಸೀಟು ಹಂಚಿಕೆ ನಂತರ ಕಡ್ಡಾಯವಾಗಿ ತಮಗೆ ಹಂಚಿಕೆಯಾದ ಸೀಟಿಗೆ ಶುಲ್ಕ ಪಾವತಿಸಿ, ಪ್ರವೇಶ ಪಡೆಯಬೇಕು. ಇಲ್ಲದಿದ್ದರೆ ಸದರಿ ಸೀಟುಗಳನ್ನು ದಂಡದ ಮೊತ್ತ ಪಾವತಿಸಿ ರದ್ದುಪಡಿಸಬೇಕು. ಎರಡನೇ ಸುತ್ತಿನಲ್ಲಿ ವೈದ್ಯಕೀಯ ಸೀಟು ಹಂಚಿಕೆಯಾದ ಅಭ್ಯರ್ಥಿಗಳಿಗೆ ಮಾಪ್‌ಅಪ್ ಸುತ್ತಿನಲ್ಲಿ ಭಾಗವಹಿಸಲು ಅರ್ಹತೆ ಇರುವುದಿಲ್ಲ ಎಂದು ತಿಳಿಸಿದ್ದಾರೆ.

ಎಂಜಿನಿಯರಿಂಗ್ ಸೀಟುಗಳಿಗೆ ಮೂರನೇ ಸುತ್ತಿನವರೆಗೂ ಭಾಗವಹಿಸಬಹುದು. ಆದರೆ ಎರಡನೇ ಸುತ್ತಿನಲ್ಲಿ ಸೀಟು ಹಂಚಿಕೆಯಾದಲ್ಲಿ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ ಎಂದು ವಿವರಿಸಿದ್ದಾರೆ.

ನಗರದಲ್ಲಿ ಇಂದು

ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸಭೆಯ ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಬಿ.ವಿ. ಮಲ್ಲಿಕಾರ್ಜುನಯ್ಯ, ಪ್ರಾಸ್ತಾವಿಕ ನುಡಿ: ಪರಮಾನಂದ ಪಾಂಡೆ, ಅತಿಥಿಗಳು: ಕೆ.ವಿ. ಪ್ರಭಾಕರ್, ಎಂ. ಕೃಷ್ಣಪ್ಪ, ಮುನಿರತ್ನ, ಎಂ.ಟಿ.ಬಿ. ನಾಗರಾಜ್, ಶಿವಾನಂದ ತಗಡೂರು, ಹೇಮಂತ ತಿವಾರಿ, ಎಚ್.ಬಿ. ಮದನಗೌಡ, ಆಯೋಜನೆ: ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟ, ಸ್ಥಳ: ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಬೆಳಿಗ್ಗೆ 10.30ರಿಂದ

65ನೇ ಸಂಸ್ಥಾಪನಾ ದಿನಾಚರಣೆ: ಉದ್ಘಾಟನೆ: ಡಾ. ಎಂ.ವಿ. ವೆಂಕಟೇಶ್, ಅತಿಥಿಗಳು: ಡಾ.ಎನ್. ಶಿವಶಂಕರ್, ಆರ್.ಎನ್. ಶ್ರೀನಿವಾಸ ಗೌಡ, ಎಸ್. ಯತೀರಾಜ್, ಅಧ್ಯಕ್ಷತೆ: ಡಾ. ಎಂ. ನಾರಾಯಣ ಸ್ವಾಮಿ, ಆಯೋಜನೆ ಮತ್ತು ಸ್ಥಳ: ಪಶು ವೈದ್ಯಕೀಯ ಕಾಲೇಜು, ಹೆಬ್ಬಾಳ, ಬೆಳಿಗ್ಗೆ 10.30

ಜರಗನಹಳ್ಳಿ ಶಿವಶಂಕರ್ 'ಹನಿಗವನ ಸಾಹಿತ್ಯ ಪ್ರಶಸ್ತಿ' ಪ್ರದಾನ: ಮೂಡ್ನಾಕೂಡು ಚಿನ್ನಸ್ವಾಮಿ, ಪ್ರಶಸ್ತಿ ಪುರಸ್ಕೃತರು: ಬಸವರಾಜ ಸಾದರ, ಅಧ್ಯಕ್ಷತೆ: ವ.ಚ. ಚನ್ನೇಗೌಡ, ಅತಿಥಿಗಳು: ಶುಭದ ಪುರುಷೋತ್ತಮರಾಜು, ರಾ.ನಂ. ಚಂದ್ರಶೇಖರ, ಸಂತೋಷ ಹಾನಗಲ್ಲ, ಆಯೋಜನೆ: ಕರ್ನಾಟಕ ವಿಕಾಸ ರಂಗ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 11



ಮೂಡ್ನಾಕೂಡು ಚಿನ್ನಸ್ವಾಮಿ

ರಾಜರಾಜೇಶ್ವರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ 13ನೇ ಘಟಿಕೋತ್ಸವ: ಅತಿಥಿಗಳು: ರಾಧಾಕೃಷ್ಣನ್, ಎ.ಸಿ.ಎಸ್. ಅರುಣ್ ಕುಮಾರ್, ಅಧ್ಯಕ್ಷತೆ: ಎ.ಸಿ. ಷಣ್ಮುಗಮ್, ಆಯೋಜನೆ ಮತ್ತು ಸ್ಥಳ: ರಾಜರಾಜೇಶ್ವರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಎ.ಸಿ.ಎಸ್. ಕನ್ವೆನ್ಷನ್ ಹಾಲ್, ಬೆಳಿಗ್ಗೆ 11ರಿಂದ

ಡಾ.ಬಿ.ಆರ್. ಅಂಬೇಡ್ಕರ್ ಜನ್ಮದಿನಾಚರಣೆ, 'ಡಾ.ಬಿ.ಆರ್. ಅಂಬೇಡ್ಕರ್', 'ಸಾರಿಗೆ ರತ್ನ' ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಕಲ್ಯಾಣಸಿರಿ ಭಂತೇಜ, ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಎಚ್.ಸಿ. ಮಹದೇವಪ್ಪ, ಪ್ರಶಸ್ತಿ ಪ್ರದಾನ: ಸತೀಶ್ ಜಾರಕಿಹೊಳಿ, ಆರ್.ಬಿ. ತಿಮ್ಮಾಪುರ, ಪ್ರಿಯಾಂಕ್, ಖರ್ಗೆ, ಶಿವರಾಜ್ ಎಸ್. ತಂಗಡಗಿ, ಅತಿಥಿಗಳು: ಎನ್.ವಿ. ಪ್ರಸಾದ್, ವಿ. ಅನ್ಬುಕುಮಾರ್, ಜಿ. ಸತ್ಯವತಿ, ಭರತ್ ಎಸ್., ಪ್ರಶಾಂತ್ ಕುಮಾರ್ ಮಿಶ್ರ, ಎಂ. ರಾಚಪ್ಪ, ಆಯೋಜನೆ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ನೌಕರರ ಸಂಘ, ಸ್ಥಳ: ಸರ್ ಪುಟ್ಟಣ್ಣ ಚೆಟ್ಟಿ ಪುರಭವನ, ಸಂಜೆ 4

ಪ್ರವಚನ ವಾಹಿನಿ: 'ಶ್ರೀಮದ್ ಭಾಗವತದ ವೈಜ್ಞಾನಿಕ ಮತ್ತು ವಿಸ್ಮಯ ಪ್ರಸಂಗಗಳು' ಕುರಿತ ಉಪನ್ಯಾಸ: ವರದರಾಜ ಐಯ್ಯಂಗಾರ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ

nagaradalli_indu@prajavani.co.in

ಪತ್ರಿಕಾ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು

'ಪತ್ರಕರ್ತರು ಆತ್ಮಾವಲೋಕನ ಮಾಡಿಕೊಳ್ಳಲಿ'



ಪ್ರೆಸ್‌ಕ್ಲಬ್‌ನಲ್ಲಿ ಸೋಮವಾರ ಆಯೋಜಿಸಿದ್ದ ಪತ್ರಿಕಾ ದಿನಾಚರಣೆಯಲ್ಲಿ ಹಿರಿಯ ಪತ್ರಕರ್ತರಾದ ಅರೆಕೆರೆ ಜಯರಾಂ, ಬಿ.ವಿ. ಮಲ್ಲಿಕಾರ್ಜುನಯ್ಯ, ಆರ್.ಪಿ. ಜಗದೀಶ್, ಎಂ. ಸಿದ್ದರಾಜು, ಸಾರಂಗಪಾಣಿ ಪಿ. ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸನ್ಮಾನಿಸಿದರು. ವಿಧಾನ ಪರಿಷತ್ ಸದಸ್ಯ ಗೋವಿಂದರಾಜು, ಕೆಯುಡಬ್ಲ್ಯುಜೆ ಅಧ್ಯಕ್ಷ ಶಿವಾನಂದ ತಗಡೂರು, ಡಿಎಸ್ ಮ್ಯಾಕ್ಸ್ ಪ್ರಾಪರ್ಟೀಸ್ ನಿರ್ದೇಶಕ ದಯಾನಂದ್ ಎಸ್.ಪಿ. ಪ್ರೆಸ್‌ಕ್ಲಬ್ ಪ್ರಧಾನ ಕಾರ್ಯದರ್ಶಿ ಬಿ.ಪಿ. ಮಲ್ಲಪ್ಪ ಇದ್ದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪತ್ರಕರ್ತರು ತಾವು ನಡೆದು ಬಂದ ದಾರಿಯ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ಪತ್ರಿಕಾ ಧರ್ಮವನ್ನು ಉಳಿಸಿಕೊಂಡಿದ್ದೇವೆಯೇ ಎಂದು ಪ್ರಶ್ನೆ ಮಾಡಿಕೊಳ್ಳಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದರು.

ಪ್ರೆಸ್ ಕ್ಲಬ್ ಆಫ್ ಬೆಂಗಳೂರು ಮತ್ತು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಸೋಮವಾರ ಪ್ರೆಸ್‌ಕ್ಲಬ್‌ನಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆ ಮತ್ತು ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

'ಒಳ್ಳೆಯದು ಮತ್ತು ತಪ್ಪನ್ನು ಮಾಧ್ಯಮಗಳು ಹೇಳಬೇಕು. ಯಾವುದೇ ಸರ್ಕಾರ ತಪ್ಪು ಮಾಡಿದಾಗ ಎಚ್ಚರಿಸಬೇಕು. ಆದರೆ, ಒಳ್ಳೆಯದನ್ನು ತಪ್ಪೆಂದೂ, ತಪ್ಪನ್ನು ಒಳ್ಳೆಯದೆಂದೂ ಹೇಳಲು ಹೋಗಬಾರದು. ನನ್ನ ಬಗ್ಗೆ ಆಧಾರವಿಲ್ಲದೇ ಸುಳ್ಳು ಸುದ್ದಿ ಬರೆದವರಿಗೂ ನಾನು ಇಲ್ಲಿಯವರೆಗೆ ಕರೆ ಮಾಡಲು ಹೋಗಿಲ್ಲ. ಅವರು ಮುಂದಕ್ಕೆ ತಿದ್ದಿಕೊಳ್ಳುತ್ತಾರೆ ಎಂಬ ವಿಶ್ವಾಸವಿದೆ' ಎಂದು ನುಡಿದರು.

'ಹಿಂದೆ ಜನರು ಸತ್ಯ ತಿಳಿಯಲು ಪತ್ರಿಕೆಗಳನ್ನು ಓದುತ್ತಿದ್ದರು. ಈಗ ಆ ನಂಬಿಕೆಯನ್ನು ಮಾಧ್ಯಮಗಳು ಉಳಿಸಿಕೊಂಡಿವೆಯೇ? ಪತ್ರಿಕಾ ವೃತ್ತಿಯ ಆಶಯಕ್ಕೆ ತಕ್ಕಂತೆ ನಡೆದುಕೊಳ್ಳುತ್ತಿವೆಯೇ ಎನ್ನುವ ಬಗ್ಗೆ ಅವಲೋಕನ ಮಾಡಿಕೊಳ್ಳಬೇಕು. ಪತ್ರಕರ್ತರಿಗೆ ಸಾಮಾಜಿಕ ಜವಾಬ್ದಾರಿ ಇರಬೇಕು' ಎಂದು ತಿಳಿಸಿದರು.

'ಗ್ರಾಮೀಣ ಪತ್ರಕರ್ತರಿಗೆ ಜಿಲ್ಲೆಗಳಲ್ಲಿ ಸಂಚರಿಸಲು ಬಸ್ ಪಾಸ್ ಒದಗಿಸುವ ಬಗ್ಗೆ ಅಧಿಕಾರಿಗಳ ಜತೆ ಚರ್ಚಿಸಲಾಗುವುದು' ಎಂದು ಭರವಸೆ ನೀಡಿದರು.

ಪತ್ರಕರ್ತರಾದ ಆರ್.ಪಿ. ಜಗದೀಶ್, ಬಿ.ವಿ. ಮಲ್ಲಿಕಾರ್ಜುನಯ್ಯ, ಎಂ. ಸಿದ್ಧರಾಜು, ಅರಕೆರೆ ಜಯರಾಂ, ಸಾರಂಗಪಾಣಿ ಪಿ., ಗುಜ್ಜಾರಪ್ಪ ಬಿ.ಜಿ., ಸಮೀವುಲ್ಲಾ ಬಿ., ಜಿ.ಎನ್. ಮೋಹನ್, ವಿ. ವೆಂಕಟೇಶ್ ಅವರನ್ನು ಗೌರವಿಸಲಾಯಿತು.

'ಪತ್ರಕರ್ತರ ಸಾಮಾಜಿಕ ಜವಾಬ್ದಾರಿ' ಕುರಿತು ಪತ್ರಕರ್ತರಾದ ಆರ್. ಪೂರ್ಣಿಮಾ, ಡಿ. ಉಮಾಪತಿ, ರವಿ ಹೆಗಡೆ, ವಿಶೇಷ ಉಪನ್ಯಾಸ ನೀಡಿದರು. ವಿಧಾನ ಪರಿಷತ್ ಮಾಜಿ ಸದಸ್ಯ ಪಿ. ರಾಮಯ್ಯ ಅಧ್ಯಕ್ಷತೆ ವಹಿಸಿದ್ದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್. ಶ್ರೀಧರ್ ಬೇಡಿಕೆಗಳನ್ನು ಮುಖ್ಯಮಂತ್ರಿಗೆ ಸಲ್ಲಿಸಿದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್, ಡಿಎಸ್ ಮ್ಯಾಕ್ಸ್ ಪ್ರಾಪರ್ಟೀಸ್ ನಿರ್ದೇಶಕ ದಯಾನಂದ್ ಎಸ್.ಪಿ., ಶಾಸಕರಾದ ಅಜಯ್ ಸಿಂಗ್, ಗೋವಿಂದರಾಜು, ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ ಇದ್ದರು.

ಮೂವರು ಪೊಲೀಸ್ ಮಾಹಿತಿದಾರರ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಪ್ಯಾರಾ ಮೆಡಿಕಲ್ ವಿದ್ಯಾರ್ಥಿಯೊಬ್ಬನನ್ನು ಅಪಹರಿಸಿ ಹಣ ಸುಲಿಗೆ ಮಾಡಿದ್ದ ಮೂವರು ಆರೋಪಿಗಳನ್ನು ಸದಾಶಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಯಶವಂತಪುರದ ರಾಕೇಶ್ ಸಿ. ಸೆಬೆನವರ್ (26), ಮಾಗಡಿ ರಸ್ತೆ ಟೋಲ್ ಗೇಟ್ ಬಳಿಯ ಲೋಕೇಶ್ ಕುಮಾರ್ ಸಾಹು (20), ವಿದ್ಯಾರಣ್ಯಪುರ ನಿವಾಸಿ ಅರುಣ್ ಕುಮಾರ್ (27) ಬಂಧಿತ ಆರೋಪಿಗಳು.

ಬಂಧಿತರಿಂದ 4 ಮೊಬೈಲ್‌ಗಳು, 1 ಕಾರು, 1 ಬೈಕ್ ಜಪ್ತಿ ಮಾಡಿಕೊಳ್ಳಲಾಗಿದೆ. ಮೂವರು ಸೇರಿಕೊಂಡು ಮಿಶಾನ್ ಡಿಮಿಲೊ ಎಂಬ ಪ್ಯಾರಾ ಮೆಡಿಕಲ್ ವಿದ್ಯಾರ್ಥಿಯನ್ನು ಅಪಹರಣ ಮಾಡಿದ್ದರು.

ಸದಾಶಿವನಗರದಮೆಡಿಕಲ್‌ಕಾಲೇಜಿನಲ್ಲಿ ಮಿಶಾನ್ ಪ್ಯಾರಾ ಮೆಡಿಕಲ್ ಕಲಿಯುತ್ತಿದ್ದಾರೆ. ಜುಲೈ 16ರಂದು ರಾತ್ರಿ ಅದೇ ಕಾಲೇಜಿನಲ್ಲಿ ನರ್ಸಿಂಗ್ ಕಲಿಯುತ್ತಿದ್ದ ವಿದ್ಯಾರ್ಥಿಯೊಬ್ಬನ ನೆರವಿನಿಂದ ಕಾರಿನಲ್ಲಿ ಅಪಹರಿಸಿದ್ದರು.

'ತಾವು ಸೈಬರ್ ಠಾಣೆ ಪೊಲೀಸರು. ನೀನು ಮಾದಕ ವಸ್ತು ಮಾರಾಟ ಮಾಡುತ್ತಿರುವ ಮಾಹಿತಿ ಬಂದಿದೆ. ಠಾಣೆಗೆ ಕರೆದೊಯ್ಯುತ್ತಿದ್ದೇವೆ ಎಂದು ಹೇಳಿ ಕಾರಿನಲ್ಲಿ ಹತ್ತಿಸಿಕೊಂಡಿದ್ದರು. ಬಳಿಕ ವಿದ್ಯಾರ್ಥಿಯ ಮೊಬೈಲ್ ಕಸಿದುಕೊಂಡಿದ್ದರು. ಬಳಿಕ ಫೋನ್ ಪೇ ಮೂಲಕ ₹ 1.71 ಲಕ್ಷ ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಂಡು ನ್ಯೂ ಬಿಇಎಲ್ ವೃತ್ತದ ಬಳಿ ಇಳಿಸಿ ಪರಾರಿಯಾಗಿದ್ದರು' ಎಂದು ಪೊಲೀಸರು ಹೇಳಿದರು.

ಆರೋಪಿಗಳು ಪೊಲೀಸ್ ಬಾತ್ಮೀದಾರರಾಗಿದ್ದು, ಠಾಣಾ ವ್ಯಾಪ್ತಿಯಲ್ಲಿ ನಡೆಯುತ್ತಿದ್ದ ಅಪರಾಧ ಪ್ರಕರಣಗಳ ಮಾಹಿತಿ ನೀಡುತ್ತಿದ್ದರು. ಹೀಗಾಗಿಯೇ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ಶ್ರೀಮಂತರ ಮಕ್ಕಳ ಬಗ್ಗೆ ಮಾಹಿತಿ ತಿಳಿದುಕೊಂಡಿದ್ದರು. ಮಿಶಾನ್ ಡಿಮಿಲೋ ಅವರ ತಂದೆ ವಿದೇಶದಲ್ಲಿ ಉದ್ದಿಮೆ ನಡೆಸುವುದು ತಿಳಿದಿತ್ತು. ಅದನ್ನು ಅರಿತು ಆ ವಿದ್ಯಾರ್ಥಿ ಅಪಹರಣಕ್ಕೆ ಯೋಜನೆ ರೂಪಿಸಿದ್ದರು ಎಂದರು.

₹250 ಕೋಟಿ ಮೌಲ್ಯದ ಸರ್ಕಾರಿ ಜಮೀನು ಕಬಳಿಕೆ

7 ಪ್ರಕರಣಗಳ ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ತಾಲ್ಲೂಕು ಜಾಲ ಹೋಬಳಿಯ ವಿವಿಧ ಗ್ರಾಮಗಳಲ್ಲಿ ದಾಖಲೆಗಳನ್ನು ತಿರುಚಿ ₹ 250 ಕೋಟಿಗೂ ಹೆಚ್ಚು ಮೌಲ್ಯದ 41 ಎಕರೆ 27 ಗುಂಟೆ ಸರ್ಕಾರಿ ಜಮೀನುಗಳ ಕಬಳಿಕೆಯಾಗಿರುವ ಏಳು ಪ್ರಕರಣಗಳ ಕುರಿತು ತನಿಖೆ ನಡೆಸುವಂತೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಆದೇಶಿಸಿದ್ದಾರೆ.

'ಜಾಲ ಹೋಬಳಿಯ ವಿವಿಧ ಗ್ರಾಮಗಳಲ್ಲಿ 'ಸರ್ಕಾರಿ' ಎಂದು ದಾಖಲೆಗಳಲ್ಲಿ ನಮೂದಾಗಿದ್ದ, ಸರ್ಕಾರದ ಸ್ವಾಧೀನದಲ್ಲಿದ್ದ ಜಮೀನುಗಳನ್ನು ಅಕ್ರಮವಾಗಿ ಖಾಸಗಿಯವರ ಹೆಸರಿಗೆ ವರ್ಗಾಯಿಸಲಾಗಿದೆ. ನೈಜವಲ್ಲದ ದಾಖಲೆಗಳ ಆಧಾರದಲ್ಲಿ ಸರ್ಕಾರಿ ಜಮೀನುಗಳನ್ನು ಭೂಗಳ್ಳರ ಹೆಸರಿಗೆ ಪರಭಾರೆ ಮಾಡಿರುವುದು ಕಂಡುಬಂದಿದೆ. ಈ ಸಂಬಂಧ ಸರಣಿ ಸಭೆಗಳನ್ನು ನಡೆಸಿ, ಪರಿಶೀಲನೆ ನಡೆಸಲಾಗಿದೆ. ಈ ಪ್ರಕರಣಗಳ ಕುರಿತು ತನಿಖೆ ನಡೆಸುವಂತೆ ಆದೇಶಿಸಲಾಗಿದೆ' ಎಂದು ಸಚಿವರ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

> **ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಆದೇಶ**
>
> 'ಸರ್ಕಾರಿ ಜಮೀನುಗಳು ಹೇಗೆ ಖಾಸಗಿಯವರ ಪಾಲಾಗಿದ್ದವು ಎಂಬುದರ ಕುರಿತು ತನಿಖೆ ನಡೆಸಬೇಕು. ದಾಖಲೆಗಳ ನೈಜತೆ ಪರಿಶೀಲಿಸಬೇಕು. ನಕಲಿ ದಾಖಲೆಗಳನ್ನು ಸೃಷ್ಟಿಸಿರುವುದು, ಉದ್ದೇಶಪೂರ್ವಕವಾಗಿ ಭೂಗಳ್ಳರ ಪರ ವರದಿ ನೀಡಿರುವ ಬಗ್ಗೆಯೂ ತನಿಖೆ ನಡೆಸಬೇಕು' ಎಂದು ಸಚಿವ ಕೃಷ್ಣ ಬೈರೇಗೌಡ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಆದೇಶಿಸಿದ್ದಾರೆ.
>
> ಅಕ್ರಮದಲ್ಲಿ ಭಾಗಿಯಾದ ಅಧಿಕಾರಿಗಳು ಹಾಗೂ ವ್ಯಕ್ತಿಗಳ ಕುರಿತು ತಿಂಗಳೊಳಗೆ ವರದಿ ನೀಡಬೇಕು. ಭೂಗಳ್ಳರ ಪಾಲಾಗಿರುವ ಸರ್ಕಾರಿ ಜಮೀನುಗಳನ್ನು ವಶಕ್ಕೆ ಪಡೆಯಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದ್ದಾರೆ.

ನವರತ್ನ ಅಗ್ರಹಾರ ಗ್ರಾಮದ ಸರ್ವೆ ನಂಬರ್ 30ರಲ್ಲಿ 5 ಎಕರೆ 09 ಗುಂಟೆ ಮತ್ತು ಸರ್ವೆ ನಂಬರ್ 13ರಲ್ಲಿ 5 ಎಕರೆ ಸರ್ಕಾರಿ ಜಮೀನು ಕಬಳಿಕೆಯಾಗಿದೆ. ಇದರ ಮೌಲ್ಯ ₹ 25 ಕೋಟಿ ಇದೆ. ಹುಣಸಮಾರನಹಳ್ಳಿ ಗ್ರಾಮದ ಸರ್ವೆ ನಂಬರ್ 179 ರಲ್ಲಿ 13 ಎಕರೆ ಸರ್ಕಾರಿ ಜಮೀನು ಕಬಳಿಕೆಯಾಗಿದ್ದು, ಇದರ ಮೌಲ್ಯ ಸುಮಾರು ₹ 120 ಕೋಟಿ ಇದೆ. ಕಾಡಗಾನಹಳ್ಳಿ ಗ್ರಾಮದ ಸರ್ವೆ ನಂಬರ್ 23ರಲ್ಲಿ ₹ 6 ಕೋಟಿ ಮೌಲ್ಯದ 1 ಎಕರೆ ಜಮೀನು ಕಬಳಿಕೆಯಾಗಿರುವುದು ಕಂಡುಬಂದಿದೆ ಎಂದು ತಿಳಿಸಿದ್ದಾರೆ.

ಕುದುರೆಗೆರೆ ಗ್ರಾಮದ ಸರ್ವೆ ನಂಬರ್ 55 ರಲ್ಲಿ 1 ಎಕರೆ 30 ಗುಂಟೆ ಹಾಗೂ ಇದೇ ಗ್ರಾಮದ ಸರ್ವೆ ನಂಬರ್ 59ರಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಮಂಜೂರಾಗಿದ್ದ 7 ಎಕರೆ 5 ಗುಂಟೆ ಜಮೀನು ಖಾಸಗಿಯವರ ಹೆಸರಿಗೆ ಆಗಿದೆ. ಇದರ ಒಟ್ಟು ಮೌಲ್ಯ ₹ 25 ಕೋಟಿ. ಕಟ್ಟಿಗೇನಹಳ್ಳಿ ಸರ್ವೆ ನಂಬರ್ 28ರಲ್ಲಿ ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಮಂಜೂರಾದ 4 ಎಕರೆ ಸೇರಿದಂತೆ ₹ 60 ಕೋಟಿ ಮೌಲ್ಯದ ಒಟ್ಟು 6 ಎಕರೆ ಸರ್ಕಾರಿ ಜಮೀನು ಕಬಳಿಕೆಯಾಗಿದೆ ಎಂದು ವಿವರ ನೀಡಿದ್ದಾರೆ.

ತಿರುಮೇನಹಳ್ಳಿ ಗ್ರಾಮದ ಸರ್ವೆ ನಂಬರ್ 42ರಲ್ಲಿ ₹ 22 ಕೋಟಿ ಮೌಲ್ಯದ 2 ಎಕರೆ 12 ಗುಂಟೆ ಜಮೀನನ್ನು ಖಾಸಗಿಯವರ ಹೆಸರಿಗೆ ಮಂಜೂರು ಮಾಡುವ ಪ್ರಯತ್ನ ನಡೆದಿದೆ. ಬೈಯಪ್ಪನಹಳ್ಳಿ ಗ್ರಾಮದ ಸರ್ವೆ ನಂಬರ್ 80ರಲ್ಲಿ 23 ಎಕರೆ 20 ಗುಂಟೆ ಜಮೀನನ್ನು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಮಂಜೂರು ಮಾಡಲಾಗಿದೆ. ಅದರಲ್ಲಿ 10 ಎಕರೆ ವಿಸ್ತೀರ್ಣದಲ್ಲಿ ಕಲ್ಲು ಬಂಡೆ ಇದ್ದು, ಆ ಪೈಕಿ 2 ಎಕರೆ 20 ಗುಂಟೆಯ ಪಹಣಿ ಖಾಸಗಿ ವ್ಯಕ್ತಿಗಳ ಹೆಸರಿಗೆ ಬದಲಿಸಲಾಗಿದೆ. ಇನ್ನೂ 3 ಎಕರೆ ಜಮೀನಿನ ಪರಭಾರೆಗೆ ಪ್ರಯತ್ನಿಸುತ್ತಿರುವ ಮಾಹಿತಿ ಇದೆ ಎಂದು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಕಾನೂನು ವಿ.ವಿ: ಪರಿಶೀಲನಾ ಸಮಿತಿ ಕಾರ್ಯಾಚರಣೆಗೆ ತಡೆ

ಬೆಂಗಳೂರು: ಕರ್ನಾಟಕ ಕಾನೂನು ವಿಶ್ವವಿದ್ಯಾಲಯದ ಕುಲಪತಿ ನೇಮಿಸಿರುವ ಸ್ಥಳೀಯ ಪರಿಶೀಲನಾ ಸಮಿತಿಯು ರಾಜ್ಯದ ಕಾನೂನು ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲನಾ ಕಾರ್ಯ ನಡೆಸುವುದಕ್ಕೆ ಹೈಕೋರ್ಟ್ ತಾತ್ಕಾಲಿಕ ನಿರ್ಬಂಧ ಹೇರಿದೆ.

ಈ ಸಂಬಂಧ ವಿವಿ ಸಿಂಡಿಕೇಟ್ ಸದಸ್ಯ ಬಿ.ಜಿ. ರವಿಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಮಧ್ಯಂತರ ಆದೇಶ ಹೊರಡಿಸಿದೆ.

ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಕಾನೂನು ವಿಶ್ವವಿದ್ಯಾಲಯ ಹಾಗೂ ವಿಶ್ವವಿದ್ಯಾಲಯದ ಸಹಾಯಕ ರಿಜಿಸ್ಟ್ರಾರ್ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದೆ.

ಅರ್ಜಿಯಲ್ಲಿ ಏನಿದೆ?: ಹೊಸ ಕಾನೂನು ಕಾಲೇಜುಗಳ ಮಾನ್ಯತೆ ಮಂಜೂರು ಮಾಡಲು ಕೋರಿದ ಅರ್ಜಿ ಮತ್ತು ಮಾನ್ಯತೆ ನವೀಕರಣಕ್ಕೆ ಕೋರಿ ಸಲ್ಲಿಸಿದ ಅರ್ಜಿಗಳನ್ನು ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ, ಸದಸ್ಯರೊಂದಿಗೆ ಚರ್ಚಿಸಿದ ನಂತರ ನಿರ್ಧಾರ ಪಡೆದು ಕೊಳ್ಳಬೇಕಿದೆ. ಆದರೆ, ಕಳೆದ ಆರು ತಿಂಗಳಿಂದಲೂ ವಿವಿ ಕುಲಪತಿಗಳು ಸಿಂಡಿಕೇಟ್ ಸಭೆ ನಡೆಸಿಲ್ಲ. ಅಲ್ಲದೆ, ಕಾಲೇಜುಗಳ ಪರಿಶೀಲನೆಗೆ ಸ್ಥಳೀಯ ಪರಿಶೀಲನಾ ಸಮಿತಿ ರಚಿಸಿ ಏಕಪಕ್ಷೀಯ ನಿರ್ಧಾರ ಕೈಗೊಂಡಿದ್ದಾರೆ.

ಅದ್ದರಿಂದ, 2023ರ ಜುಲೈ 11ರಂದು ಕುಲಪತಿ ನೇಮಕ ಮಾಡಿರುವ ಸ್ಥಳೀಯ ಪರಿಶೀಲನಾ ಸಮಿತಿ ರದ್ದುಪಡಿಸಬೇಕು. ಅರ್ಜಿ ಇತ್ಯರ್ಥವಾಗುವವರೆಗೆ ಸಮಿತಿಯ ಕಾರ್ಯ ನಿರ್ವಹಣೆಗೆ ನಿರ್ಬಂಧ ಹೇರಬೇಕು ಎಂದು ಅರ್ಜಿದಾರರು ಕೋರಿದ್ದಾರೆ.



ಮೆಟ್ರೊದಲ್ಲಿ ಪ್ರಯಾಣಿಸುವಾಗ ವೃದ್ಧ ಸಾವು

ಬಿಎಂಆರ್‌ಸಿಎಲ್ ಸಿಬ್ಬಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ರೈಲಿನಲ್ಲಿ ಪ್ರಯಾಣಿಸುವ ವೇಳೆ ವೃದ್ಧರೊಬ್ಬರು ಕುಸಿದುಬಿದ್ದು ಸಾವನ್ನಪ್ಪಿದ ಪ್ರಕರಣ ಸಂಬಂಧ ಬಿಎಂಆರ್‌ಸಿಎಲ್ ಸಿಬ್ಬಂದಿ ಹಾಗೂ ಅಧಿಕಾರಿಗಳ ವಿರುದ್ಧ ಬೈಯಪ್ಪನಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಆಗಿರುವ ಟಿ.ಮುತ್ತುರಾಜು ಅವರ ತಂದೆ ತಿಮ್ಮೇಗೌಡ (67) ಮೃತಪಟ್ಟವರು. ತಿಮ್ಮೇಗೌಡ ಅವರದ್ದು ಚಾಮರಾಜನಗರ ಜಿಲ್ಲೆಯ ಕಂಡಯ್ಯನಪಾಳ್ಯ ಗ್ರಾಮ.

ಬಿಎಂಆರ್‌ಸಿಎಲ್ ಅಧಿಕಾರಿಗಳು ಹಾಗೂ ಸಿಬ್ಬಂದಿ ನಿರ್ಲಕ್ಷ್ಯದಿಂದ ಸಾವು ಸಂಭವಿಸಿದ್ದು ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕೋರಿ ದೂರು ನೀಡಲಾಗಿದೆ.

'ತಿಮ್ಮೇಗೌಡ ಅವರು ಮಗನ ಮನೆಗೆ ಬಂದಿದ್ದರು. ಜುಲೈ 20ರಂದು ಊರಿಗೆ ವಾಪಸ್ ತೆರಳಲು ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣಕ್ಕೆ ಬಂದಿದ್ದರು. ಮಾರ್ಗ ಮಧ್ಯದಲ್ಲಿ ಮೆಟ್ರೊ ರೈಲಿನ ಒಳಗೆ ಕುಸಿದು ಬಿದ್ದಿದ್ದರು. ಅದನ್ನು ಪ್ರಯಾಣಿಕರು ಎಂ.ಜಿ ರಸ್ತೆ ನಿಲ್ದಾಣದಲ್ಲಿ ಇಳಿಸಿದ್ದರು. ನಿಲ್ದಾಣದಲ್ಲಿದ್ದ ಪ್ರಯಾಣಿಕರೇ ಅವರನ್ನು ಆಟೊದಲ್ಲಿ ಕರೆದೊಯ್ದು ಇನ್‌ಫೆಂಟ್ರಿ ರಸ್ತೆಯ ಸ್ಪರ್ಶ ಆಸ್ಪತ್ರೆಗೆ ದಾಖಲಿಸಿದ್ದರು' ಎಂದು ದೂರಿನಲ್ಲಿ ತಿಳಿಸಲಾಗಿದೆ.

'ಮೆಟ್ರೊ ರೈಲಿನ ಒಳಗಡೆ ಮೆಟ್ರೊ ಅಧಿಕಾರಿಗಳು ಹಾಗೂ ಸಿಬ್ಬಂದಿ ನೆರವಿಗೆ ಬಂದಿಲ್ಲ. ಯಾವುದೇ ರೀತಿಯ ವೈದ್ಯಕೀಯ ನೆರವು ಕಲ್ಪಿಸಿಲ್ಲ. ಕುಸಿದು ಬಿದ್ದವರನ್ನು ಹೊರಗೆ ಕರೆತಂದು ಆಸ್ಪತ್ರೆಗೆ ಸೇರಿಸುವ ಪ್ರಯತ್ನವನ್ನೂ ಮಾಡಿಲ್ಲ. ಮಹಾತ್ಮ ಗಾಂಧಿ ರಸ್ತೆಯ ಮೆಟ್ರೊ ನಿಲ್ದಾಣದಲ್ಲಿ 15ರಿಂದ 20 ನಿಮಿಷವಿದ್ದರೂ ಸಿಬ್ಬಂದಿ ಸ್ಪಂದಿಸಿಲ್ಲ. ಅವರನ್ನು ತಕ್ಷಣವೇ ಆಸ್ಪತ್ರೆಗೆ ಕರೆದೊಯ್ಯಿ ಸೇರಿಸಿದ್ದರೆ ಸಮಸ್ಯೆ ಆಗುತ್ತಿರಲಿಲ್ಲ. ಆಂಬುಲೆನ್ಸ್ ವ್ಯವಸ್ಥೆಯನ್ನೂ ಮಾಡಲಿಲ್ಲ. ಆಸ್ಪತ್ರೆಗೆ ಆಟೊದಲ್ಲಿ ಕರೆದೊಯ್ಯುವಷ್ಟರಲ್ಲಿ ಸ್ಥಿತಿಯಲ್ಲಿದ್ದರು' ಎಂದು ಆಪಾದಿಸಿದ್ದಾರೆ.

ಮದುವೆಗೆ ಪ್ರೇಯಸಿ ನಿರಾಕರಣೆ: ಯುವಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ



ನವೀನ್

ಬೆಂಗಳೂರು: ಪ್ರೀತಿಸಿದ ಯುವತಿ ಮದುವೆಯಾಗಲು ನಿರಾಕರಿಸಿದ ಕಾರಣಕ್ಕೆ ಯುವಕನೊಬ್ಬ ಜೆಪಿನಗರದಲ್ಲಿ ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆದಿದೆ.

ನವೀನ್ (27) ಆತ್ಮಹತ್ಯೆ ಮಾಡಿಕೊಂಡ ಯುವಕ. ಚಾಮರಾಜನಗರ ಜಿಲ್ಲೆಯ ಚಿಕ್ಕಲೂರಿನ ನವೀನ್, ತಮ್ಮ ಸಂಬಂಧಿಕರೊಂದಿಗೆ ಮಹಾಲಕ್ಷ್ಮಿ ಪೊಲೀಸ್ ಠಾಣಾ ವ್ಯಾಪ್ತಿಯ ಜೆಪಿ ನಗರದಲ್ಲಿ ನೆಲೆಸಿದ್ದರು.

ಬಾಳೆಕಾಯಿ ವ್ಯಾಪಾರ ನಡೆಸುತ್ತಿದ್ದ ಅವರು ಮನೆಯಲ್ಲಿ ಯಾರೂ ಇಲ್ಲದ ವೇಳೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

'ನವೀನ್‌ಗೆ ಯುವತಿಯ ಪರಿಚಯವಾಗಿತ್ತು, ಅಕೆಯನ್ನು ಪ್ರೀತಿಸುತ್ತಿದ್ದರು. ಜೊತೆಯಾಗಿ ಸುತ್ತಾಟ ನಡೆಸಿದ್ದರು. ಮದುವೆ ವಿಚಾರ ಬಂದಾಗ ಆಕೆ ನಿರಾಕರಿಸಿದ್ದಳು ಎಂಬ ಕಾರಣಕ್ಕೆ ಮರಣ ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಕುಟುಂಬಸ್ಥರು ಅಳಲು ತೋಡಿಕೊಂಡಿದ್ದಾರೆ.

'ಮರಣ ಪತ್ರದಲ್ಲಿ ಆಕೆಯ ಹೆಸರು ಉಲ್ಲೇಖಿಸಲಾಗಿದೆ. ನಿನ್ನನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದೆ. ಸಾಯುವ ತನಕ ಜೊತೆಗ್ಗಿರಿ ಸಾಕುತ್ತೇನೆ ಎಂದರೂ ನನ್ನ ಪ್ರೀತಿಯನ್ನು ಆಕೆ ನಿರಾಕರಿಸಿದಳು. ಆಕೆ ಇಲ್ಲದೇ ನಾನು ಬದುಕಿರಲಾರೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

ಇಂದು ಪೊಲೀಸ್ ಅಧಿಕಾರಿಗಳ ಸಭೆ

ಬೆಂಗಳೂರು: ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಪರಿಶೀಲಿಸುವ ಸಂಬಂಧ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಅಲೋಕ್ ಮೋಹನ್ ಅವರು ಜುಲೈ 25ರಂದು ಸಂಜೆ 4ಕ್ಕೆ ಎಲ್ಲ ಪೊಲೀಸ್ ಅಧಿಕಾರಿಗಳ ಜತೆಗೆ ವಿಡಿಯೊ ಸಂವಾದ ನಡೆಸಲಿದ್ದಾರೆ.

ಎಲ್ಲ ವಲಯ ಐಜಿಪಿಗಳು, ಹೆಚ್ಚುವರಿ ಪೊಲೀಸ್ ಕಮಿಷನರ್‌ಗಳು, ಜಂಟಿ ಪೊಲೀಸ್ ಕಮಿಷನರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಈ ವಿಡಿಯೊ ಸಂವಾದದಲ್ಲಿ ಪಾಲ್ಗೊಳ್ಳಲಿದ್ದಾರೆ.

ಸಾಮಾಜಿಕ ಮಾಧ್ಯಮಗಳ ನಿರ್ವಹಣೆ ಘಟಕ ಬಲವರ್ಧನೆ, ಕಾನೂನು ಸುವ್ಯವಸ್ಥೆ ಪರಿಶೀಲನೆ, ಕಳೆದ ಎರಡು ತಿಂಗಳಲ್ಲಿ ತಮ್ಮ ವ್ಯಾಪ್ತಿಯಲ್ಲಿ ನಡೆದಿರುವ ಅಪರಾಧ ಪ್ರಕರಣಗಳು ಹಾಗೂ ಆರೋಪಿಗಳ ಪತ್ತೆಗೆ ಕೈಗೊಂಡಿರುವ ಕ್ರಮ, ಕಾರ್ಯಾಚರಣೆ ವಿಧಾನ, ಎರಡು ತಿಂಗಳ ಅವಧಿಯಲ್ಲಿ ಠಾಣೆಗಳಿಗೆ ಭೇಟಿ ನೀಡಿದ್ದ ವಿವರ, ರೌಡಿ ಚಟುವಟಿಕೆ ನಿಗ್ರಹಕ್ಕೆ ಕೈಗೊಂಡ ಕ್ರಮಗಳ ಕುರಿತು ಸಭೆಯಲ್ಲಿ ಮಾಹಿತಿ ನೀಡುವಂತೆ ಅಲೋಕ್ ಮೋಹನ್ ಸೂಚಿಸಿದ್ದಾರೆ.

ಕೆಎಸ್‌ಆರ್‌ಪಿ: ಅಧಿಕಾರಿಗಳ ಮೇಲೆ ಲಂಚದ ಆರೋಪ

ಬೆಂಗಳೂರು: ಕರ್ನಾಟಕ ರಾಜ್ಯ ಮೀಸಲು ಪಡೆ (ಕೆಎಸ್‌ಆರ್‌ಪಿ) ರಜೆ ಸೇರಿದಂತೆ ಹಲವು ಸೌಲಭ್ಯಗಳನ್ನು ಪಡೆಯಲು ಹಿರಿಯ ಅಧಿಕಾರಿಗಳು ಲಂಚ ಪಡೆಯುತ್ತಿದ್ದಾರೆ ಎಂದು ಆರೋಪಿಸಿ ಎಡಿಜಿಪಿಗೆ ಸಿಬ್ಬಂದಿಯೊಬ್ಬರು ದೂರು ನೀಡಿದ್ದಾರೆ. ಆ ದೂರಿನ ಪ್ರತಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಕುದ್ದುನಲ್ಲಿರುವ 9ನೇ ಕೆಎಸ್‌ಆರ್‌ಪಿ ತುಕಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಿ. ಓಂಕಾರ್ ಅವರು ಐದು ಮಂದಿ ಮೇಲಾಧಿಕಾರಿಗಳ ವಿರುದ್ಧ 11 ಅಂಶಗಳನ್ನು ಉಲ್ಲೇಖಿಸಿ, ಕೆಎಸ್‌ಆರ್‌ಪಿ ಎಡಿಜಿಪಿಗೆ ದೂರು ಸಲ್ಲಿಸಿದ್ದಾರೆ.

ಕೆಎಸ್‌ಆರ್‌ಪಿಯ ಕೆಲವು ಹಿರಿಯ ಅಧಿಕಾರಿಗಳು ಕೆಳ ಹಂತದ ಅಧಿಕಾರಿಗಳಿಂದಲೇ ಲಂಚ ಪಡೆಯುತ್ತಿದ್ದಾರೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

'ಹೆಚ್ಚಿನ ರಜೆ ಬೇಕಾದಲ್ಲಿ ಹಣ ನೀಡಬೇಕು. ರಜೆಯಲ್ಲಿದ್ದರೆ ಪ್ರತಿ ದಿನಕ್ಕೆ ₹ 500ರಂತೆ ಹಣ ನೀಡಬೇಕು, ಹಣದ ಜತೆಗೆ ಖಾಲಿ ಹಾಳೆ ಮೇಲೆ ಸಹಿ ಮಾಡಿಸಿಕೊಳ್ಳುತ್ತಾರೆ. ಹಣ ಕೊಡದಿದ್ದರೆ ಪರೇಡ್ ಮಾಡಿಸಿ ಕಿರುಕುಳ ನೀಡುತ್ತಾರೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಹಣ ಪಡೆದು ಕೆಲವು ಸಿಬ್ಬಂದಿಗೆ ಊರಿನಲ್ಲಿರಲು ಅವಕಾಶ ನೀಡುತ್ತಿದ್ದಾರೆ ಎಂದು ಓಂಕಾರಪ್ಪ ನಾಲ್ಕು ಪುಟಗಳ ದೂರಿನಲ್ಲಿ ಉಲ್ಲೇಖ ಮಾಡಿದ್ದಾರೆ. ಪತ್ರದ ಕುರಿತು ತನಿಖೆ ನಡೆಸಲಾಗುವುದು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಬಹುತೇಕ ಬೇಡಿಕೆಗಳ ಈಡೇರಿಸಲು ಒಪ್ಪಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ

ಖಾಸಗಿ ಸಂಘಗಳ ಮುಷ್ಕರ ವಾಪಸ್

ಪ್ರಜಾವಾಣಿ ವಾರ್ತೆ



ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಸೋಮವಾರ ಖಾಸಗಿ ಸಾರಿಗೆ ಸಂಸ್ಥೆಗಳು ಮತ್ತು ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟದಿಂದ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರಿಗೆ ಮನವಿ ಸಲ್ಲಿಸಲಾಯಿತು – ಪ್ರಜಾವಾಣಿ ಚಿತ್ರ

ಬೆಂಗಳೂರು: ಖಾಸಗಿ ಬಸ್, ಟ್ಯಾಕ್ಸಿ, ಮ್ಯಾಕ್ಸಿಕ್ಯಾಬ್, ಆಟೊ ಚಾಲಕ–ಮಾಲೀಕರರು ಮತ್ತು ಅಧಿಕಾರಿಗಳೊಂದಿಗೆ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಸಭೆ ಫಲಪ್ರದವಾಗಿದೆ. ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಜುಲೈ 27ರಂದು ನಡೆಸಲು ಉದ್ದೇಶಿಸಿದ ಮುಷ್ಕರವನ್ನು ಖಾಸಗಿ ಸಾರಿಗೆ ಸಂಘಗಳ ಒಕ್ಕೂಟ ವಾಪಸ್ ಪಡೆದಿದೆ.

ರ್‍ಯಾಪಿಡೊ ಬೈಕ್, ಟ್ಯಾಕ್ಸಿಗಳನ್ನು ಸಂಪೂರ್ಣವಾಗಿ ನಿಷೇಧಿಸಬೇಕು, ರ್‍ಯಾಪಿಡೊ, ಓಲಾ, ಉಬರ್ ಇನ್ನಿತರ ಆನ್‌ಲೈನ್ ಕಂಪನಿಗಳಿಗೆ ಇ–ರಿಕ್ಷಾ ನೋಂದಣಿಯನ್ನು ನಿಷೇಧಿಸಬೇಕು. ಎಲೆಕ್ಟ್ರಿಕಲ್ ಆಟೊ ರಿಕ್ಷಾಗಳಿಗೆ ಆಟೊ ರಹದಾರಿ ನೀಡಬೇಕು. ಚಾಲಕರಿಗೆ ಮಾಸಿಕ ₹ 10,000 ಪರಿಹಾರ ನೀಡಬೇಕು. ಸುಲಭ ಕಂತುಗಳಲ್ಲಿ ₹ 2 ಲಕ್ಷದವರೆಗೆ ಸಾಲ ಒದಗಿಸಬೇಕು. ಅಸಂಘಟಿತ ವಾಣಿಜ್ಯ ಚಾಲಕರ ಮತ್ತು ಸಾರಿಗೆ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು ಎಂದು ಆಟೊ ಚಾಲಕ ಮಾಲೀಕರ ಸಂಘ ಒತ್ತಾಯಿಸಿತು.

ರ್‍ಯಾಪಿಡೊದಂಥ ಆ್ಯಪ್ ಕಂಪನಿಗಳಿಗೆ ಸಂಬಂಧಿಸಿದ ಪ್ರಕರಣ ನ್ಯಾಯಾಲಯದಲ್ಲಿದೆ. ಅದನ್ನು ಬೇಗ ಇತ್ಯರ್ಥಗೊಳಿಸಿ ರ್‍ಯಾಪಿಡೊ ನಿಷೇಧಕ್ಕೆ ಕ್ರಮ ಕೈಗೊಳ್ಳಲಾಗುವುದು. ಉಳಿದ ಬೇಡಿಕೆಗಳನ್ನು ಹಂತ ಹಂತವಾಗಿ ನೆರವೇರಿಸಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಚಾಲಕರಿಗೆ ವಸತಿ ಯೋಜನೆ ರೂಪಿಸಬೇಕು. ಕಾರು ಖರೀದಿಗೆ ಸಬ್ಸಿಡಿ ನೀಡಬೇಕು. ಬಿಳಿ ಫಲಕಗಳ ವಾಹನಗಳಲ್ಲಿ ಬಾಡಿಗೆ ನಡೆಸುವವರ ವಿರುದ್ಧ ಪ್ರಕರಣ ದಾಖಲಿಸಬೇಕು. ಚಾಲಕರ ಮಕ್ಕಳಿಗೆ ವಿದ್ಯಾರ್ಥಿವೇತನ, ಧನಸಹಾಯ ನೀಡಬೇಕು. ಶೇ 5ಕ್ಕಿಂತ ಅಧಿಕ ಕಮಿಷನ್ ಪಡೆಯುವ ಆನ್‌ಲೈನ್ ಕಂಪನಿಗಳನ್ನು ನಿರ್ಬಂಧಿಸಬೇಕು ಎಂದು ಟ್ಯಾಕ್ಸಿ ಮಾಲೀಕರ ಮತ್ತು ಚಾಲಕರ ಸಂಘಟನೆಗಳು ಒತ್ತಾಯಿಸಿದವು.

ಶಕ್ತಿ ಯೋಜನೆ ಜಾರಿಯಾಗಿರುವುದರಿಂದ ಖಾಸಗಿ ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗಿದೆ. ಈ ಯೋಜನೆಯನ್ನು ಖಾಸಗಿ ಬಸ್‌ಗಳಲ್ಲಿಯೂ ಜಾರಿ ಮಾಡಬೇಕು. ಇಲ್ಲದೇ ಇದ್ದರೆ ರಸ್ತೆ ತೆರಿಗೆ ಸಂಪೂರ್ಣ ರದ್ದು ಮಾಡಬೇಕು. ಸರ್ಕಾರಿ ಬಸ್‌ಗಳಲ್ಲಿ ನಿರ್ದಿಷ್ಟ ಸೀಟುಗಳಿಗಿಂತ ಅಧಿಕ ಪ್ರಮಾಣದಲ್ಲಿ ಪ್ರಯಾಣಿಕರನ್ನು ಒಯ್ಯುವುದನ್ನು ನಿಲ್ಲಿಸಬೇಕು. ಟೂರಿಸ್ಟ್ ಮತ್ತು ಕಾಂಟ್ರಾಕ್ಟ್ ಕ್ಯಾರೇಜ್ ಬಸ್‌ಗಳಿಗೆ ರಸ್ತೆ ತೆರಿಗೆ ಕಡಿತಗೊಳಿಸಬೇಕು ಎಂದು ಬಸ್ ಮಾಲೀಕರ ಮತ್ತು ಚಾಲಕರ ಸಂಘ ಬೇಡಿಕೆಯನ್ನಿಟ್ಟಿತು.

‘ಇಲಾಖಾ ವ್ಯಾಪ್ತಿಯಲ್ಲಿ ಪರಿಹರಿಸಬಹುದಾದ ಬೇಡಿಕೆಗಳನ್ನು ಈಡೇರಿಸಲಾಗುವುದು. ತೆರಿಗೆ ಕಡಿತ, ತೆರಿಗೆ ರದ್ದು, ಸಾರಿಗೆ ನಿಗಮಗಳ ಬಸ್‌ಗಳಿಗೆ ನೀಡುವಂತೆ ಖಾಸಗಿ ಬಸ್‌ಗಳಿಗೂ ಮರುಪಾವತಿ ನೀಡುವುದೆಲ್ಲ ಕಷ್ಟ. ಅವು ಆರ್ಥಿಕ ಇಲಾಖೆಗೆ ಸಂಬಂಧಿಸಿದ್ದಾಗಿರುವುದರಿಂದ ಮುಖ್ಯಮಂತ್ರಿಯವರು ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಆ.20ರ ಒಳಗೆ ಮುಖ್ಯಮಂತ್ರಿಗಳ ಜೊತೆಗೆ ಸಭೆ ನಡೆಸಲಾಗುವುದು’ ಎಂದು ರಾಮಲಿಂಗಾ ರೆಡ್ಡಿ ತಿಳಿಸಿದರು.

‘ಆ.20ರ ನಂತರ ತೀರ್ಮಾನ’

‘ನಮ್ಮ ಸಣ್ಣಪುಟ್ಟ ಭರವಸೆಗಳನ್ನು ಈಡೇರಿಸುವುದಾಗಿ ಸಾರಿಗೆ ಸಚಿವರು ಭರವಸೆ ನೀಡಿದ್ದಾರೆ. ಶಕ್ತಿಯೋಜನೆಯಿಂದ ಆಗುವ ತೊಂದರೆಯ ಬಗ್ಗೆ ಮತ್ತು ರಸ್ತೆ ತೆರಿಗೆ ವಿನಾಯಿತಿ ಬಗ್ಗೆ ಯಾವುದೇ ಭರವಸೆ ನೀಡಿಲ್ಲ. ಮುಖ್ಯಮಂತ್ರಿಗಳನ್ನು ಭೇಟಿ ಮಾಡಿಸುವುದಾಗಿ ಸಾರಿಗೆ ಸಚಿವರು ತಿಳಿಸಿದ್ದಾರೆ. ಸದ್ಯ ಮುಷ್ಕರವನ್ನು ಮುಂದೂಡಿದ್ದೇವೆ’ ಎಂದು ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟದ ಪದಾಧಿಕಾರಿಗಳಾದ ರಾಧಾಕೃಷ್ಣ ಹೊಳ್ಳ, ನಟರಾಜ್ ಶರ್ಮಾ ತಿಳಿಸಿದರು.

‘ಆ. 20ರ ಒಳಗೆ ನಮ್ಮ ಬೇಡಿಕೆಗಳಿಗೆ ಸ್ಪಂದಿಸದೇ ಇದ್ದರೆ ಆನಂತರ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

ನೆಲಮಂಗಲ: ಭೂಮಾಪಕರಿಂದ ರೈತರಿಗೆ ನಿಂದನೆ ಆರೋಪ

ಜಮೀನು ಹದ್ದುಬಸ್ತಿಗೆ ರೈತರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೆಲಮಂಗಲ ತಾಲ್ಲೂಕಿನಲ್ಲಿ ಕೃಷಿ ಜಮೀನಿನ ಹದ್ದುಬಸ್ತಿಗೆ ಅರ್ಜಿ ಸಲ್ಲಿಸಿದರೆ ಭೂಮಾಪನ ಇಲಾಖೆ ಅಧಿಕಾರಿಗಳು ಸಕಾರಣ ನೀಡದೇ ಅರ್ಜಿಗಳನ್ನು ಮುಕ್ತಾಯಗೊಳಿಸುತ್ತಿದ್ದಾರೆ’ ಎಂದು ರೈತರು ಅಳಲು ತೋಡಿಕೊಂಡಿದ್ದಾರೆ.

ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಯಿಂದ ನೂರಾರು ಮಂದಿಗೆ ಸಮಸ್ಯೆ ಎದುರಾಗಿದೆ ಎಂದು ಕೃಷಿಕರು ಹೇಳಿದ್ದಾರೆ.

‘ತಾಲ್ಲೂಕಿನ ಸೋಂಪುರ ಹೋಬಳಿ ವೀರಸಾಗರ ಗ್ರಾಮದಲ್ಲಿ ಸರ್ವೆ ನಂಬರ್: 50/2ರಲ್ಲಿ 19 ಗುಂಟೆ ಜಮೀನಿನ ಹದ್ದುಬಸ್ತು ಮಾಡಲು ಮೂರು ಬಾರಿ ಅರ್ಜಿ ಸಲ್ಲಿಕೆ ಮಾಡಲಾಗಿತ್ತು. ಭೂಮಾಪಕರು ಅಳತೆ ಕಾರ್ಯ ನಡೆಸದೇ ಹಾಗೂ ಯಾವುದೇ ಕಾರಣ ನೀಡದೇ ಅರ್ಜಿಯನ್ನು ವಿಲೇವಾರಿ ಮಾಡಿದ್ದಾರೆ. ಕಳೆದ ಏಳು ವರ್ಷಗಳಿಂದ ನಮ್ಮ ಸಮಸ್ಯೆಗೆ ಪರಿಹಾರ ಲಭಿಸಿಲ್ಲ’ ಎಂದು ಅರ್ಜಿದಾರ ವಿ.ಕೆ.ಮದನ್ ಆರೋಪಿಸಿದ್ದಾರೆ.

‘ನೆಲಮಂಗಲದ ಭೂದಾಖಲೆಗಳ ಸಹಾಯಕ ನಿರ್ದೇಶಕಿ ಎಚ್.ನಯನಾ ಅವರು ಜುಲೈ 18ರಂದು ಮೂರು ದಿನಗಳ ಒಳಗಾಗಿ 36(1) ಅಡಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಭೂದಾಖಲೆಗಳ ಉಪ ನಿರ್ದೇಶಕರ ಕಚೇರಿಗೆ ಪ್ರಸ್ತಾವ ಸಲ್ಲಿಸಲಾಗುವುದು ಎಂದು ಭರವಸೆ ನೀಡಿದ್ದರು. ಆದರೆ, ಇದುವರೆಗೂ ಪ್ರಸ್ತಾವ ಸಲ್ಲಿಸಿಲ್ಲ. 2017, 2022 ಹಾಗೂ 2023 ಹೀಗೆ ಮೂರು ಬಾರಿ ಸಲ್ಲಿಸಲಾಗಿತ್ತು. ಆದರೂ ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ದೂರಿದ್ದಾರೆ.

‘ಈ ಸಂಬಂಧ ಎಡಿಎಲ್‌ಆರ್ ಅವರ ಆಪ್ತ ಸಹಾಯಕ ಮತ್ತು ಅರ್ಜಿ ಮೇಲ್ವಿಚಾರಕ ಗಿರೀಶ್ ಅವರಿಗೆ ಕರೆ ಮಾಡಿ ಮಾಹಿತಿ ಕೇಳಿದರೆ ನಮಗೇ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದಾರೆ. ಇವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಅಲ್ಲದೇ ನಮ್ಮ ಕುಟುಂಬಕ್ಕೆ ರಕ್ಷಣೆ ನೀಡಬೇಕು. ಮೇಲಿನ ಅಧಿಕಾರಿಗಳು ಗಮನ ಹರಿಸಿ ಸಮಸ್ಯೆಗೆ ಪರಿಹಾರ ಸೂಚಿಸಬೇಕು’ ಎಂದು ಮದನ್ ಪ್ರಕಟಣೆಯಲ್ಲಿ ಕೋರಿದ್ದಾರೆ. ಪ್ರತಿಕ್ರಿಯೆ ಪಡೆಯಲು ಸಹಾಯಕ ನಿರ್ದೇಶಕಿ ಎಚ್.ನಯನಾ ಅವರನ್ನು ಸಂಪರ್ಕಿಸಿದರೂ ಅವರು ಕರೆ ಸ್ವೀಕರಿಸಲಿಲ್ಲ.

ಜೈನಮುನಿ ಹತ್ಯೆ; ಸಿಐಡಿ ತಂಡ ಭೇಟಿ

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ: ತಾಲ್ಲೂಕಿನ ಹಿರೇಕೋಡಿ ಗ್ರಾಮದ ನಂದಿಪರ್ವತ ಆಶ್ರಮದ ಜೈನಮುನಿ ಕಾಮಕುಮಾರ ಮಹಾರಾಜರ ಹತ್ಯೆ ಪ್ರಕರಣದ ತನಿಖೆಗಾಗಿ ಅಪರಾಧ ತನಿಖಾ ದಳ(ಸಿಐಡಿ)ದಅಧಿಕಾರಿಗಳ ತಂಡ ಚಿಕ್ಕೋಡಿಗೆ ಆಗಮಿಸಿದೆ.

ಸಿಐಡಿ ಎಸ್.ಪಿ.ವೆಂಕಟೇಶ್, ಡಿವೈಎಸ್ಪಿ ಎಚ್.ಡಿ.ಕುಲಕರ್ಣಿ ಅವರ ನೇತೃತ್ವದ ತಂಡವು ಸ್ಥಳೀಯ ಪೊಲೀಸರಿಂದ ಘಟನೆಯ ಕುರಿತು ಮಾಹಿತಿ ಪಡೆದಿದೆ. ಸೋಮವಾರ ಹಿರೇಕೋಡಿಯ ನಂದಿ ಪರ್ವತ ಆಶ್ರಮಕ್ಕೆ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಮಂಗಳವಾರವೂ ತನಿಖೆ ಮುಂದುವರಿಸಲಿದೆ ಎಂದು ಮೂಲಗಳು ತಿಳಿಸಿವೆ.

ಆಗಸ್ಟ್‌ನಲ್ಲಿ ಕೆಂಪೇಗೌಡ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಪ್ರದಾನ ಸಮಾರಂಭ ಆಗಸ್ಟ್ ಮೊದಲ ವಾರದಲ್ಲಿ ನಡೆಯಲಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಜುಲೈ 28ರಂದು ಸಮಾರಂಭ ಆಯೋಜಿಸುವ ಯೋಜನೆ ಇತ್ತು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಜುಲೈ 26 ಅಥವಾ 27ರಂದು ನಗರಕ್ಕೆ ಬರುವ ಯೋಜನೆ ಇದೆ. ಹೀಗಾಗಿ, ಸಮಾರಂಭವನ್ನು ಮುಂದೂಡಲಾಗಿದೆ. ಆಗಸ್ಟ್ 4 ಅಥವಾ 5ರಂದು ಪ್ರಶಸ್ತಿ ಪ್ರದಾನ ಮಾಡಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ಕೆಂಪೇಗೌಡ ಪ್ರಶಸ್ತಿಗೆ ಆಯ್ಕೆ ಮಾಡಲು ಸಮಿತಿ ರಚಿಸಲಾಗಿದೆ. ಈ ಸಮಿತಿ ಸಭೆ ನಡೆಸಿ, ಅರ್ಹತೆ ಆಧಾರದ ಮೇಲೆ ಬಹುತೇಕ ಪಟ್ಟಿಯನ್ನು ಅಂತಿಮಗೊಳಿಸಿದೆ.

14 ಕಾರ್ಯಕ್ರಮ ಕೈಬಿಟ್ಟ ಸರ್ಕಾರ: ಬಿಜೆಪಿ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜನಪರವೆನಿಸಿದ್ದ 14 ಕಾರ್ಯಕ್ರಮಗಳನ್ನು ಕೈಬಿಟ್ಟಿದೆ ಎಂದು ಬಿಜೆಪಿ ದೂರಿದೆ.

ಬಿಜೆಪಿ ರಾಜ್ಯ ಘಟಕದ ಎಸ್‌ಸಿ ಮೋರ್ಚಾ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಮತ್ತು ಬಿಜೆಪಿ ಉಪಾಧ್ಯಕ್ಷ ಎಂ.ಶಂಕರಪ್ಪ ಅವರು ಸೋಮವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಇಂದಿನ ಜಾಗತಿಕ ಗುಣಮಟ್ಟಕ್ಕೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಬಲ್ಲ ನೂತನ ಶಿಕ್ಷಣ ನೀತಿ ರದ್ದು ಮಾಡಿದ್ದೂ ಅಲ್ಲದೇ, ರೈತರು, ನೇಕಾರರು, ಮೀನುಗಾರರು ಮತ್ತಿತರ ಸಣ್ಣ ಪುಟ್ಟ ಕಸುಬುಗಳಲ್ಲಿ ತೊಡಗಿರುವವರ ಮಕ್ಕಳಿಗೆ ನೀಡುತ್ತಿದ್ದ ರೈತವಿದ್ಯಾನಿಧಿಯನ್ನೂ ನಿಲ್ಲಿಸಿದ್ದಾರೆ ಎಂದರು.

'ರೈತರ ಪರವಾಗಿದ್ದ ಎಪಿಎಂಸಿ ಕಾಯ್ದೆ, ರೈತರಲ್ಲದವರು ಕೃಷಿ ಭೂಮಿ ಖರೀದಿಗೆ ನೀಡಿದ್ದ ಅವಕಾಶವನ್ನು ಕೈಬಿಟ್ಟಿದ್ದಾರೆ. ನಮ್ಮ ಕ್ಲಿನಿಕ್, ಯುವ ಶಕ್ತಿ, ಸ್ತ್ರೀಸಾಮರ್ಥ್ಯ ಯೋಜನೆಗಳನ್ನು ಮುಂದುವರಿಸಿಲ್ಲ. ರೈತ ಸಮ್ಮಾನ್ ಯೋಜನೆಯಡಿ ರಾಜ್ಯ ಸರ್ಕಾರ ನೀಡುತ್ತಿದ್ದ ₹4 ಸಾವಿರವನ್ನೂ ಕೈಬಿಟ್ಟಿದ್ದಾರೆ. ಕೃಷಿ ಮಹಿಳೆಯರಿಗೆ ತಿಂಗಳಿಗೆ ₹500 ನೀಡುವ ಶ್ರಮಶಕ್ತಿಯನ್ನು ಕೈಬಿಟ್ಟಿದ್ದಾರೆ. ಅಗ್ನಿವೀರರಾಗಲು ಎಸ್ಸಿ ಎಸ್ಟಿ ಯುವಕರಿಗೆ ನೀಡುತ್ತಿದ್ದ ತರಬೇತಿ ರದ್ದು ಮಾಡಲಾಗಿದೆ. ಅಂತರ್ಜಲ ಹೆಚ್ಚಿಸುವ ಜಲನಿಧಿ ಯೋಜನೆ, ಹಾಲು ಉತ್ಪಾದಕರ ಬ್ಯಾಂಕ್ ಯೋಜನೆಗಳನ್ನೂ ಕೈಬಿಟ್ಟಿದ್ದಾರೆ' ಎಂದು ಟೀಕಿಸಿದರು.

ಪೊಲೀಸ್ ದೂರು ಪ್ರಾಧಿಕಾರ: ಹುದ್ದೆ ಭರ್ತಿಗೆ ಹೈಕೋರ್ಟ್ ಗಡುವು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕರ್ನಾಟಕ ಪೊಲೀಸ್ ಪ್ರಾಧಿಕಾರದ ಅಧ್ಯಕ್ಷ ಮತ್ತು ಇಬ್ಬರ ಸದಸ್ಯರ ಸ್ಥಾನಗಳನ್ನು ಭರ್ತಿ ಮಾಡಲು ಎರಡು ವಾರ ಗಡುವು ನೀಡಿರುವ ಹೈಕೋರ್ಟ್, ‘ಒಂದೊಮ್ಮೆ ಈ ಅವಧಿಯಲ್ಲಿ ಪ್ರಕ್ರಿಯೆ ಪೂರ್ಣಗೊಳ್ಳದಿದ್ದರೆ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮುಂದಿನ ವಿಚಾರಣೆಗೆ ಖುದ್ದು ಹಾಜರಾಗಬೇಕು’ ಎಂದು ನಿರ್ದೇಶನ ನೀಡಿದೆ.

ಈ ಕುರಿತಂತೆ ವಕೀಲರಾದ ಸುಧಾ ಕಾಟ್ವಾ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ. ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರಿ ವಕೀಲರು, ‘ಅಧ್ಯಕ್ಷ ಮತ್ತು ಸದಸ್ಯರ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದ್ದು ಇನ್ನಷ್ಟು ಕಾಲಾವಕಾಶ ನೀಡಬೇಕು’ ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಎರಡು ವಾರಗಳ ಕಾಲಾವಕಾಶ ನೀಡಲಾಗುತ್ತಿದ್ದು, ಒಂದೊಮ್ಮೆ ಈ ಅವಧಿಯಲ್ಲಿ ಪ್ರಕ್ರಿಯೆ ಪೂರ್ಣಗೊಳ್ಳದಿದ್ದರೆ ಅಥವಾ ಬಾಕಿ ಉಳಿದರೆ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವಿಚಾರಣೆಗೆ ಖುದ್ದಾಗಿ ಹಾಜರಾಗಿ ವಿವರಣೆ ನೀಡಬೇಕು’ ಎಂದು ತಾಕೀತು ಮಾಡಿ ವಿಚಾರಣೆ ಮುಂದೂಡಿತು.

ಪೊಲೀಸ್ ದೂರು ಪ್ರಾಧಿಕಾರಕ್ಕೆ ಅಧ್ಯಕ್ಷ ಮತ್ತು ಸದಸ್ಯರನ್ನು ನೇಮಕ ಮಾಡಲು ಕೊನೆಯ ಅವಕಾಶವಾಗಿ ಮೂರು ವಾರಗಳ ಕಾಲಾವಕಾಶ ನೀಡಿ ಹೈಕೋರ್ಟ್ 2023ರ ಜೂನ್ 21ರಂದು ಆದೇಶಿಸಿತ್ತು. ಅರ್ಜಿದಾರರ ಪರ ವಕೀಲ ಎಸ್. ಉಮಾಪತಿ ವಾದ ಮಂಡಿಸಿದರು.

ನಿಧನ ವಾರ್ತೆ

ಜಿ. ಪ್ರೇಮಾ



ಬೆಂಗಳೂರು: ವಿಜಯನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡ, ಬಿಬಿಎಂಪಿ ಮಾಜಿ ಸದಸ್ಯ ಎಚ್. ರವೀಂದ್ರ ಅವರ ಪತ್ನಿ ಜಿ. ಪ್ರೇಮಾ (53) ಅವರು ಸೋಮವಾರ ನಿಧನರಾದರು.

ಆರೋಗ್ಯ ಸಮಸ್ಯೆಯ ಕಾರಣ ಅವರು ಆಸ್ಪತ್ರೆಗೆ ದಾಖಲಾಗಿದ್ದರು. ಅವರಿಗೆ ಪತಿ, ಪುತ್ರ ನವೀನ್ ಮತ್ತು ಪುತ್ರಿ ಮಹಾಲಕ್ಷ್ಮಿ (ಬಿಬಿಎಂಪಿ ಮಾಜಿ ಸದಸ್ಯೆ) ಇದ್ದಾರೆ.

ಚಾಮರಾಜಪೇಟೆಯ ಟಿ.ಆರ್. ಮಿಲ್ ಬಳಿಯ ರುದ್ರಭೂಮಿಯಲ್ಲಿ ಅವರ ಅಂತ್ಯಕ್ರಿಯೆ ಮಂಗಳವಾರ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ನಗರದಲ್ಲಿ ಇಂಡೋ–ಸ್ವಿಸ್ ಇನ್ನೋವೇಶನ್ ಪ್ಲಾಟ್‌ಫಾರಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜ್ಞಾನ, ಸಂಶೋಧನೆ ಮತ್ತು ನಾವೀನ್ಯತೆ ವಿಷಯದಲ್ಲಿ ರಾಜ್ಯದ ಜತೆ ಕೆಲಸ ಮಾಡಲು ಸ್ವಿಟ್ಜರ್ಲೆಂಡ್ ಆಸಕ್ತಿ ವ್ಯಕ್ತಪಡಿಸಿದ್ದು, ಈ ಸಂಬಂಧ ಆ ದೇಶದ ಕಾನ್ಸುಲ್ ಜನರಲ್ ಜೋನಾಸ್ ಬ್ರನ್ಸ್‌ವಿಗ್ ಅವರು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಜತೆ ಚರ್ಚೆ ನಡೆಸಿದರು.

ಸ್ವಿಟ್ಜರ್ಲೆಂಡ್ ಮತ್ತು ಕರ್ನಾಟಕದ ನಡುವೆ ಇರುವ ಸಹಭಾಗಿತ್ವವನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುವ ಉದ್ದೇಶದಿಂದ 'ಇಂಡೋ–ಸ್ವಿಸ್ ಇನ್ನೋವೇಶನ್ ಪ್ಲಾಟ್‌ಫಾರಂ' ಎಂಬ ಸಾಂಸ್ಥಿಕ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತರಲಾಗುತ್ತಿದೆ ಎಂದು ಜೋನಾಸ್ ತಿಳಿಸಿದರು.

ಬೆಂಗಳೂರಿನಲ್ಲಿರುವ ನ್ಯಾಷನಲ್ ಸೆಂಟರ್ ಫಾರ್ ಬಯಲಾಜಿಕಲ್ ಸೈನ್ಸಸ್‌ನಲ್ಲಿ(ಎನ್‌ಸಿಬಿಎಸ್) ಮೂರು ದಿನಗಳ ಸಮಾವೇಶ ನಡೆಸುವ ಮೂಲಕ ಈ ವೇದಿಕೆಗೆ ಚಾಲನೆ ನೀಡಲಾಗುವುದು. ಇದರಲ್ಲಿ ಭಾರತ ಮತ್ತು ಸ್ವಿಸ್‌ಗಳ ತಲಾ 25 ಪರಿಣತರು ಭಾಗವಹಿಸಲಿದ್ದಾರೆ ಎಂದರು.

ಕರ್ನಾಟಕದಲ್ಲಿ ಸ್ವಿಟ್ಜರ್ಲೆಂಡ್‌ನ 49 ಕಂಪನಿಗಳು ಸಕ್ರಿಯವಾಗಿದ್ದು, 17,800 ಉದ್ಯೋಗಾವಕಾಶ ಸೃಷ್ಟಿಸಿವೆ. ಇದರ ಪೈಕಿ ಸರಿಸುಮಾರು 40 ಕಂಪನಿಗಳು ರಾಜ್ಯದಲ್ಲಿ ತಯಾರಿಕಾ ಘಟಕಗಳನ್ನು ಹೊಂದಿವೆ. ಮುಂಬರುವ ದಿನಗಳಲ್ಲಿ ಹಮ್ಮಿಕೊಳ್ಳಲಿರುವ ಸಮಾವೇಶದಲ್ಲಿ ಆಂಟಿಮೈಕ್ರೋಬಯಲ್ ರೆಸಿಸ್ಟೆನ್ಸ್(ಎಎಂಆರ್) ಕುರಿತು ಹೆಚ್ಚಿನ ಗಮನಹರಿಸುವುದು ಮುಖ್ಯ ಉದ್ದೇಶವಾಗಿದೆ. ಇದು ಅಂತಿಮವಾಗಿ ಶಿಕ್ಷಣ ಕ್ಷೇತ್ರ ಮತ್ತು ಉದ್ಯಮದ ನಡುವಿನ ಸಹಭಾಗಿತ್ವವನ್ನು ಮತ್ತಷ್ಟು ವಿಸ್ತರಿಸಲು ನೆರವಾಗಲಿದೆ ಎಂದು ಅವರು ಹೇಳಿದರು.

ತಮ್ಮ ದೇಶದ ಕಂಪನಿಗಳು ಭಾರತದಲ್ಲಿ ಹೂಡುತ್ತಿರುವ ಬಂಡವಾಳ ಪ್ರಮಾಣವು 2015 ರಿಂದ 2022 ರ ನಡುವೆ ಶೇ 53 ರಷ್ಟು ಏರಿಕೆ ಕಂಡಿದೆ. ಹಾಗೆಯೇ ಭಾರತದ ಕಂಪನಿಗಳು ಸ್ವಿಸ್‌ನಲ್ಲಿ ಹೂಡುತ್ತಿರುವ ಬಂಡವಾಳದಲ್ಲೂ ಕಳೆದ ಏಳು ವರ್ಷಗಳಲ್ಲಿ ಶೇ 9 ರಷ್ಟು ಬೆಳವಣಿಗೆ ಕಂಡು ಬಂದಿದೆ ಎಂದು ಜೋನಾಸ್ ವಿವರಿಸಿದರು.

ಇಂಗಾಲಮುಕ್ತ, ಪರಿಸರ ಸ್ನೇಹಿ ಇಂಧನಕ್ಕೆ ಹೆಚ್ಚು ಒತ್ತು ನೀಡಬೇಕಾಗಿದೆ. ಇದಕ್ಕಾಗಿ ಎಲ್ಲೆಡೆ ಹಸಿರು ಕವಚವನ್ನು ಸೃಷ್ಟಿಸಬೇಕು. ಇಂತಹ ಆಸಕ್ತಿ ಸಾರ್ವಜನಿಕರಲ್ಲೂ ಹುಟ್ಟಬೇಕು. ಮಂಗಳೂರಿನಲ್ಲಿ ಹಸಿರು ಇಂಧನ ಉತ್ಪಾದಿಸಲು ಸರ್ಕಾರ ಮುಂದಡಿ ಇಟ್ಟಿದೆ. ಅಪಾರ ಪ್ರಮಾಣದಲ್ಲಿ ಹೂಡಿಕೆ ಹರಿದು ಬರುತ್ತಿದೆ ಎಂದು ಸಚಿವ ಎಂ.ಬಿ.ಪಾಟೀಲ ವಿವರಿಸಿದರು.

ಬ್ರ್ಯಾಂಡ್ ಬೆಂಗಳೂರು: ಅಭಿವೃದ್ಧಿ ಉದ್ದೇಶದಿಂದ ಸಹಿ

ಬಿಬಿಎಂಪಿ– ಡಬ್ಲ್ಯುಡಿಒ ಒಪ್ಪಂದ

ಪ್ರಜಾವಾಣಿ ವಾರ್ತೆ



ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿರುವ 'ವಾರ್ ರೂಮ್ ಮತ್ತು ಕಂಟ್ರೋಲ್ ರೂಮ್'ಗೆ' ಸೋಮವಾರ ರಾತ್ರಿ ಭೇಟಿ ನೀಡಿ ಸಿದ್ಧತೆಗಳನ್ನು ಪರಿಶೀಲಿಸಿದರು

ಬೆಂಗಳೂರು: 'ಬ್ರ್ಯಾಂಡ್ ಬೆಂಗಳೂರು' ಅಭಿವೃದ್ಧಿ ಉದ್ದೇಶದಿಂದ ರಾಜ್ಯ ಸರ್ಕಾರ ಹಾಗೂ ಬೆಂಗಳೂರು ಬೃಹತ್ ಮಹಾನಗರ ಪಾಲಿಕೆಯು (ಬಿಬಿಎಂಪಿ) ವರ್ಲ್ಡ್ ಡಿಸೈನ್ ಆರ್ಗನೈಜೇಷನ್ (ಡಬ್ಲ್ಯುಡಿಒ) ಜತೆ ಒಪ್ಪಂದ ಮಾಡಿಕೊಂಡಿದೆ.

ವಿಧಾನಸೌಧದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮ್ಮುಖದಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮತ್ತು ಕೆನಡಾ ಮೂಲದ ಡಬ್ಲ್ಯುಡಿಒ ಅಧ್ಯಕ್ಷ ಸೋಮವಾರ ಸಹಿ ಹಾಕಿದರು. ಬಿಡಿಎ ಅಧ್ಯಕ್ಷ ರಾಕೇಶ್ ಸಿಂಗ್ ಇದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಶಿವಕುಮಾರ್, 'ಬೆಂಗಳೂರನ್ನು ವಾಸಯೋಗ್ಯ ನಗರವಾಗಿ ನಿರ್ಮಿಸುವ ಉದ್ದೇಶದಿಂದ ಈ ಒಪ್ಪಂದ ಮಾಡಿಕೊಳ್ಳಲಾಗುತ್ತಿದೆ. ಆ ಮೂಲಕ, ಬ್ರ್ಯಾಂಡ್ ಬೆಂಗಳೂರು ಹಾಗೂ ಕರ್ನಾಟಕದ ಪಾಲಿಗೆ ಹೊಸ ಅಧ್ಯಾಯ ಆರಂಭವಾಗಿದೆ' ಎಂದರು.

'ಬೆಂಗಳೂರನ್ನು ಜಾಗತಿಕ ನಗರವಾಗಿ ಮಾಡಲು ಸರ್ಕಾರ ಬದ್ಧವಾಗಿದೆ. ಯಾವುದೇ ಯೋಜನೆಯಾದರೂ ಅದರ ವಿನ್ಯಾಸ ಬಹಳ ಮುಖ್ಯ. ಹೀಗಾಗಿ, ನಾವು ಈ ಸಂಸ್ಥೆಯ ಜೊತೆ ಕೈಜೋಡಿಸುತ್ತಿದ್ದೇವೆ. ಈಗಿರುವ ಬೆಂಗಳೂರಿನಲ್ಲಿ ಯಾವ ರೀತಿಯ ಬದಲಾವಣೆ ಮಾಡಬಹುದು, ಮುಂದೆ ಬೆಳೆಯಲಿರುವ ಬೆಂಗಳೂರನ್ನು ಹೇಗೆ ರೂಪಿಸಬೇಕು, ಹೊಸ ಸ್ಯಾಟಲೈಟ್ ಟೌನ್ ಹೇಗೆ ರೂಪಿಸಬೇಕು ಎಂಬ ಬಗ್ಗೆ ಸಲಹೆ ನೀಡಲು ಈ ಒಪ್ಪಂದ ಮಾಡಿಕೊಳ್ಳಲಾಗುತ್ತಿದೆ' ಎಂದರು.

'ಡಬ್ಲ್ಯುಡಿಒ ಕೇಂದ್ರ ಕಚೇರಿ ಕೆನಡಾದಲ್ಲಿದ್ದು, ಸಂಸ್ಥೆಯು ವಿಶ್ವದ ಅತ್ಯುತ್ತಮ ವಾಸ್ತುಶಿಲ್ಪಿಗಳನ್ನು ಹೊಂದಿದೆ. ಅನೇಕ ದೇಶಗಳ ಜತೆ ಈ ಸಂಸ್ಥೆಯು ಕೆಲಸ ಮಾಡಿದೆ. ಮುಂದಿನ ದಿನಗಳಲ್ಲಿ ಸುಮಾರು 200-300 ಎಂಜಿನಿಯರ್‌ಗಳು ಕೆಲಸ ಮಾಡಲಿದ್ದಾರೆ. ಇಲ್ಲಿ ಅವರು ಯಾವುದೇ ಕಟ್ಟಡ ನಿರ್ಮಾಣ ಮಾಡುವುದಿಲ್ಲ. ಬೆಂಗಳೂರಿಗೆ ಹೊಸ ರೂಪ ನೀಡುವ ನಿಟ್ಟಿನಲ್ಲಿ ಸಲಹೆಗಳನ್ನು ಮಾತ್ರ ನೀಡಲಿದ್ದು, ಅದನ್ನು ನೋಡಿಕೊಂಡು ಜಿಲ್ಲಾ ಕೇಂದ್ರಗಳು ಹಾಗೂ ತಾಲ್ಲೂಕು ಕೇಂದ್ರಗಳಿಗೆ ರೂಪ ನೀಡುವ ಬಗ್ಗೆಯೂ ಆಲೋಚಿಸಲಾಗುವುದು' ಎಂದರು.

ಮುಂಬೈ, ದೆಹಲಿಗೆ ಭೇಟಿ: 'ಬಿಬಿಎಂಪಿ ವ್ಯಾಪ್ತಿಯಲ್ಲಿ ತ್ಯಾಜ್ಯ ನಿರ್ವಹಣೆ ಮಾಡುವ ಕೆಲವು ಪ್ರದೇಶಗಳಿಗೆ ಭೇಟಿ ನೀಡಿದ್ದೇನೆ. ಅನಿಲ ಹಾಗೂ ತ್ಯಾಜ್ಯ ಇಂಧನ ಉತ್ಪಾದನೆ ಯೋಜನೆಗಳ ಬಗ್ಗೆ ಗಮನಹರಿಸಲಾಗುತ್ತಿದೆ. ತ್ಯಾಜ್ಯವನ್ನು ಒಂದು ಕಡೆ ಗುಡ್ಡೆ ಹಾಕಿದರೆ ಪ್ರಯೋಜನವಿಲ್ಲ. ಅದ ಸುಟ್ಟು ಹಾಕಬೇಕು. ತ್ಯಾಜ್ಯದಿಂದ ವಿದ್ಯುತ್ ಉತ್ಪಾದನಾ ಘಟಕ ನಿಷ್ಕ್ರಿಯವಾಗಿವೆ. ಈ ಬಗ್ಗೆ ಅಧ್ಯಯನ ಮಾಡಲು ಮುಂಬೈ, ದೆಹಲಿ, ಇಂದೋರ್‌ಗಳಿಗೆ ಭೇಟಿ ನೀಡಲಾಗುವುದು' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

'ಐದು ವರ್ಷಕ್ಕೆ ಒಪ್ಪಂದ'

ಡಬ್ಲ್ಯುಡಿಒ ಜೊತೆ ಈ ಹಿಂದೆ ₹ 200 ಕೋಟಿಗೆ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಅದನ್ನು ಹೆಚ್ಚಿಸಲಾಗಿದೆಯೇ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಒಪ್ಪಂದದ ಮೊತ್ತ ಕಡಿಮೆ ಮಾಡಿದ್ದೇವೆ. ಮೊದಲ ವರ್ಷ ನೀಡಬೇಕಾದ ಮೊತ್ತದಲ್ಲಿ ಅರ್ಧದಷ್ಟು ಮಾತ್ರ ನೀಡುತ್ತೇವೆ. ಅವರ ಕೆಲಸ ಹೇಗಿರುತ್ತದೆ ಎಂದು ನೋಡಿ ನಂತರ ಮುಂದುವರಿಯುವುದಾಗಿ ಹೇಳಿದ್ದೇವೆ. ಅವರು ನೀಡುವ ಸಲಹೆಗಳು ನಾವು ಜಾರಿ ಮಾಡುವಂತಿರಬೇಕು. ಹೀಗಾಗಿ ಈ ಒಪ್ಪಂದವನ್ನು ಷರತ್ತುಗಳ ಮೇಲೆ ಐದು ವರ್ಷಕ್ಕೆ ಮಾಡಿಕೊಳ್ಳಲಾಗಿದೆ' ಎಂದು ವಿವರಿಸಿದರು.

'ಈ ಹಿಂದೆ ಒಪ್ಪಂದವನ್ನು ಬೆಂಗಳೂರು ನಗರಕ್ಕೆ ಮಾತ್ರ ಸೀಮಿತಗೊಳಿಸಲಾಗಿತ್ತು. ಆದರೆ, ಈಗ ಅದಕ್ಕೆ ಬಿಎಂಆರ್‌ಡಿಎ ವ್ಯಾಪ್ತಿಯ ಪ್ರದೇಶಗಳನ್ನೂ ಸೇರಿಸಲಾಗಿದೆ. ಬೆಂಗಳೂರಿನ ಇತಿಹಾಸ, ಪರಂಪರೆ, ಸಂಸ್ಕೃತಿ ಎಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡು ಒಪ್ಪಂದ ಮಾಡಿಕೊಳ್ಳಲಾಗಿದೆ. ಈಗ ಬೆಳೆದಿರುವ ಬೆಂಗಳೂರು ಯೋಜಿತವಾಗಿಲ್ಲ. ಹೀಗಾಗಿ, ಎಷ್ಟು ಬದಲಾವಣೆ ತರಲು ಸಾಧ್ಯ? ಮುಂದೆ ಬೆಳೆಯುವ ಪ್ರದೇಶಗಳಲ್ಲಿ ಸರಿಯಾದ ರೀತಿಯಲ್ಲಿ ಯೋಜನೆ ರೂಪಿಸಲು ಈ ತೀರ್ಮಾನ ಮಾಡಲಾಗಿದೆ' ಎಂದೂ ಹೇಳಿದರು.

2 ತಿಂಗಳಲ್ಲಿ 40.43 ಟಿಎಂಸಿ ನೀರು ಹರಿಸಬೇಕಿತ್ತು

ತಮಿಳುನಾಡಿಗೆ 3.83 ಟಿಎಂಸಿ ಅಡಿ ನೀರು

ಪ್ರಜಾವಾಣಿ ವಾರ್ತೆ

ನವದೆಹಲಿ: ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ, ಕರ್ನಾಟಕವು ತಮಿಳುನಾಡಿಗೆ ಜೂನ್ ಹಾಗೂ ಜುಲೈ ತಿಂಗಳಲ್ಲಿ 40.43 ಟಿಎಂಸಿ ಅಡಿ ನೀರು ಹರಿಸಬೇಕಿತ್ತು. ರಾಜ್ಯದಲ್ಲಿ ಮಳೆಯ ಕೊರತೆಯಿಂದಾಗಿ ಕರ್ನಾಟಕ ಸರ್ಕಾರವು 3.83 ಟಿಎಂಸಿ ಅಡಿ ನೀರನ್ನು ಬಿಟ್ಟಿದೆ.

ರಾಜ್ಯಸಭೆಯಲ್ಲಿ ತಮಿಳುನಾಡಿನ ಸದಸ್ಯರಾದ ಎಂ.ಷಣ್ಮುಗಂ ಹಾಗೂ ವೈಕೋ ಸೋಮವಾರ ಕೇಳಿರುವ ಪ್ರಶ್ನೆಗಳಿಗೆ ಕೇಂದ್ರ ಜಲಶಕ್ತಿ ರಾಜ್ಯ ಸಚಿವ ಬಿಶ್ವೇಶ್ವರ ತುಡು ಲಿಖಿತ ಉತ್ತರ ನೀಡಿದ್ದು, ಇದರಲ್ಲಿ ಈ ಮಾಹಿತಿ ಇದೆ. ಸುಪ್ರೀಂ ಕೋರ್ಟ್ 2018ರ ಫೆಬ್ರುವರಿ 16ರಂದು ನೀಡಿರುವ ಆದೇಶದ ಪ್ರಕಾರ, ಸಾಮಾನ್ಯ ವರ್ಷಗಳಲ್ಲಿ ಕರ್ನಾಟಕವು ತಮಿಳುನಾಡಿಗೆ 177.25 ಟಿಎಂಸಿ ಅಡಿ ನೀರು ಬಿಡಬೇಕಿದೆ.

ತಮಿಳುನಾಡಿಗೆ ಕಾವೇರಿ ನೀರು
(ಹರಿವಿನ ಪ್ರಮಾಣ ಟಿಎಂಸಿಗಳಲ್ಲಿ)

ತಿಂಗಳು	ನಿಗದಿತ ಹರಿವು	ವಾಸ್ತವ ಪ್ರಮಾಣ
ಜನವರಿ	2.76	7.37
ಫೆಬ್ರುವರಿ	2.50	4.51
ಮಾರ್ಚ್	2.50	4.30
ಏಪ್ರಿಲ್	2.50	2.99
ಮೇ	2.50	8.46
ಜೂನ್	9.19	2.83
ಜುಲೈ	31.24	1.07

ಜೂನ್ ತಿಂಗಳಿಗೆ ನಿಗದಿಪಡಿಸಿದ ನೀರನ್ನು ಕರ್ನಾಟಕವು ಬಿಟ್ಟಿಲ್ಲ ಎಂದು ಆರೋಪಿಸಿ ತಮಿಳುನಾಡು ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರಿಗೆ ಜುಲೈ 3ರಂದು ಪತ್ರ ಬರೆದಿದ್ದರು. ಜೂನ್ ತಿಂಗಳ ನೀರನ್ನು ಸೇರಿಸಿ ಜುಲೈ ತಿಂಗಳಲ್ಲಿ ಬಿಡುಗಡೆ ಮಾಡಲು ನಿರ್ದೇಶನ ನೀಡಬೇಕು ಎಂದು ಕೋರಿದ್ದರು. ಜತೆಗೆ, ಜಲಸಂಪನ್ಮೂಲ ಸಚಿವರು ಸಹ ಪತ್ರ ಬರೆದಿದ್ದರು. ಪ್ರಾಧಿಕಾರವು ಕರ್ನಾಟಕ ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಜುಲೈ 4ರಂದು ಪತ್ರ ಬರೆದು, ಸುಪ್ರೀಂ ಕೋರ್ಟ್ ನಿಗದಿಪಡಿಸಿದಷ್ಟು ನೀರು ಹರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿತ್ತು.

ಜುಲೈ 14ರಂದು ನಡೆದ ಕಾವೇರಿ ನೀರು ನಿಯಂತ್ರಣಾ ಪ್ರಾಧಿಕಾರದ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂದಿತ್ತು. ಒಂದೂವರೆ ತಿಂಗಳಲ್ಲಿ ಕರ್ನಾಟಕವು 3.37 ಟಿಎಂಸಿ ನೀರನ್ನು ಮಾತ್ರ ಹರಿಸಿದೆ ಎಂದು ತಮಿಳುನಾಡು ಸರ್ಕಾರ ಗಮನ ಸೆಳೆದಿತ್ತು. ಜೂನ್ ಹಾಗೂ ಜುಲೈ ತಿಂಗಳ ಬಾಕಿ ಸೇರಿದಂತೆ ನಿಗದಿಪಡಿಸಿದ ನೀರನ್ನು ಹರಿಸುವಂತೆ ಕರ್ನಾಟಕ ಸರ್ಕಾರದ ಪ್ರತಿನಿಧಿಗಳಿಗೆ ಪ್ರಾಧಿಕಾರವು ಸಲಹೆ ನೀಡಿತ್ತು.

'ಬಾಲಬ್ರೂಯಿ: ಇದ್ದಂತೆಯೇ ಉಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಾಲಬ್ರೂಯಿ ಅತಿಥಿ ಗೃಹವನ್ನು ಸಂವಿಧಾನಿಕ ಕ್ಲಬ್ ಆಗಿ ಪರಿವರ್ತಿಸಬಾರದು. ಈ ಪಾರಂಪರಿಕ ಕಟ್ಟಡವನ್ನು ಯಥಾವತ್ತಾಗಿ ಉಳಿಸಿಕೊಂಡು ಸರ್ಕಾರಿ ಅತಿಥಿ ಗೃಹವನ್ನಾಗಿ ನಿರ್ವಹಿಸಿಕೊಂಡು ಹೋಗಬೇಕು' ಎಂದು ಬಹುಜನ ಸಮಾಜ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ಆಗ್ರಹಿಸಿದ್ದಾರೆ.

'ಬಾಲಬ್ರೂಯಿ ಅತಿಥಿ ಗೃಹದಲ್ಲಿ ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ, ಡಾ.ಬಿ.ಆರ್. ಅಂಬೇಡ್ಕರ್, ರಾಷ್ಟ್ರಕವಿ ರವೀಂದ್ರನಾಥ್ ಟ್ಯಾಗೋರ್ ತಂಗಿದ್ದ ಇತಿಹಾಸವಿದೆ. ಈ ಅತಿಥಿ ಗೃಹದ ಆವರಣದಲ್ಲಿರುವ ಅಪರೂಪದ 350 ಹಳೆಯ ಮರಗಳಿವೆ. ಅವುಗಳ ರಕ್ಷಣೆಗೆ ಕ್ರಮ ಕೈಗೊಳ್ಳಬೇಕು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿಗಳು

ಅರ್ಜಿ ಆಹ್ವಾನ

ಬೆಂಗಳೂರು: ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪ ಧರ್ಮಸಂಸ್ಥೆಯು 2023–24ನೇ ಸಾಲಿನ ವಸತಿ ನಿಲಯಕ್ಕೆ ಅರ್ಜಿ ಆಹ್ವಾನಿಸಿದೆ.

ಬಿ.ಇ., ಬಿ.ಎಸ್ಸಿ (ಅಗ್ರಿ), ಎಂ.ಬಿ.ಬಿ.ಎಸ್., ಬಿ.ಎಸ್ಸಿ (ನರ್ಸಿಂಗ್), ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ಆಸಕ್ತ ಪ್ರತಿಭಾವಂತ ಬಡ ವೀರಶೈವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಆಗಸ್ಟ್ 10ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಗೌರವ ಕಾರ್ಯದರ್ಶಿ, ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪ ಧರ್ಮಸಂಸ್ಥೆ, ನ.88 ಗುಬ್ಬಿ ತೋಟದಪ್ಪ ರಸ್ತೆ, ನಗರ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು–560023, ಮಾಹಿತಿಗೆ: 080–22879665ಗೆ ಸಂಪರ್ಕಿಸಬಹುದು.

ಪಿಎಚ್‌ಡಿ ಕೌನ್ಸಲಿಂಗ್ ಮುಂದೂಡಿಕೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಪಿಎಚ್‌ಡಿ ನೋಂದಣಿಗೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳ ಪಿಎಚ್‌ಡಿ ಸೀಟು ಹಂಚಿಕೆ (ಕೌನ್ಸಲಿಂಗ್) ಪ್ರಕ್ರಿಯೆಯನ್ನು ಜುಲೈ 27ರಂದು ನಡೆಯಬೇಕಾಗಿತ್ತು. ಆದರೆ, ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿದೆ ಎಂದು ಕುಲಸಚಿವರು ತಿಳಿಸಿದ್ದಾರೆ.

ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಎಸ್.ಆರ್.ಎನ್.ಜಿ. ಸಂಪನ್ನಪ್ಪ ಧರ್ಮಸಂಸ್ಥೆಯು ಉಚಿತ ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನಿಸಿದೆ.

ನಗರ್ತಪೇಟೆಯಲ್ಲಿರುವ ಬಾಲಕರ ವಿದ್ಯಾರ್ಥಿನಿಯಲಕ್ಕೆ ಡಿಪ್ಲೊಮಾ, ಪದವಿ ಅಧ್ಯಯನ ಮಾಡುತ್ತಿರುವ ಆಸಕ್ತ ವಿದ್ಯಾರ್ಥಿಗಳು ಆಗಸ್ಟ್ 19ರ ಒಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ 080–42151190, 7204020874ಗೆ ಸಂಪರ್ಕಿಸಬಹುದು.

ಉಪನಿರ್ದೇಶಕ ಅಮಾನತು

ಬೆಂಗಳೂರು: ವಿಧಾನಸಭೆ ಚುನಾವಣಾ ಕರ್ತವ್ಯಕ್ಕೆ ಗೈರು ಹಾಜರಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಡಾ. ಆರ್. ನಾರಾಯಣ್ ಅವರನ್ನು ಅಮಾನತುಗೊಳಿಸಲಾಗಿದೆ.

ಮಾರ್ಚ್‌ನಲ್ಲಿ ಸ್ಥಳ ನಿಯುಕ್ತಿಗೊಳಿಸುವ ಸಮಾಲೋಚನಾ ಸಭೆಗೂ ಭಾಗವಹಿಸಲಿರಲಿಲ್ಲ. ಚುನಾವಣಾ ಕಾರ್ಯ ನಿರ್ವಹಿಸಲು ಕರ್ತವ್ಯಕ್ಕೂ ಹಾಜರಾಗಿರಲಿಲ್ಲ. ನಂತರ, ಮೇ ತಿಂಗಳಲ್ಲಿ ನಡೆಸಿದ್ದ ಸಮಾಲೋಚನಾ ಸಭೆಗೂ ಗೈರಾಗಿದ್ದರು. ಇಲಾಖಾ ವಿಚಾರಣೆಯನ್ನು ಬಾಕಿಯಿರಿಸಿ ಅವರನ್ನು ಸೇವೆಯಿಂದ ಅಮಾನತು ಮಾಡಿ ಆದೇಶ ಹೊರಡಿಸಲಾಗಿದೆ. ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೇ ಕೇಂದ್ರ ಸ್ಥಾನ ಬಿಡುವಂತಿಲ್ಲ ಎಂದು ಸೂಚನೆ ನೀಡಲಾಗಿದೆ.

ಬಿಜೆಪಿ ಅವಧಿಯ ಕಳಂಕ ತೊಳೆಯಲು ಸುರಿಯುತ್ತಿದೆ ಮಳೆ

'ಆರ್.ಆರ್. ನಗರ ಕ್ಷೇತ್ರದ ಅಕ್ರಮಗಳ ತನಿಖೆ'

ಪ್ರಜಾವಾಣಿ ವಾರ್ತೆ



ಮತ್ತಿಕೆರೆಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಬಿಜೆಪಿ ಮುಖಂಡರನ್ನು ಸಂಸದ ಡಿ.ಕೆ. ಸುರೇಶ್, ಕಾಂಗ್ರೆಸ್ ನಾಯಕಿ ಎಚ್. ಕುಸುಮಾ, ಮುಖಂಡರಾದ ಹನುಮಂತರಾಯಪ್ಪ, ಮಧುರೆ, ಬಿ.ಆರ್. ನಂಜುಂಡಪ್ಪ ಕಾಂಗ್ರೆಸ್‌ಗೆ ಬರಮಾಡಿಕೊಂಡರು.

ರಾಜರಾಜೇಶ್ವರಿನಗರ: 'ಬಿಜೆಪಿ ಅವಧಿಯಲ್ಲಿ ನಡೆದ ಶೇ 40ರಷ್ಟು ಭ್ರಷ್ಟಾಚಾರ, ಧರ್ಮದ ಹೆಸರಿನಲ್ಲಿ ಜನರಲ್ಲಿ ಅಶಾಂತಿ ವಾತಾವರಣ ನಿರ್ಮಾಣ, ಪಿಎಸ್‌ಐ ಹಗರಣ ಸೇರಿದಂತೆ ಹಲವು ಅಕ್ರಮಗಳ ಕಳಂಕವನ್ನು ತೊಳೆಯಲು ಮಳೆ ಸುರಿಯುತ್ತಿದೆ. ನಾಡಿನ ಎಲ್ಲ ಅಣೆಕಟ್ಟುಗಳು ತುಂಬುತ್ತಿವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಮತ್ತಿಕೆರೆಯ ಜೆ.ಪಿ.ಪಾರ್ಕ್‌ನ ಬಸ್ ನಿಲ್ದಾಣದಲ್ಲಿ ರಾಜರಾಜೇಶ್ವರಿನಗರ ಕ್ಷೇತ್ರ ಕಾಂಗ್ರೆಸ್ ಸಮಿತಿ ಹಮ್ಮಿಕೊಂಡಿದ್ದ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶದಲ್ಲಿ ಅವರು ಮಾತನಾಡಿದರು.

'ಹೊಸಕೆರೆಹಳ್ಳಿ ಕೆರೆ, ಮಲ್ಲತ್ತಹಳ್ಳಿ ಕೆರೆ ಮತ್ತು ಜೆ.ಪಿ.ಪಾರ್ಕ್‌ನ ಅಭಿವೃದ್ಧಿ ಹೆಸರಿನಲ್ಲಿ ಶಾಸಕ ಮುನಿರತ್ನ ನೂರಾರು ಕೋಟಿ ರೂಪಾಯಿ ಲೂಟಿ ಮಾಡಿದ್ದಾರೆ. ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ, ಆರ್.ಆರ್. ನಗರ ಕ್ಷೇತ್ರದಲ್ಲಿ ನಡೆದಿರುವ ಅಕ್ರಮಗಳು, ಕಳಪೆ ಕಾಮಗಾರಿಗಳ ಬಗ್ಗೆ ತನಿಖೆ ನಡೆಸಲು ಸಿದ್ಧ. ಯಾವ ರೀತಿಯಲ್ಲಿ ಬಿಜೆಪಿ ಶಾಸಕರು ಮೋಸ ಮಾಡಿ ಗೆಲುವು ಸಾಧಿಸಿದ್ದಾರೆ ಎಂಬುದನ್ನು ಜನಸಾಮಾನ್ಯರಿಗೆ ಅರ್ಥ ಮಾಡಿಸಲಾಗುವುದು' ಎಂದು ಹೇಳಿದರು.

ಬಿಬಿಎಂಪಿ ಮಾಜಿ ಸದಸ್ಯ ವೇಲುನಾಯಕರ್ ಮಾತನಾಡಿ, 'ಬೇರೆಯವರ ದೇಹಕ್ಕೆ ಪಾಲಿಕೆಯ ಮಾಜಿ ಸದಸ್ಯರ ಮುಖ ಅಂಟಿಸಿ ಶಾಸಕ ಮುನಿರತ್ನ ಬೆದರಿಸಿ ಎಲ್ಲರನ್ನು ಚುನಾವಣೆಯಲ್ಲಿ ಬಳಸಿಕೊಂಡರು. ಮಹಿಳೆಯರ ಮೂಲಕ ಹನಿಟ್ರ್ಯಾಪ್ ಮಾಡುವುದು ಅವರಿಗೆ ಕರಗತ' ಎಂದು ಆರೋಪಿಸಿದರು.

'1400ಕ್ಕೂ ಹೆಚ್ಚು ಸುಳ್ಳು ಕೇಸುಗಳನ್ನು ಶಾಸಕರು ಹಾಕಿದ್ದಾರೆ. ಅದನ್ನು ತೆಗೆಸಿ ಹಾಕಬೇಕು' ಎಂದು ಪಾಲಿಕೆ ಮಾಜಿ ವಿರೋಧ ಪಕ್ಷದ ನಾಯಕ ಬಿ.ಆರ್.ನಂಜುಂಡಪ್ಪ ಮನವಿ ಮಾಡಿದರು.

ಕಾಂಗ್ರೆಸ್ ನಾಯಕಿ ಎಚ್.ಕುಸುಮಾ ಮಾತನಾಡಿ, 'ನಾನೆಂದು ದ್ವೇಷದ ರಾಜಕಾರಣ ಮಾಡುವುದಿಲ್ಲ. ಕೊಳೆತು ಹೋಗಿರುವ ಹಣ್ಣಿಗೆ ಕಲ್ಲು ಹೊಡೆಯುವ ಕೆಲಸ ಮಾಡುವುದಿಲ್ಲ. ಅದೇ ಕೆಳಗೆ ಬೀಳುತ್ತದೆ. ಮೋಸ, ವಂಚನೆಯನ್ನು ಭಗವಂತ ನೋಡಿಕೊಳ್ಳುತ್ತಾನೆ' ಎಂದರು.


ಬಿಜೆಪಿ ಮುಖಂಡರಾದ ವೇಲುನಾಯಕರ್, ಜಿ. ಮೋಹನ್ ಕುಮಾರ್, ಸಿದ್ದೇಗೌಡ, ಶ್ರೀನಿವಾಸಮೂರ್ತಿ, ಮಂಜುಳಾ ಮಂಜುನಾಥ್, ಸಂತೋಷ್, ಮುರಳಿ ಪ್ರೇಮ್, ಎಂ.ಪಿ. ಅಲಿ, ಬಿಎಸ್‌ಪಿ ಮುಖಂಡ ಸೊಹಿಲ್ ಅಹಮ್ಮದ್, ಅಂಬೇಡ್ಕರ್ ಸೇನೆ ರಾಜ್ಯಘಟಕದ ಅಧ್ಯಕ್ಷ ಪಿ. ಮೂರ್ತಿ ಕಾಂಗ್ರೆಸ್ ಸೇರಿದರು.

ಸಂಸದ ಡಿ.ಕೆ. ಸುರೇಶ್ ಮಾತನಾಡಿದರು. ರಾಜರಾಜೇಶ್ವರಿ ನಗರ ನಗರಸಭೆ ಮಾಜಿ ಅಧ್ಯಕ್ಷ ಹನಮಂತರಾಯಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಕೆ. ಗೋಪಾಲಕೃಷ್ಣ, ಕೆಪಿಸಿಸಿ ಸದಸ್ಯರಾದ ಜೈಕುಮಾರ್, ಬೆಟ್ಟಸ್ವಾಮಿಗೌಡ, ಮಂಜುನಾಥ್, ಮದುರೆ ಮುಖಂಡರಾದ ಲಕ್ಷ್ಮಿ, ನೇತ್ರಾ, ನಳಿನಿ ಕೃಷ್ಣಪ್ಪ, ರತ್ನ ನಾರಾಯಣ್, ಕೊಟ್ಟಿಗೆಪಾಳ್ಯ ಶೇಖರ್, ಲಗ್ಗೆರೆ ನಾರಾಯಣಸ್ವಾಮಿ ಅವರು ಇದ್ದರು.

₹ 472 ಕೋಟಿ ಹೆಚ್ಚುವರಿ ವರಮಾನ ಸಂಗ್ರಹ ಸರ್ಕಾರದ ಗುರಿ

ವಾಹನ ತೆರಿಗೆ ಹೆಚ್ಚಳ ಜಾರಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಜೆಟ್ ಘೋಷಣೆಯಂತೆ ಮೋಟಾರು ವಾಹನಗಳ ತೆರಿಗೆ ಪರಿಷ್ಕರಣೆ ಸೋಮವಾರದಿಂದಲೇ ಜಾರಿಯಾಗಿದೆ. ಇದರಿಂದ ಪ್ರಸಕ್ತ ಆರ್ಥಿಕ ವರ್ಷದಲ್ಲಿ ₹472 ಕೋಟಿ ಹೆಚ್ಚುವರಿ ವರಮಾನ ಸಂಗ್ರಹಿಸುವ ಗುರಿ ಇದೆ.

ಆಯ್ದ ವಾಹನಗಳ ತೆರಿಗೆ ಹೆಚ್ಚಳ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜುಲೈ 7ರಂದು ಮಂಡಿಸಿದ್ದ ಬಜೆಟ್‌ನಲ್ಲಿ ಪ್ರಕಟಿಸಿದ್ದರು. ಅದಕ್ಕೆ ಪೂರಕವಾಗಿ 'ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ಮಸೂದೆ–2023'ಕ್ಕೆ ವಿಧಾನಮಂಡಲದ ಒಪ್ಪಿಗೆ ಪಡೆಯಲಾಗಿತ್ತು.

ಶಾಲೆ, ಕಾಲೇಜುಗಳ ವಾಹನಗಳು, ಅತಿ ಭಾರದ ಸರಕು ಸಾಗಣೆ ವಾಹನಗಳು, ಮೋಟಾರು ಕ್ಯಾಬ್‌ಗಳ ತೆರಿಗೆಯನ್ನು ಹೆಚ್ಚಳ ಮಾಡಲಾಗಿದೆ. ಶಾಲೆಗಳ ಒಡೆತನದಲ್ಲಿದ್ದು, ಶಾಲಾ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಯ ಸಂಚಾರಕ್ಕೆ ಬಳಸುವ ವಾಹನಗಳ ಪ್ರತಿ ಚದರ ಮೀಟರ್‌ಗೆ ತೆರಿಗೆಯನ್ನು ₹ 20ರಿಂದ ₹ 100ಕ್ಕೆ ಏರಿಕೆ ಮಾಡಲಾಗಿದೆ. ಇತರ ಶಿಕ್ಷಣ ಸಂಸ್ಥೆಗಳ ಒಡೆತನದಲ್ಲಿದ್ದು, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯ ಸಂಚಾರಕ್ಕೆ ಬಳಸುವ ವಾಹನಗಳ ಪ್ರತಿ ಚದರ ಮೀಟರ್ ವಿಸ್ತೀರ್ಣದ ತೆರಿಗೆಯನ್ನು ₹80ರಿಂದ ₹200ಕ್ಕೆ ಹೆಚ್ಚಿಸಲಾಗಿದೆ.

ಹೊರುವ ಭಾರವೂ ಸೇರಿದಂತೆ ಒಟ್ಟು ತೂಕ 1.5 ಟನ್‌ನಿಂದ 5.5 ಟನ್‌ಗಳವರೆಗೆ ಮಾತ್ರ ಇರುವ ವಾಹನಗಳಿಗೆ ಪೂರ್ಣಾವಧಿ ತೆರಿಗೆ ಪಡೆಯಲಾಗುತ್ತಿತ್ತು. ಅದಕ್ಕಿಂತ ಹೆಚ್ಚಿನ ಭಾರದ ವಾಹನಗಳಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ತೆರಿಗೆ ಪಾವತಿಸಬೇಕಿತ್ತು. ಈಗ 1.5 ಟನ್‌ನಿಂದ 12 ಟನ್‌ಗಳವರೆಗಿನ ತೂಕದ ವಾಹನಗಳಿಗೂ ಪೂರ್ಣಾವಧಿ ತೆರಿಗೆ ಸಂಗ್ರಹಿಸಲಾಗುತ್ತದೆ.

₹15 ಲಕ್ಷಕ್ಕಿಂತ ಹೆಚ್ಚಿನ ಬೆಲೆಯ ಕ್ಯಾಬ್‌ಗಳಿಗೆ ಮಾತ್ರ ಆ ವಾಹನದ ಮೌಲ್ಯದ ಶೇಕಡ 15ರಷ್ಟು ತೆರಿಗೆ ವಿಧಿಸಲಾಗುತ್ತಿತ್ತು. ಇನ್ನು ಮುಂದೆ ₹10 ಲಕ್ಷದಿಂದ ₹15 ಲಕ್ಷದವರೆಗಿನ ಬೆಲೆಯ ಕ್ಯಾಬ್‌ಗಳಿಗೆ ಅವುಗಳ ಮೌಲ್ಯದ ಶೇ 9ರಷ್ಟು ತೆರಿಗೆ ವಿಧಿಸಲಾಗುತ್ತದೆ. ₹15 ಲಕ್ಷಕ್ಕಿಂತ ಹೆಚ್ಚಿನ ಬೆಲೆಯ ಕ್ಯಾಬ್‌ಗಳಿಗೆ ಈ ಹಿಂದಿನಂತೆಯೇ ಅವುಗಳ ಮೌಲ್ಯದ ಶೇ 15ರಷ್ಟು ತೆರಿಗೆ ವಿಧಿಸಲಾಗುತ್ತದೆ.

ವಾಹನ ತೆರಿಗೆ ಹೆಚ್ಚಳದ ವಿವರ

ವರ್ಗ	ಹಿಂದಿನ ತೆರಿಗೆ ದರ	ಪರಿಷ್ಕೃತ ತೆರಿಗೆ ದರ
1.5 ಟನ್‌ನಿಂದ 2 ಟನ್	₹10,000	₹20,000
2 ಟನ್‌ನಿಂದ 3 ಟನ್	₹15,000	₹30,000
3 ಟನ್‌ನಿಂದ 5.5 ಟನ್	₹20,000	₹40,000
5.5 ಟನ್‌ನಿಂದ 7.5 ಟನ್	ವರ್ಷಕ್ಕೆ ₹7,200	ಪೂರ್ಣಾವಧಿಗೆ ₹60,000
7.5 ಟನ್‌ನಿಂದ 9.5 ಟನ್	ವರ್ಷಕ್ಕೆ ₹7,200	ಪೂರ್ಣಾವಧಿಗೆ ₹80,000
9.5 ಟನ್‌ನಿಂದ 12 ಟನ್	ವರ್ಷಕ್ಕೆ ₹7,200	ಪೂರ್ಣಾವಧಿಗೆ ₹1 ಲಕ್ಷ

ಸೋರುವ ಆಸ್ಪತ್ರೆ ನಡುಗುವ ರೋಗಿಗಳು!

ಒಂದನೇ ಪುಟದಿಂದ

ಕಾಮಗಾರಿಯಿಂದ ಸೋರಿಕೆ: 'ಜಿಲ್ಲಾಸ್ಪತ್ರೆಯು 250 ಹಾಸಿಗೆಗಳ ಸಾಮರ್ಥ್ಯ ಹೊಂದಿದ್ದು, ಇದನ್ನು 350 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸಲು ಆಸ್ಪತ್ರೆಯ 3ನೇ ಅಂತಸ್ತಿನ ಮೇಲೆ ಕಟ್ಟಡ ಕಾಮಗಾರಿಯನ್ನು ನಡೆಸಲಾಗುತ್ತಿದೆ. ಇದರ ಪರಿಣಾಮ ಕಟ್ಟಡ ಸೋರತೊಡಗಿದೆ. ಡ್ರಿಲ್ಲಿಂಗ್ ಉಪಕರಣಗಳು ಚಾವಣಿಯನ್ನು ತೂತು ಮಾಡಿವೆ. ಪಿಲ್ಲರ್‌ಗಳನ್ನು ಕೂರಿಸಲು ಸಿಮೆಂಟ್ ಕಿತ್ತು ಹಾಕಿದ್ದರಿಂದ ಇಡೀ ಆಸ್ಪತ್ರೆ ತೊಟ್ಟಿಕ್ಕುತ್ತಿದೆ' ಎಂದು ಆಸ್ಪತ್ರೆಯ ಸಿಬ್ಬಂದಿ ಹೇಳಿದರು.

ಪಡಸಾಲೆಯಲ್ಲಿ ರೋಗಿಗಳು: 'ಎರಡು ತಿಂಗಳಿನ ಮೊಮ್ಮಗನನ್ನು ಆಸ್ಪತ್ರೆಯಲ್ಲಿ ದಾಖಲಿಸಿದ್ದೇನೆ. ನಾವು ಇರುವ ವಾರ್ಡ್‌ನಲ್ಲಿ ತುಂಬಾ ನೀರು ತೊಟ್ಟಿಕ್ಕುತ್ತಿದೆ. ಎಲ್ಲ ರೋಗಿಗಳನ್ನು ಆಸ್ಪತ್ರೆಯ ಪಡಸಾಲೆಯಲ್ಲಿ ಮಲಗಿಸಿದ್ದಾರೆ. ಮೇಲೆ, ಕೆಳಗೆ ಎಲ್ಲ ಕಡೆ ನೀರು ಹರಿಯುತ್ತದೆ. ಶೀತ-ಕಫದಿಂದ ಬಳಲುತ್ತಿರುವ ಮೊಮ್ಮಗನಿಗೆ ಸ್ವಲ್ಪವೂ ಗುಣವಾಗಿಲ್ಲ' ಎಂದು ಸವಣೂರಿನ ಕಮಲ್‌ಭಾಷಾ ಅಳಲು ತೋಡಿಕೊಂಡರು.

'ಚಾವಣಿ ಸೋರುತ್ತಿದೆ, ಗೋಡೆಗಳು ಒದ್ದೆಯಾಗಿವೆ. ಕಿಟಕಿ ಗಾಜು ಒಡೆದಿದ್ದು, ಶೀತಗಾಳಿಯಿಂದ ರಕ್ಷಿಸಿಕೊಳ್ಳಲು ಕಿಟಕಿಗೆ ಅಡ್ಡಲಾಗಿ ನಾವೇ ಬಟ್ಟೆ ಕಟ್ಟಿದ್ದೇವೆ. ನೆಲದ ಮೇಲೆ ನೀರು ನಿಲ್ಲುವುದರಿಂದ ಸೊಳ್ಳೆಗಳು ಜಾಸ್ತಿಯಾಗಿವೆ' ಎಂದು ತಾಯಂದಿರ ವಾರ್ಡ್‌ನಲ್ಲಿರುವ ರೋಹಿಣಿ ಹಿರೇಮಠ, ಕಾವ್ಯಶ್ರೀ ಕಣ್ಣೀರು ಹಾಕಿದರು.

ಸ್ವಿಚ್ ಮುಟ್ಟಲು ಭಯ: 'ಗೋಡೆಗಳು ಒದ್ದೆಯಾಗಿರುವುದರಿಂದ ಫ್ಯಾನ್ ಸ್ವಿಚ್‌ಗಳನ್ನು ಮುಟ್ಟಲು ಭಯವಾಗುತ್ತದೆ. ಆಸ್ಪತ್ರೆಯ ಕೊಠಡಿಗಳ ಪಕ್ಕ ಇರುವ ವರಾಂಡದಲ್ಲೇ ವೈದ್ಯಕೀಯ ತ್ಯಾಜ್ಯಗಳನ್ನು ಬಿಸಾಡಲಾಗಿದೆ. ಎಂದು ರೋಗಿಗಳ ಸಂಬಂಧಿಕರು ದೂರಿದರು.

ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ವಾಟ್ಸ್‌ಆ್ಯಪ್‌ನಲ್ಲಿ ಕೊಲೆ ಬೆದರಿಕೆ

ಬ್ಯಾಂಕ್ ಖಾತೆಗೆ ₹50 ಲಕ್ಷ ವರ್ಗಾವಣೆ ಮಾಡಲು ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಳಿದಷ್ಟು ಹಣವನ್ನು ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡದಿದ್ದರೆ ಹೈಕೋರ್ಟ್ ನ್ಯಾಯಮೂರ್ತಿಗಳನ್ನು ಕೊಲೆ ಮಾಡುವುದಾಗಿ ವಾಟ್ಸ್‌ಆ್ಯಪ್ ಸಂದೇಶದ ಮೂಲಕ ಬೆದರಿಕೆ ಹಾಕಲಾಗಿದೆ.

ಈ ಬಗ್ಗೆ ಕೇಂದ್ರ ವಿಭಾಗದ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ತಾವು ಸೂಚಿಸಿದ ಬ್ಯಾಂಕ್ ಖಾತೆಗೆ ₹50 ಲಕ್ಷ ವರ್ಗಾವಣೆ ಮಾಡಬೇಕು. ಇಲ್ಲದಿದ್ದರೆ ಆರು ನ್ಯಾಯಮೂರ್ತಿಗಳನ್ನು ಕೊಲೆ ಮಾಡಲಾಗುವುದೆಂದು ಬೆದರಿಕೆ ಬಂದಿದೆ' ಎಂದು ನ್ಯಾಯಾಲಯದ ಅಧಿಕಾರಿ ಕೆ. ಮುರಳೀಧರ್ ಅವರು ದೂರು ನೀಡಿದ್ದಾರೆ.

ಜುಲೈ 14ರಂದೇ ಪ್ರಕರಣ ದಾಖಲಿಸಿಕೊಂಡಿರುವ ಕೇಂದ್ರ ವಿಭಾಗದ ಸೈಬರ್ ಪೊಲೀಸರು ವಿಶೇಷ ತಂಡ ರಚಿಸಿ ಆರೋಪಿಗಳ ಪತ್ತೆಗೆ ತನಿಖೆ ಕೈಗೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

'ಜುಲೈ 12ರಂದು ರಾತ್ರಿ 7ರ ಸುಮಾರಿಗೆ ವ್ಯಕ್ತಿಯೊಬ್ಬ, ಮುರಳೀಧರ್ ಅವರ ಮೊಬೈಲ್ ಸಂಖ್ಯೆಗೆ ಸಂದೇಶ ಕಳುಹಿಸಿದ್ದಾನೆ. ಪಾಕಿಸ್ತಾನ ಮೂಲದ ಎಬಿಎಲ್ ಅಲೈಡ್ ಬ್ಯಾಂಕ್ ಖಾತೆ ಸಂಖ್ಯೆಯನ್ನು ಉಲ್ಲೇಖಿಸಿ ಸಂದೇಶ ಕಳುಹಿಸಲಾಗಿದೆ. ಆ ಖಾತೆಗೆ ಹಣ ವರ್ಗಾವಣೆ ಮಾಡದಿದ್ದರೆ ನಿನ್ನನ್ನು (ಮುರಳೀಧರ್), ನ್ಯಾಯಮೂರ್ತಿಗಳಾದ ಮೊಹಮ್ಮದ್ ನವಾಜ್, ಎಚ್.ಟಿ. ನರೇಂದ್ರ ಪ್ರಸಾದ್, ಅಶೋಕ್ ಜಿ. ನಿಜಗಣ್ಣನವರ್, ಎಚ್.ಪಿ.ಸಂದೇಶ, ಕೆ.ನಟರಾಜನ್ ಹಾಗೂ ವೀರಪ್ಪ ಅವರನ್ನು ದುಬೈ ಗ್ಯಾಂಗ್‌ನಿಂದ ಕೊಲೆ ಮಾಡಿಸಲಾಗುವುದೆಂದು ಬೆದರಿಕೆ ಹಾಕಲಾಗಿದೆ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಹಿಂದಿ, ಉರ್ದು ಮತ್ತು ಇಂಗ್ಲಿಷ್ ಭಾಷೆಯಲ್ಲಿ ಬೆದರಿಕೆ ಸಂದೇಶಗಳು ಬಂದಿವೆ. ಐದು ಬೇರೆಬೇರೆ ಸಂಖ್ಯೆಗಳಿಂದ ಮುರಳೀಧರ್ ಅವರ ಮೊಬೈಲ್‌ಗೆ ಬೆದರಿಕೆ ಸಂದೇಶ ಕಳುಹಿಸಲಾಗಿದೆ. ಅಲ್ಲದೇ, ಭಾರತದಲ್ಲಿ ನಮ್ಮ ಶೂಟರ್ ಇದ್ದಾನೆಂದು ಹೆದರಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ವೈಯಕ್ತಿಕ ಹಿತಾಸಕ್ತಿಗಾಗಿ ರಾಜಕೀಯ ಮಾಡಿಲ್ಲ: ಹರಿಪ್ರಸಾದ್ ಟ್ವೀಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ವೈಯಕ್ತಿಕ ಹಿತಾಸಕ್ತಿಗಾಗಿ ಯಾವತ್ತೂ ರಾಜಕೀಯ ಮಾಡಿಲ್ಲ' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದ್ದಾರೆ.

'ಸಿಎಂ ಆಯ್ಕೆ ಮಾಡುವುದು ಗೊತ್ತಿದೆ. ಕೆಳಗೆ ಇಳಿಸುವುದು ಗೊತ್ತಿದೆ' ಎಂದಿದ್ದ ಹರಿಪ್ರಸಾದ್ ಹೇಳಿಕೆ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗುತ್ತಿದ್ದಂತೆ ಟ್ವೀಟ್ ಮಾಡಿರುವ ಅವರು, 'ಸಾಮಾಜಿಕ ಬದಲಾವಣೆಗಾಗಿ ನಾನು ರಾಜಕೀಯಕ್ಕೆ ಬಂದವನು' ಎಂದಿದ್ದಾರೆ. 'ಮಂತ್ರಿ, ಸಿ.ಎಂ ಸೇರಿ ಯಾವ ಅಧಿಕಾರಕ್ಕಾಗಿಯೂ ಲಾಬಿ ನಡೆಸಿಲ್ಲ. ಅದರ ಮೇಲೆ ಆಸೆಯೂ ಇಲ್ಲ. ಸಾಮಾಜಿಕ ನ್ಯಾಯದ ಪರ ನನ್ನ ಧ್ವನಿಯನ್ನು ಅಡಗಿಸಲು ಸಾಧ್ಯವಿಲ್ಲ' ಎಂದೂ ಅವರು ಹೇಳಿದ್ದಾರೆ.

ಸಚಿವ ಸಂಪುಟದಲ್ಲಿ ಸ್ಥಾನ ಸಿಗದ ಕಾರಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಹರಿಪ್ರಸಾದ್ ಪರೋಕ್ಷವಾಗಿ ಅಸಮಾಧಾನ ಹೊರಹಾಕಿದ್ದರು. ಈಚೆಗೆ ಬಿಲ್ಲವ, ಈಡಿಗ ಸಮುದಾಯದ ಮುಖಂಡರ ಸಭೆಯಲ್ಲಿ ಮಾತನಾಡಿದ್ದ ಹರಿಪ್ರಸಾದ್, 'ನಮ್ಮ ಸಮುದಾಯದವರು ರಾಜಕೀಯವಾಗಿ ಮುಂದೆ ಬರುತ್ತಿಲ್ಲ. ನಾವು ಯಾರದ್ದೋ ಷಡ್ಯಂತ್ರಕ್ಕೆ ಬಲಿಯಾಗುತ್ತಿದ್ದೇವೆ ಅನಿಸುತ್ತಿದೆ' ಎಂದಿದ್ದರು.

'ವಿದ್ಯುತ್ ಮಗ್ಗಗಳಿಗೆ ₹1.25 ದರದಲ್ಲಿ ವಿದ್ಯುತ್ ಪೂರೈಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೇಕಾರರ ವಿಶೇಷ ಯೋಜನೆಯಡಿ ಈಗ ಜಾರಿಯಲ್ಲಿರುವ 20 ಎಚ್.ಪಿ ವರೆಗಿನ ವಿದ್ಯುತ್ ಸಂಪರ್ಕ ಹೊಂದಿರುವ ವಿದ್ಯುತ್ ಮಗ್ಗದ ಘಟಕಗಳಿಗೆ ₹1.25ರ ದರದಲ್ಲಿ ವಿದ್ಯುತ್ ಪೂರೈಕೆ ಮುಂದುವರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣದಲ್ಲಿ ಸೋಮವಾರ ತಮ್ಮನ್ನು ಭೇಟಿಯಾದ ನೇಕಾರ ಸಮುದಾಯಗಳ ಒಕ್ಕೂಟದ ನಿಯೋಗದ ಬೇಡಿಕೆಗಳಿಗೆ ಮೇಲಿನಂತೆ ಭರವಸೆ ನೀಡಿದರು.

10 ಎಚ್.ಪಿ.ವರೆಗಿನ ಘಟಕಗಳಿಗೆ 250 ಯೂನಿಟ್‌ವರೆಗೆ ಉಚಿತ ವಿದ್ಯುತ್ ಒದಗಿಸಲು ಆಯವ್ಯಯದಲ್ಲಿ ಘೋಷಿಸಲಾಗಿದೆ. ಶೀಘ್ರವೇ ಆದೇಶ ಹೊರಡಿಸಲಾಗುವುದು ಎಂದರು.

ನೇಕಾರರ ತಮ್ಮ ವೃತ್ತಿಪರ ಚಟುವಟಿಕೆಗಳಿಗೆ ಮುಖ್ಯಮಂತ್ರಿಯವರು ಹಿಂದಿನಿಂದಲೂ ಬೆಂಬಲ ನೀಡಿದ್ದನ್ನು ಸ್ಮರಿಸಿ, ತಮ್ಮ ಸಮುದಾಯಕ್ಕೆ ರಾಜಕೀಯ ಪ್ರಾತಿನಿಧ್ಯ ನೀಡುವಂತೆ ಮನವಿ ಮಾಡಿದರು.

ಮಾಜಿ ಸಚಿವ ಎಚ್.ಎಂ. ರೇವಣ್ಣ, ಹಂಪಿ ಗಾಯತ್ರಿ ಪೀಠದ ದಯಾನಂದ ಪುರಿ ಸ್ವಾಮೀಜಿ, ತಪಸಿಹಳ್ಳಿ ದಿವ್ಯ ಜ್ಞಾನಾನಂದ ಸ್ವಾಮೀಜಿ, ಬಾಗಲಕೋಟೆ ಜಿಲ್ಲೆ ನೀರಲ ಕೇರಿ ಸಿದ್ಧಾರೂಢ ಮಠದ ಘನಲಿಂಗ ಸ್ವಾಮೀಜಿ, ಧಾರವಾಡದ ಶಿವಾನಂದ ಮಠದ ಶಿವಾನಂದ ಸ್ವಾಮೀಜಿ, ರಾಜ್ಯ ನೇಕಾರರ ಒಕ್ಕೂಟಗಳ ರಾಜ್ಯ ಅಧ್ಯಕ್ಷ ಬಿ.ಎಸ್. ಸೋಮಶೇಖರ ಮತ್ತಿತರರು ಇದ್ದರು.



ಹಂಪಿ ಗಾಯತ್ರಿ ಪೀಠದ ದಯಾನಂದಪುರಿ ಸ್ವಾಮೀಜಿ ಮತ್ತು ಇತರ ಸ್ವಾಮೀಜಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಚರಕವನ್ನು ಸ್ಮರಣಿಕೆಯಾಗಿ ನೀಡಿದರು

ಕುಲಶಾಸ್ತ್ರೀಯ ವರದಿ ಸ್ವೀಕರಿಸಿ ಉಪ್ಪಾರ ಮುಖಂಡರ ಒತ್ತಾಯ

ಬೆಂಗಳೂರು: ಉಪ್ಪಾರ ಜನಾಂಗದ ಕುಲಶಾಸ್ತ್ರೀಯ ಅಧ್ಯಯನ ಪೂರ್ಣಗೊಂಡಿದ್ದು, ವರದಿ ಸ್ವೀಕಾರ ಮಾಡಿ ಮೀಸಲಾತಿಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು ಎಂದು ಉಪ್ಪಾರ ಸಮಾಜದ ಮುಖಂಡರ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದೆ.

ಚಿತ್ರದುರ್ಗದ ಭಗೀರಥ ಮಠದ ಡಾ. ಪುರುಷೋತ್ತಮಾನಂದ ಪುರಿ ಸ್ವಾಮೀಜಿ ನೇತೃತ್ವದಲ್ಲಿ ಉಪ್ಪಾರ ಸಮಾಜದ ಮುಖಂಡರ ನಿಯೋಗವು ಸೋಮವಾರ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿತು.

ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ವಿದ್ಯಾರ್ಥಿ ನಿಲಯ, ಸಮುದಾಯ ಭವನ, ಶಿಕ್ಷಣ ಸಂಸ್ಥೆಗೆ ಜಮೀನು ಮಂಜೂರು ಮಾಡುವುದು, ಭಗೀರಥ ಗುರುಪೀಠದ ಆಶ್ರಯದಲ್ಲಿ ಮಧುರ ಕಣಿವೆ ಸಹಕಾರ ಸಾಮುದಾಯಿಕ ಬೇಸಾಯ ಸಂಘಕ್ಕೆ 500 ಎಕರೆ ಜಮೀನು ಗುತ್ತಿಗೆ ಅವಧಿ ಮುಗಿದಿದ್ದು, ಗುರುಪೀಠದ ಶಿಕ್ಷಣ ಸಂಸ್ಥೆಗಳ ಟ್ರಸ್ಟ್ ಹೆಸರಿಗೆ ಕಾಯಂ ಆಗಿ ಮಂಜೂರು ಮಾಡುವುದು ಸೇರಿ ಹಲವು ಬೇಡಿಕೆಗಳನ್ನು ಮಂಡಿಸಿದರು.

ಆರ್‌ಎಸ್‌ಎಸ್ ಮುಖಂಡ ಮದನ್‌ದಾಸ್ ದೇವಿ ನಿಧನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಜ್ಯೇಷ್ಠ ಪ್ರಚಾರಕ ಮದನ್ ದಾಸ್ ದೇವಿ (81) ಅವರು ಸೋಮವಾರ ಬೆಳಿಗ್ಗೆ 5 ಗಂಟೆಗೆ ನಿಧನರಾದರು.

ಅನಾರೋಗ್ಯದಿಂದ ಬಳಲುತ್ತಿದ್ದ ಅವರು, ರಾಜರಾಜೇಶ್ವರಿ ನಗರದ ರಾಷ್ಟ್ರೋತ್ಥಾನ ಆಸ್ಪತ್ರೆಯಲ್ಲಿ ನಿಧನರಾದರು.

ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ಕರ್ಮಾಳ ಗ್ರಾಮದ ಮದನ್ ದಾಸ್ ದೇವಿ ಅವರು, ಪುಣೆಯಲ್ಲಿ ಎಂ.ಕಾಂ. ಹಾಗೂ ಎಲ್‌ಎಲ್‌ಬಿ ಪದವಿ ಪಡೆದಿದ್ದರು. ನಂತರ ಚಾರ್ಟರ್ಡ್ ಅಕೌಂಟೆಂಟ್ (ಸಿ.ಎ) ಆಗಿದ್ದರು. ವಿದ್ಯಾರ್ಥಿ ಜೀವನದಲ್ಲೇ ಹಿರಿಯ ಸಹೋದರ ಖುಶಾಲ್ದಾಸ್ ದೇವಿ ಅವರ ಪ್ರೇರಣೆಯಿಂದ ಸಂಘದ ಸಂಪರ್ಕಕ್ಕೆ ಬಂದಿದ್ದರು.

1964ರಿಂದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. 1966ರಲ್ಲಿ ಎಬಿವಿಪಿ ಮುಂಬೈ ಘಟಕದ ಕಾರ್ಯದರ್ಶಿಯಾಗಿದ್ದರು. ನಂತರ, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಯಾಗಿ ಹಾಗೂ ಆರ್‌ಎಸ್‌ಎಸ್ ಸಹಸರಕಾರ್ಯವಾಹರಾಗಿ ಕಾರ್ಯನಿರ್ವಹಿಸಿದ್ದರು.

ಪಾರ್ಥಿವ ಶರೀರವನ್ನು ಆರ್‌ಎಸ್‌ಎಸ್ ಸ್ಥಳೀಯ ಪ್ರಧಾನ ಕಚೇರಿ ಕೇಶವ ಕೃಪಾದಲ್ಲಿ ದರ್ಶನಕ್ಕೆ ಇರಿಸಲಾಗಿತ್ತು. ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಪುಣೆಯಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ.

'ಮದನ್ ಅವರು ತಮ್ಮ ಪೂರ್ಣ ಜೀವನವನ್ನು ಆರ್‌ಎಸ್‌ಎಸ್‌ಗಾಗಿ ಮುಡಿಪಿಟ್ಟಿದ್ದರು. ಅವರಿಂದ ನಾನು ಸಾಕಷ್ಟು ಕಲಿತಿದ್ದೇನೆ, ಅವರನ್ನು ಕಳೆದುಕೊಂಡ ಕುಟುಂಬ ಹಾಗೂ ಕಾರ್ಯಕರ್ತರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಟ್ವೀಟ್ ಮಾಡಿದ್ದಾರೆ.

ಜ್ಞಾನವಾಪಿ ಮಸೀದಿ: ಸಮೀಕ್ಷೆಗೆ ಸುಪ್ರೀಂ ಕೋರ್ಟ್ ತಡೆ

ಒಂದನೇ ಪುಟದಿಂದ...

'ಸದ್ಯ ಸಮೀಕ್ಷೆ ಕಾರ್ಯ ನಿಲ್ಲಿಸಲಾಗಿದೆ' ಎಂದು ವಿಭಾಗೀಯ ಆಯುಕ್ತ ಕೌಶಲ್ ರಾಜ್ ಶರ್ಮಾ ತಿಳಿಸಿದರು.

ಹಿಂದೂ ಅರ್ಜಿದಾರರ ಪರ ವಕೀಲ ಸುಭಾಷ್ ನಂದನ್ ಚತುರ್ವೇದಿ, 'ಸೋಮವಾರ ಸುಮಾರು 4 ಗಂಟೆ ಸಮೀಕ್ಷೆ ನಡೆಯಿತು' ಎಂದು ತಿಳಿಸಿದರು.

ಸಮೀಕ್ಷೆ ಭಾಗವಾಗಿ ಇಡೀ ಸಂಕೀರ್ಣವನ್ನು ಪರಿಶೀಲಿಸಿ ಅಳತೆ ಮಾಡಲಾಗುತ್ತದೆ. ಇದಕ್ಕಾಗಿ ನಾಲ್ಕು ದಿಕ್ಕುಗಳಲ್ಲಿ ತಲಾ ಒಂದು ತಂಡ ನಿಯೋಜಿಸಿದೆ. ಕ್ಯಾಮೆರಾಗಳನ್ನೂ ಅಳವಡಿಸಿದ್ದು, ಇಡೀ ಪ್ರಕ್ರಿಯೆಯ ವಿಡಿಯೊ ಚಿತ್ರೀಕರಣ ಮಾಡಲಾಗುತ್ತದೆ.

ಮತ್ತೊಬ್ಬ ವಕೀಲ ವಿಷ್ಣು ಶಂಕರ್ ಜೈನ್, 'ಮಸೀದಿಯಲ್ಲಿ ದಾಂದಲೆ ನಡೆಸಲಾಗುತ್ತಿದೆ ಎಂದು ಮುಸ್ಲಿಂ ಕಡೆಯವರು ತಪ್ಪು ಹೇಳಿಕೆ ನೀಡಿದ್ದಾರೆ. ಆದರೆ, ಅಲ್ಲಿ ಸದ್ಯ ಅಳತೆ ಮಾಡುವ ಮತ್ತು ಗುರುತಿಸುವ ಕೆಲಸವಷ್ಟೇ ನಡೆಯುತ್ತಿದೆ' ಎಂದು ಹೇಳಿದರು.

ಕೆಳಹಂತದ ಕೋರ್ಟ್ ಆದೇಶದಂತೆ ಸಮೀಕ್ಷೆಗೆ ಚಾಲನೆ ನೀಡಿದ ಸಂದರ್ಭದಲ್ಲಿ ಎಎಸ್‌ಐ ತಂಡವಲ್ಲದೇ ಎಲ್ಲ ಹಿಂದೂ ಅರ್ಜಿದಾರರು ಉಪಸ್ಥಿತರಿದ್ದರು ಎಂದು ವಕೀಲ ಮದನ್ ಮೋಹನ್ ಯಾದವ್ ತಿಳಿಸಿದರು.

ವಾರಾಣಸಿ ಕೋರ್ಟ್ ಶುಕ್ರವಾರ ಎಎಸ್‌ಐಗೆ ಆದೇಶ ನೀಡಿದ್ದು, ಮಸೀದಿ ಪ್ರದೇಶದ ವಿಸ್ತೃತ ವೈಜ್ಞಾನಿಕ ಸಮೀಕ್ಷೆ ನಡೆಸಬೇಕು. ದೇಗುಲವಿದ್ದ ಸ್ಥಳದಲ್ಲಿ ಮಸೀದಿ ನಿರ್ಮಿಸಲಾಗಿದೆ ಎಂಬುದರ ಪತ್ತೆಗೆ ಅಗತ್ಯವೆನಿಸಿದರೆ ಉತ್ಖನನ ನಡೆಸಬೇಕು ಎಂದು ಸೂಚಿಸಿತ್ತು.

ಪ್ರಶಸ್ತಿ ಮರಳಿಸುವುದಿಲ್ಲ: ಪುರಸ್ಕೃತರಿಂದ ಪೂರ್ವ ಹೇಳಿಕೆ ಪಡೆಯಲು ಶಿಫಾರಸು

ಒಂದನೇ ಪುಟದಿಂದ...

ಕೆಲವು ಲೇಖಕರು ತಮ್ಮ ಫಲಕಗಳನ್ನು ಹಿಂತಿರುಗಿಸಿದರೆ, ಇನ್ನೂ ಕೆಲವರು ಪ್ರಶಸ್ತಿಯ ಮೊತ್ತವನ್ನು ಮರಳಿಸಿದ್ದರು. ಆದಾಗ್ಯೂ, ಪ್ರಶಸ್ತಿ ಪುರಸ್ಕೃತರು ತಮ್ಮ ನಿರ್ಧಾರವನ್ನು ಮರುಪರಿಶೀಲಿಸುವಂತೆ ವಿನಂತಿಸುವ ನಿರ್ಣಯವನ್ನು ಅಕಾಡೆಮಿಯ ಕಾರ್ಯಕಾರಿ ಮಂಡಳಿಯು ಅಂಗೀಕರಿಸಿತ್ತು.

ಒಂದು ವೇಳೆ ರಾಜಕೀಯ ಪ್ರತಿಭಟನೆಯ ಸಂಕೇತವಾಗಿ ಪ್ರಶಸ್ತಿಗಳನ್ನು ಹಿಂತಿರುಗಿಸಿದರೆ, ಭವಿಷ್ಯದಲ್ಲಿ ಅವರನ್ನು ಅಂತಹ ಪ್ರಶಸ್ತಿಗೆ ಪರಿಗಣಿಸಬಾರದು ಎಂದು ಸಮಿತಿಯು ಶಿಫಾರಸು ಮಾಡಿದೆ.

ಅಕಾಡೆಮಿಗಳು ರಾಜಕೀಯೇತರ ಸಂಸ್ಥೆಗಳಾಗಿದ್ದು, ಪ್ರಶಸ್ತಿ ವಾಪಸ್ ಮಾಡುವುದು ದೇಶಕ್ಕೆ ಅವಮಾನಕರ ಎಂದು ವೈಎಸ್‌ಆರ್‌ಸಿಪಿ ಸಂಸದ ವಿಜಯ್ ಸಾಯಿ ರೆಡ್ಡಿ ನೇತೃತ್ವದ ಸಮಿತಿಯು ತಿಳಿಸಿದೆ.

'ಪ್ರಸ್ತಾವಿತ ಪ್ರಶಸ್ತಿ ಪುರಸ್ಕೃತರಿಂದ ಪೂರ್ವ ಹೇಳಿಕೆ ಪಡೆಯುವ ವ್ಯವಸ್ಥೆಯನ್ನು ಜಾರಿಗೆ ತರಬಹುದು. ಪ್ರಶಸ್ತಿ ಪುರಸ್ಕೃತರು ಭವಿಷ್ಯದಲ್ಲಿ ಯಾವುದೇ ಸಮಯದಲ್ಲಿ ಪ್ರಶಸ್ತಿಯನ್ನು ಅವಮಾನಿಸುವಂತಿಲ್ಲ. ಪೂರ್ವ ಹೇಳಿಕೆ ನೀಡದಿದ್ದರೆ ಪ್ರಶಸ್ತಿ ನೀಡುವುದಿಲ್ಲ. ಪ್ರಶಸ್ತಿ ಮರಳಿಸಿದವರನ್ನು ಭವಿಷ್ಯದಲ್ಲಿ ಅಂತಹ ಪ್ರಶಸ್ತಿಗೆ ಪರಿಗಣಿಸಲು ಆಗುವುದಿಲ್ಲ ಎಂಬ ಷರತ್ತುಗಳನ್ನು ವಿಧಿಸಬೇಕು' ಎಂದು ಸಮಿತಿ ಹೇಳಿದೆ.

ಕ್ಷೇಮ ಕುಶಲ



ಪರಿಣಾಮಕಾರಿಯಾಗಿ ಕಥೆಗಳನ್ನು ಹೇಳುವ ಲಾಭವನ್ನು ಪ್ರತಿಯೊಂದು ನಾಗರಿಕತೆಯೂ ಅನಾದಿಕಾಲದಿಂದ ಕಂಡುಕೊಂಡಿದೆ. ನಮ್ಮ ದೇಶದ ಪಂಚತಂತ್ರ, ಹಿತೋಪದೇಶ; ಗ್ರೀಕರ ಈಸೋಪನ ಕಥೆಗಳು; ಯುರೋಪಿನ ಆಂಡರ್‌ಸನ್ ಅವರ ಕಾಲ್ಪನಿಕಗಳು ಮೊದಲಾಗಿ ಕಥನ ಇತಿಹಾಸವಿಲ್ಲದ ದೇಶವೇ ಇಲ್ಲ.

ಕಥೆಗಳನ್ನು ಹೇಳಿ, ಕೇಳಿ...

ಡಾ. ಕಿರಣ್ ವಿ. ಎಸ್.

ಬಾಲ್ಯದಲ್ಲಿ 'ಒಂದೂರಲ್ಲಿ ಒಬ್ಬ ರಾಜ' ಎನ್ನುವ ಮಾತು ಕಿವಿಗೆ ಬಿದ್ದ ಕೂಡಲೇ ಮಾಡುವುದೆಲ್ಲವನ್ನೂ ಬಿಟ್ಟು ಅದನ್ನು ಹೇಳುವವರ ಹಿಂದೆ ಹೋಗುವ ತವಕವಿತ್ತು. ಕೆಲವು ಬಾರಿಯಂತೂ ಈ ಮುನ್ನ ಕೇಳಿದ್ದ ಕಥೆಗಳನ್ನೇ ದುಂಬಾಲು ಬಿದ್ದು ಮತ್ತೆ ಮತ್ತೆ ಕೇಳುವ ಮನಸ್ಸಿತ್ತು. ಕಥೆಗಳ ಸೊಬಗೇ ಅಂತಹದ್ದು. ಅದನ್ನು ರಸವತ್ತಾಗಿ ನಿರೂಪಿಸುವವರು ದೊರೆತರಂತೂ ಸ್ವರ್ಗಕ್ಕೆ ಮೂರೇ ಗೇಣು! ಕಥೆ ಕೇಳುವಷ್ಟು ಹೊತ್ತೂ ನಾವು ನಾವಲ್ಲ. ನಮ್ಮ ಇಹವನ್ನು ಒಂದು ಬೇರೆಯೇ ಮಾಯಾಲೋಕಕ್ಕೆ ಒಯ್ಯುವ ಸಾಮರ್ಥ್ಯ ಇರುವುದು ಕಥೆಗಳ ನಿರೂಪಣೆಯ ಪ್ರಕ್ರಿಯೆಗೆ.

ಕಥೆ ಹೇಳುವುದು ವಿಶಿಷ್ಟ ಕಲೆಗಾರಿಕೆ. ಮಾತಿನ ಏರಿಳಿತಗಳ ಜೊತೆಗೆ ಆಂಗಿಕಭಾವಗಳನ್ನು ಕೂಡಿಸಿ ಕಥೆಯ ಅಂಶಗಳನ್ನು ಚಿತ್ರವತ್ತಾಗಿ ನಿರೂಪಿಸುತ್ತಾ ಕೇಳುಗರಲ್ಲಿ ಊಹಾಲೋಕವನ್ನು ಸೃಜಿಸಬಲ್ಲ ಶಕ್ತಿ ಇರುವುದು ಕಥನಕ್ಕೆ. ನಮ್ಮ ಬುದ್ಧಿಗೆ ಸರಕು ಒದಗುವುದು ಐದು ಇಂದ್ರಿಯಗಳಿಂದ. ಕಥೆ ಕೇಳುವ ಪ್ರಕ್ರಿಯೆಯಲ್ಲಿ ಕಿವಿಯ ಪಾತ್ರ ಹಿರಿದು. ನಿರೂಪಕರು ಕಥನದ ವೇಳೆ ತಮ್ಮ ದೇಹಭಾಷೆಯನ್ನೂ ಮೇಳೈಸುತ್ತಿದ್ದರೆ ಕೇಳುಗರ ಕಣ್ಣಿಗೂ ಮಾಹಿತಿ ಒದಗುತ್ತದೆ. ಮಕ್ಕಳು ಕಥೆಗಳನ್ನು ಕೇಳುವಾಗ ಮತ್ತು ಕಾಮಿಕ್ಸ್ ನಂಥ ಸಚಿತ್ರ ಕಥಾಪುಸ್ತಕಗಳನ್ನು ಓದುವಾಗ ಅವರ ಮೆದುಳಿನಲ್ಲಿ ಆಗುವ ಬದಲಾವಣೆಗಳನ್ನು ವಿಜ್ಞಾನಿಗಳು ಸಂಶೋಧಿಸಿದ್ದಾರೆ. ಎರಡೂ ಸಂದರ್ಭಗಳಲ್ಲಿ ಮೊದಲನೆಯ ಬಾರಿ ಮೆದುಳು ಸಮಾನವಾಗಿ ಜಾಗೃತವಾಗುತ್ತವೆ. ಕಲ್ಪನೆಗಳಿಗೆ ಕಾರಣವಾಗುವ ಮೆದುಳಿನ ಮುಂಭಾಗದಲ್ಲಿ ರಕ್ತಸಂಚಾರ ಸರಿಸುಮಾರು ಒಂದೇ ಪ್ರಮಾಣದಲ್ಲಿ ಹೆಚ್ಚುತ್ತದೆ. ಅದೇ ಕಾಮಿಕ್ಸ್ ಕಥೆಯನ್ನು ಮತ್ತೊಮ್ಮೆ ಓದಿದಾಗ ರಕ್ತಸಂಚಾರ ಅಷ್ಟಾಗಿ ಏರುವುದಿಲ್ಲ. ಅಂದರೆ, ಈ ಪುನರಾವರ್ತಿತ ಪ್ರಸಂಗಕ್ಕೆ ಮೆದುಳು ಹೆಚ್ಚೇನೂ ಸ್ಪಂದಿಸುವುದಿಲ್ಲ; 'ಇದು ಈಗಾಗಲೇ ಆಗಿದೆಯಲ್ಲ; ಮತ್ತೆ ಏನಿದೆ' ಎನುವ ರೀತಿ ವರ್ತಿಸುತ್ತದೆ. ಆದರೆ ಕೇಳಿದ ಕಥೆಯನ್ನು ಮತ್ತೊಮ್ಮೆ ಆಲಿಸುವಾಗಲೂ ಮೆದುಳಿಗೆ ಮೊದಲ ಬಾರಿ ಆದ ಅನುಭವವೇ ಆಗುವಂತೆ ರಕ್ತಸಂಚಾರದಲ್ಲಿ ಏರಿಕೆ ಆಗುತ್ತದೆ. ಅಂದರೆ ಕಥೆ ಕೇಳುವ ಅನುಭವ ಪ್ರತಿ ಬಾರಿಯೂ ನವನವೀನ. ಅದಕ್ಕೇ ಮಕ್ಕಳು ಹಿರಿಯರನ್ನು 'ಆ ಮಂಗನ ಕಥೆ ಹೇಳು; ಈ ಮೊಲದ ಕಥೆ ಹೇಳು' ಎಂದು ಪದೇ ಪದೇ ಬೇಡಿಕೊಳ್ಳುತ್ತಾರೆ.



ಪರಿಣಾಮಕಾರಿಯಾಗಿ ಕಥೆಗಳನ್ನು ಹೇಳುವ ಲಾಭವನ್ನು ಪ್ರತಿಯೊಂದು ನಾಗರಿಕತೆಯೂ ಅನಾದಿಕಾಲದಿಂದ ಕಂಡುಕೊಂಡಿದೆ. ನಮ್ಮ ದೇಶದ ಪಂಚತಂತ್ರ, ಹಿತೋಪದೇಶ; ಗ್ರೀಕರ ಈಸೋಪನ ಕಥೆಗಳು; ಯುರೋಪಿನ ಆಂಡರ್‌ಸನ್ ಅವರ ಕಾಲ್ಪನಿಕಗಳು ಮೊದಲಾಗಿ ಕಥನ ಇತಿಹಾಸವಿಲ್ಲದ ದೇಶವೇ ಇಲ್ಲ. ಕಥೆಯನ್ನು ಹೇಳುವುದರಿಂದ ಮತ್ತು ಕೇಳುವುದರಿಂದ ಬಹಳಷ್ಟು ಲಾಭಗಳಿವೆ. ಕಥೆಗಳು ಮಕ್ಕಳ ಊಹಾಶಕ್ತಿಯನ್ನು ಹೆಚ್ಚಿಸುತ್ತವೆ. ಭವಿಷ್ಯದಲ್ಲಿ ತಾವು ಎದುರಿಸಬೇಕಾದ ಸವಾಲಿನ ಸಂದರ್ಭಗಳನ್ನು ಊಹಿಸಿಕೊಂಡು, ತಯಾರಿ ಮಾಡಿಕೊಳ್ಳಬಲ್ಲವರು ಹೆಚ್ಚು ಸಫಲರಾಗುತ್ತಾರೆ ಎಂದು ವಿಜ್ಞಾನ ಹೇಳುತ್ತದೆ. ಅದರ ಬೇರುಗಳು ಅವರು ಬಾಲ್ಯದಲ್ಲಿ ಕೇಳುವ ಕಥೆಗಳಲ್ಲಿವೆ. ಹಿರಿಯರಿಂದ ಕಥೆಗಳಿಗೆ ಪರಿಚಿತರಾಗುವ ಮಕ್ಕಳಿಗೆ ತಮ್ಮ ಇತಿಹಾಸ, ಸಂಸ್ಕೃತಿಗಳ ಪರಿಚಯ ಚೆನ್ನಾಗಿ ಆಗುತ್ತದೆ. ಅವರ ಕಲಿಕೆಯ ಸಾಮರ್ಥ್ಯ ಹೆಚ್ಚುತ್ತದೆ.

ಕಥೆಗಳು ಮಕ್ಕಳಿಗೆ ಆಲಿಸುವ ತಾಳ್ಮೆಯನ್ನು ನೀಡುತ್ತವೆ. ಕಥನಗಳನ್ನು ಪುನಃ ಕೇಳುವ ಮಕ್ಕಳು ಕೂಡ ತಮಗೆ ಇದು ತಿಳಿದಿದೆ ಎಂದು ಮಧ್ಯೆ ಬಾಯಿ ಹಾಕುವುದಿಲ್ಲ. ಬದಲಿಗೆ ಹೆಚ್ಚು ಆಸಕ್ತಿಯಿಂದ ವಿವರಗಳನ್ನು ಆಲಿಸುತ್ತಾರೆ. ಪ್ರಸ್ತುತ ಜೀವನದಲ್ಲಿ ಆಲಿಸುವ ಗುಣ ಬಹಳ ಮುಖ್ಯ. 'ಆಸಕ್ತಿಯಿಂದ ಕೇಳಿಸಿಕೊಳ್ಳುವವರು ಗೆಲ್ಲುವುದು ಹೆಚ್ಚು' ಎಂದು ಮಾನವಸಂಪನ್ಮೂಲದ ಕಾರ್ಪೊರೆಟ್ ಪ್ರಭೃತಿಗಳೂ ಹೇಳುತ್ತಾರೆ. ಕಥನಗಳು ಮಕ್ಕಳ ಶಬ್ದಶಕ್ತಿಯನ್ನು ಹೆಚ್ಚಿಸುತ್ತವೆ; ಹೆಚ್ಚು ಪದಗಳು ಅವರಿಗೆ ಪರಿಚಿತವಾಗುವುದಷ್ಟೇ ಅಲ್ಲದೆ, ಅವನ್ನು ಎಂತಹ ಸಂದರ್ಭಗಳಲ್ಲಿ ಬಳಸಬೇಕೆನ್ನುವ ಪರಿಜ್ಞಾನವೂ ಬೆಳೆಯುತ್ತದೆ. ಒಳ್ಳೆಯ ಭಾಷೆಯನ್ನು, ಪರಿಣಾಮಕಾರಿಯಾದ ಪದಗಳನ್ನು ಮಾತು-ಬರಹಗಳಲ್ಲಿ ಬಳಸಬಲ್ಲವರು ಸಾಮಾಜಿಕ ಏಣಿಯನ್ನು ಬಹಳ ಬೇಗ ಏರಬಲ್ಲರು. ಅಂತಹವರ ಬಗ್ಗೆ ಎಲ್ಲರಿಗೂ ಅಭಿಮಾನ; ಅವರು ಎಲ್ಲರಿಗೂ ಬೇಕು. ಕಥೆಗಳನ್ನು ಅನುಭವಿಸುವ ಮಕ್ಕಳ ಸಹಾನುಭೂತಿ ವೃದ್ಧಿಸುತ್ತದೆ. ಅವರು ಇತರರ ಜೊತೆಗೆ ಭಾವನಾತ್ಮಕವಾಗಿ ಗುರುತಿಸಿಕೊಳ್ಳಬಲ್ಲರು. ಮಾನವ ಸಂಪನ್ಮೂಲಗಳ ಅಗತ್ಯ ತೀವ್ರವಾಗಿರುವ ಇಂದಿನ ದಿನಗಳಲ್ಲಿ ಇಂತಹ ವ್ಯಕ್ತಿಗಳು ಯಾವುದೇ ಉದ್ಯಮಕ್ಕೂ ಬಹಳ ಅಗತ್ಯವಾಗಿ ಬೇಕಾಗುತ್ತಾರೆ.

ಇಂದಿನ ದಿನಗಳಲ್ಲಿ ಮಕ್ಕಳು ಪರದೆಗಳಿಗೆ ಅಂಟಿಕೊಳ್ಳುವ ಅಪಾಯ ಹೆಚ್ಚಾಗಿದೆ. ದೂರದರ್ಶನದ ಪರದೆ, ಲ್ಯಾಪ್ ಟಾಪ್ ಪರದೆ, ಮೊಬೈಲ್ ಫೋನಿನ ಪರದೆ, ಕಂಪ್ಯೂಟರಿನ ಪರದೆ - ಹೀಗೆ ವಿವಿಧ ಪರದೆಗಳನ್ನು ದಿನದ ಹಲವಾರು ಗಂಟೆಗಳ ಕಾಲ ಏಕಾಂಗಿಯಾಗಿ ವೀಕ್ಷಿಸುತ್ತಾರೆ. ಅವರ ಶಾಲೆಯ ಪ್ರಾಜೆಕ್ಟುಗಳಿಂದ ಹಿಡಿದು, ಸ್ನೇಹಿತರ ಒಡನಾಟ ಹಾಗೂ ಮನರಂಜನೆಯವರೆಗೆ ಪರದೆಗಳೇ ಆಧಾರ. ಇದರಿಂದ ಆಗಬಹುದಾದ ಅನಾಹುತಗಳ ಬಗ್ಗೆ ಅನೇಕಾನೇಕ ಅಧ್ಯಯನಗಳು ನಡೆದಿವೆ. ಇದು ಬೆಳೆದು ಅವಲಂಬನೆಯೆಂಬ ಮನೋವ್ಯಾಧಿಯ ಹಂತ ತಲುಪಿ, ಮಕ್ಕಳು ಪರದೆಗಳ ದಾಸ್ಯದಿಂದ ಹೊರಬರಲು ಮನೋವೈದ್ಯರ ಸಹಾಯ ಬೇಕಾಗುತ್ತದೆ. ಈ ನಿಟ್ಟಿನಲ್ಲಿ ಕಥೆಗಳನ್ನು ಹೇಳುವುದು ಬಹಳ ಸಹಕಾರಿ. ಪರದೆಗಳು ನೀಡದ ಶಕ್ತ ಅನುಭವವನ್ನು ಸಮರ್ಥ ಕಥನಕಾರರು ನೀಡಬಲ್ಲರು. ಆದರೆ, ಕುಟುಂಬಗಳಲ್ಲಿ ಈ ಕಲೆಗಾರಿಕೆ ಕ್ರಮೇಣ ನಶಿಸುತ್ತಿರುವುದು ನಮಗೆ ಎಚ್ಚರಿಕೆಯ ಗಂಟೆಯಾಗಬೇಕು.

ಕಥೆಗಳನ್ನು ಕೇಳುವುದಷ್ಟೇ ಅಲ್ಲ; ಕಥೆಗಳನ್ನು ಹೇಳುವ ಕಲೆಯೂ ಮಕ್ಕಳಲ್ಲಿ ಬೆಳೆಯಬೇಕು. ತಾನು ಹಲವು ಬಾರಿ ಕೇಳಿರುವ ಕಥೆಯನ್ನು ಇತರರಿಗೆ ಹೇಳುವಾಗ ಮಕ್ಕಳ ಕಲ್ಪನೆಯ ಸಾಮರ್ಥ್ಯ ಜಾಗೃತವಾಗುತ್ತದೆ. ನೆನಪಿನ ಶಕ್ತಿ ಬೆಳೆಯುತ್ತದೆ. ಮಾಹಿತಿಯನ್ನು ವ್ಯವಸ್ಥಿತವಾಗಿ ಪ್ರಸ್ತುತ ಪಡಿಸುವ ರೂಢಿಯಾಗುತ್ತದೆ. ಕಥೆಯೊಳಗೆ ತನಗೆ ಇಷ್ಟವಾಗದ ಅಂಶಗಳನ್ನು ಕಡಿತಗೊಳಿಸಿ, ತನಗೆ ನೆಚ್ಚುವ ವಿವರಗಳನ್ನು ಸೇರಿಸುವ ಯುಕ್ತಾಯುಕ್ತ ವಿವೇಚನೆ ಆರಂಭವಾಗುತ್ತದೆ. ಸಣ್ಣ ವಯಸ್ಸಿನಿಂದ ಕಥೆಗಳನ್ನು ಹೇಳುವ ಅಭ್ಯಾಸ ಮಾಡಿಕೊಂಡ ಮಕ್ಕಳಿಗೆ ಸಭಾಕಂಪನ ಕಾಡುವುದು ಕಡಿಮೆ. ಅಗತ್ಯ ವಿವರಗಳನ್ನು ನಿರ್ದಿಷ್ಟ ಕ್ರಮದಲ್ಲಿ ಸ್ಪಷ್ಟವಾಗಿ ಹೇಳಬಲ್ಲವರು ತಮ್ಮ ವೃತ್ತಿ-ಪ್ರವೃತ್ತಿಗಳಲ್ಲಿ ಒಳ್ಳೆಯ ಪ್ರಗತಿ ಸಾಧಿಸಬಲ್ಲರು.

ಮಕ್ಕಳಿಗೆ ಚೆನ್ನಾದ ಕಥೆಗಳನ್ನು ಕೇಳಿಸುವ, ಅವರಿಂದ ಹೇಳಿಸುವ ಪ್ರಕ್ರಿಯೆಯನ್ನು ಆರಂಭಿಸಿ ಮುಂದುವರೆಸಲು 'ಇಂದಿನ ದಿನವೇ ಶುಭದಿನವು'. ❖



ಮನೆ ಎನ್ನುವುದು ಸರ್ವಸದಸ್ಯರ ಸಮಾನ ಜವಾಬ್ದಾರಿಸಹಿತ ಸಂಘಟನೆ. ಲಿಂಗ–ವಯಸ್ಸು ಮುಂತಾದವುಗಳ ತಾರತಮ್ಯವಿಲ್ಲದೆ, ಹಕ್ಕುಗಳ ಸ್ಥಾಪನೆಗೆ ಹೋರಾಡದೆ ಒಟ್ಟಿಗೆ ಇರಬೇಕಾದ ಆವಶ್ಯಕತೆಯನ್ನು ಮನೆಯ ಸದಸ್ಯರು ಅರಿಯಬೇಕು. ಮನೆಯ ಕಲ್ಪನೆಯೇ ಸುಂದರವಾದದ್ದು.

ಮನೆಯೊಂದಾಗಲು ಮನೆಗೆಲಸ ಮಾಡಿ

ರಘು ವಿ.

'ಮನೆಗೆಲಸದವಳು ಬಂದಿಲ್ಲ, ಎಲ್ಲ ಕೆಲಸ ಬಾಕಿ ಇವೆ' ಕಾಫಿಲೋಟವನ್ನು ಕೈಗೆ ನೀಡುತ್ತ ಮಡದಿ ನುಡಿದರೆ, 'ಹೆದರದಿರು, ನಾನೂ ಕೈಜೋಡಿಸಿ ಮನೆಗೆಲಸ ಮುಗಿಸಲು ಸಹಾಯ ಮಾಡುತ್ತೇನೆ' ಎನ್ನುವ ಗಂಡಸರೆಷ್ಟು ಮಂದಿ? 'ವಾಷಿಂಗ್ ಮೆಷಿನ್ ಬಟ್ಟೆ ಒಗೆದು ಮುಗಿಸಿದೆ, ಮೇಲೆ ಹೋಗಿ ಬಟ್ಟೆ ಒಣಗಿಹಾಕಿ ಬಾ ವರುಣ'. 'ಹೋಗಮ್ಮ, ಶಾಲಿನಿಗೆ ಹೇಳು'. ಇಂತಹ ಸಂವಾದ ನಡೆದ ಸಂದರ್ಭಗಳಿವೆಯಲ್ಲವೆ?

ಮನೆ ಎನ್ನುವುದು ಸರ್ವಸದಸ್ಯರ ಸಮಾನ ಜವಾಬ್ದಾರಿಸಹಿತ ಸಂಘಟನೆ. ಲಿಂಗ–ವಯಸ್ಸು ಮುಂತಾದವುಗಳ ತಾರತಮ್ಯವಿಲ್ಲದೆ, ಹಕ್ಕುಗಳ ಸ್ಥಾಪನೆಗೆ ಹೋರಾಡದೆ ಒಟ್ಟಿಗೆ ಇರಬೇಕಾದ ಆವಶ್ಯಕತೆಯನ್ನು ಮನೆಯ ಸದಸ್ಯರು ಅರಿಯಬೇಕು. ಮನೆಯ ಕಲ್ಪನೆಯೇ ಸುಂದರವಾದದ್ದು. ಆದರೆ ಸಮಾಜದಲ್ಲಿ ಆದಂತೆಯೇ ಕಾಲಕ್ರಮದಲ್ಲಿ ಮನೆಯಲ್ಲಿಯೂ ಪುರುಷಪ್ರಧಾನ ಮಾದರಿ ನೆಲೆಗೊಂಡಿತು. ಹೆಣ್ಣು ಮನೆವಾರ್ತೆ ನೋಡಿಕೊಳ್ಳಬೇಕು; ಗಂಡ-ಮಕ್ಕಳನ್ನು ಪೋಷಿಸಬೇಕು. ಗಂಡು ಹೊರಗೆ ದುಡಿದು ತರಬೇಕು; ಪೋಷಕದ್ರವ್ಯ ಮತ್ತು ರಕ್ಷಣೆ ಒದಗಿಸಬೇಕು. ಇದು ಅಲಿಖಿತ ನಿಯಮವಾಗಿ ಮುಂದುವರಿದಿತ್ತು. ಆದರೆ ಇಂದು ಪರಿಸ್ಥಿತಿ ಬೇರೆಯದೇ ಆಗಿದೆ. ಈಗಿನ ದಶಕಗಳಲ್ಲಿ ಹೆಣ್ಣು ಕೂಡ ಹೊರಜಗತ್ತಿಗೆ ತನ್ನ ಕೌಶಲವನ್ನು ಮೆರೆದು ದೇಶ ಮತ್ತು ಕುಟುಂಬದ ಆರ್ಥಿಕ ಬಲವರ್ಧನೆಗೆ ನೆರವಾಗುತ್ತಿದ್ದಾಳೆ. ಆದರೆ ಮನೆವಾರ್ತೆಯಲ್ಲಿ ಅವಳ ಕೆಲಸದ ಭಾಗ ಅಷ್ಟೇ ಪ್ರಮಾಣದಲ್ಲಿ ಕಡಿಮೆಯಾಗಿದೆಯೆ ಎಂಬುದು ಪ್ರಶ್ನೆ. ಕೊರೊನಾ ಕಾಲದಲ್ಲಿ ಲಾಕ್‌ಡೌನ್ ಕಾರಣದಿಂದಾಗಿ ಒಂದಿಲ್ಲೊಂದು ವಿಭಾಗದಲ್ಲಿ ಮನೆಯವರೆಲ್ಲ ಮನೆಗೆಲಸದಲ್ಲಿ ತೊಡಗಿಕೊಂಡಿದ್ದು ಕೆಲವರ ಕಣ್ತೆರೆಸಿತು. ಮನೆಯ ನಿರ್ವಹಣೆಯಲ್ಲಿ ಎಷ್ಟೊಂದು ಉಪಕೆಲಸಗಳಿವೆ ಎಂಬ ಜ್ಞಾನೋದಯದ ಪರಿಣಾಮ ಆಮೇಲಿನ ದಿನಗಳಲ್ಲಿ ಅವರು ಕೈಜೋಡಿಸುವಂತೆ ಮಾಡಿತು. ಕುಟುಂಬದ ಸಹಭಾಗಿತ್ವ ಆರಂಭವಾಗುವುದೇ ಕೆಲಸದಲ್ಲಿ ತೊಡಗುವುದರಿಂದ. ಅದರ ಪ್ರಯೋಜನಗಳನ್ನು ಗಮನಿಸೋಣ.

ಕುಟುಂಬವೆಂಬುದು ಸಮಾಜದ ಸಣ್ಣ ಘಟಕ. ಅದು ಸ್ಥಿರವಾಗಿದ್ದರೆ ಸಮಾಜವೂ ಸುಸ್ಥಿರ. ಸ್ಥಿರತೆಯ ಮೂಲ ಅಂಶ ಸಹಬಾಳ್ವೆ, ಸಹಭಾಗಿತ್ವ. ಗಂಡ-ಹೆಂಡತಿ-ಮಕ್ಕಳು ಸೇರಿ ಒಂದು ಕುಟುಂಬ. ಮಕ್ಕಳನ್ನು ಬೆಳೆಸುವುದರಲ್ಲೂ ಅವರನ್ನು ಸಮರ್ಥ ಪ್ರಜೆಗಳನ್ನಾಗಿಸಲೂ ಕುಟುಂಬ ಒಂದು ವ್ಯಕ್ತಿನಿರ್ಮಾಣಕಾರಿ ವ್ಯವಸ್ಥೆಯಾಗಿ ದುಡಿಯುತ್ತದೆ. ಇಂದಿನ ಒತ್ತಡಗಳ ನಡುವಣ ಬದುಕಿನಲ್ಲಿ ಕುಟುಂಬಕ್ಕೆ ಬೇಕಾದ ಮಾನಸಿಕ ಒತ್ತಾಸೆ, ಸಮಯ ನೀಡುವುದು ಕೂಡ ಸವಾಲೇ. ಆದರೆ ಇದು ಅನಿವಾರ್ಯ ಎಂಬ ಅರಿವಿರಬೇಕು. ಮನೆಯಲ್ಲಿರುವ ಸಮಯದಲ್ಲಿ, ಸದಸ್ಯರು ಪೂರ್ಣ ಗಮನವನ್ನು ಮನೆಯತ್ತ ನೀಡಿ ಮನೆಗೆಲಸಗಳಲ್ಲಿ ತೊಡಗಿದರೆ ಬಾಂಧವ್ಯದ ಗುಣಮಟ್ಟ ವರ್ಧಿಸುತ್ತದೆ.



ಪತ್ನಿ ಅಡುಗೆಮನೆಯ ಕಟ್ಟೆ ಸ್ವಚ್ಛಗೊಳಿಸುತ್ತಿದ್ದಾಗ ಪತಿಯು ಸೋಫಾ ಮೇಲೆ ಕಾಲು ಚಾಚಿ ಕೂತು ಟ.ವಿ. ವೀಕ್ಷಿಸುವ ಬದಲು ಅಡುಗೆಮನೆಯ ಪಾತ್ರೆ ಜೋಡಿಸುವುದೋ, ಇಲ್ಲ ಸಿಂಕಿನಲ್ಲಿ ಬಿದ್ದ ಪಾತ್ರೆಗಳನ್ನು ತೊಳೆಯುವುದೋ ಮಾಡುತ್ತ ಗಂಡ-ಹೆಂಡತಿ ಮಾತಾಡಿಕೊಂಡರೆ ಅದು ನಿಜವಾದ ದಾಂಪತ್ಯಸಲ್ಲಾಪ. ಇದನ್ನು ಮಕ್ಕಳು ಗಮನಿಸುತ್ತಾರೆ, ತಾವೂ ಅನುಕರಿಸುತ್ತಾರೆ. ಇದೇ ಸಮಯದಲ್ಲಿ ಮಕ್ಕಳಿಬ್ಬರಲ್ಲಿ ಒಬ್ಬರನ್ನು ಮರುದಿನದ ತಿಂಡಿಗೆ ಅಣಿಗೊಳಿಸಲು, ಮತ್ತೊಬ್ಬರನ್ನು ತರಕಾರಿ ಹೆಚ್ಚಲು ಕೂರಿಸಿದರೆ ಅವರೂ ಮಾತಿನಲ್ಲಿ ತೊಡಗಿದರೆ ಅಲ್ಲೊಂದು ಆರೋಗ್ಯಯುತ ಸಂತೋಷಯುಕ್ತ ಕುಟುಂಬದ ವಾತಾವರಣ ನಿರ್ಮಾಣವಾಗುತ್ತದೆ. ಬಾಂಧವ್ಯ ರಕ್ತವನ್ನು ಹಂಚಿಕೊಳ್ಳುವುದರಿಂದ, ಕೇವಲ ಒಟ್ಟಿಗಿರುವುದರಿಂದ ಸ್ಥಾಪಿತವಾಗುವುದಿಲ್ಲ. ಒಟ್ಟಾಗಿ ಕೆಲಸ ಮಾಡುವುದರಿಂದ ಅದು ಗಟ್ಟಿಯಾಗುತ್ತ ಹೋಗುತ್ತದೆ. ಯಾವಾಗ ಮನೆಯ ಸದಸ್ಯರೆಲ್ಲ ಮನೆಗೆಲಸದಲ್ಲಿ ಪಾತ್ರವಹಿಸಲು ಆರಂಭಿಸುತ್ತಾರೋ ಆಗ ಅವರಿಗೆ ತಮ್ಮ ಕೊಡುಗೆಯ ಬಗ್ಗೆ ಅಭಿಮಾನ ಮೂಡುತ್ತದೆ; ಮನೆಯ ಸದಸ್ಯರಾಗಿ ಜವಾಬ್ದಾರಿಯ ಅರಿವು ಮೂಡುತ್ತದೆ. ಇದರಿಂದ ಅವರು ಹೆಚ್ಚು ಉತ್ಸಾಹಿಗಳೂ ಸಂತೋಷಿಗಳೂ ಆಗುತ್ತಾರೆ. ಇದು ಸತತವಾಗಿ ನಿಯತವಾಗಿ ನಡೆಯಬೇಕಾದ ವ್ಯವಸ್ಥೆ. ಜೊತೆಗೆ ಸೂಕ್ತ ಪ್ರೋತ್ಸಾಹವನ್ನೂ ನೀಡುತ್ತಿರಬೇಕು, ಸಕಾಲಿಕ ಬಹುಮಾನಗಳ ಘೋಷಣೆಯೂ ಆಗಬೇಕು. ಉದಾಹರಣೆಗೆ: ಅಪ್ಪ-ಮಗಳು ಸೇರಿ ಕಾರು ತೊಳೆದು ಗೆರಾಜು ಸ್ವಚ್ಛಗೊಳಿಸಿದರೆ ಅಂದು ತಾಯಿ-ಮಗ ಸೇರಿ ರುಚಿಕರವಾದ ಖಾದ್ಯಗಳನ್ನು ಊಟಕ್ಕೆ ಅಣಿಮಾಡುತ್ತಾರೆ. ಮಗ-ಮಗಳು ಅಟ್ಟವನ್ನು ಶುಚಿಗೊಳಿಸಿದರೆ ಅಂದು ಸಂಜೆ ಅವರಿಗಿಷ್ಟವಾದ ಹೊಟೇಲಿನಲ್ಲಿ ಡಿನ್ನರ್. ಅಮ್ಮ-ಅಪ್ಪ ಸೇರಿ ಮನೆಯ ಮುಂದಣ ಕೈತೋಟ ಸ್ವಚ್ಛ ಮಾಡಿದರೆ ಅವರ ವಿವಾಹಮಹೋತ್ಸವಕ್ಕೆ ಮಕ್ಕಳಿಂದ ವಿಶೇಷ ಉಡುಗೊರೆ. ಹೀಗೆ ತಮಾಷೆ, ಖುಷಿ ಸಂಭ್ರಮಗಳನ್ನು ಒಟ್ಟಾಗಿ ಕಂಡುಕೊಳ್ಳುವ ಮಾರ್ಗ ಮನೆಗೆಲಸವಾಗಬೇಕು.

ಪರಸ್ಪರ ಮಾತುಕತೆಗೆ ಪ್ರತ್ಯೇಕವಾದ ಸಮಯ ನಿಗದಿ ಮಾಡಲು ಮನೆಯೇನು ಕಚೇರಿ ಅಲ್ಲ. ಕೆಲಸ ಮಾಡುತ್ತಲೋ ಅಥವಾ ಊಟ, ತಿಂಡಿಗೆ ಒಟ್ಟಾಗಿ ಕುಳಿತಾಗಲೋ ಮುಕ್ತವಾಗಿ ಮಾತನಾಡಬೇಕು. ಮುಖ್ಯವಾಗಿ ಮಕ್ಕಳು ಮಾತನಾಡುವಾಗ ತಾಳ್ಮೆಯಿಂದ ಕೇಳಿಸಿಕೊಳ್ಳಬೇಕು. ಮಾತನಾಡುವುದೆಂದರೆ ಮಾತೇ. ಅಂದರೆ ಕೇವಲ, 'ಸರಿ', 'ಹೂಂ', 'ಉಹೂಂ' ಅಲ್ಲ. ಸರಿಯಾಗಿ ಇಡೀ ವಾಕ್ಯಗಳು ಇರಲಿ. ಮತ್ತು ಇತರರು ಮಾತನಾಡಲು ಪ್ರೋತ್ಸಾಹ ನೀಡಬೇಕು. 'ಹೌದಾ?' 'ಅಮೇಲೇನಾಯ್ತು?', 'ಓಹೋ, ಮುಂದೆ?' ಇತ್ಯಾದಿಯಾಗಿ ಸಂವಾದವನ್ನು ಹೆಚ್ಚು ರಸವತ್ತಾಗಿ ವಿವರವಾಗಿ ಮುಂದುವರೆಸಲು ಪರಸ್ಪರ ಪ್ರೋತ್ಸಾಹ ನೀಡಬೇಕು. ಮಾತನಾಡುವುದೂ ಮನೆಗೆಲಸವೇ! ಇಲ್ಲವಾದರೆ ಮನೆಯವರು ಅನುಕಂಪದಿಂದ ಕೇಳುವ ಹೊರಗಿನವರಿಗೆ ಹತ್ತಿರವಾಗುವ, ಮನೆಯವರಿಂದ ದೂರವಾಗುವ ಅಪಾಯವಿದೆ. ಶಿಶುಪಾಲನೆಯಿಂದ ಮೊದಲ್ಗೊಂಡು ಮನೆಯ ಕೆಲಸಗಳು ಹೊರಗಿನ ಕೆಲಸಗಳು ಎಂಬ ತಾರತಮ್ಯವಿಲ್ಲದೆ ಕುಟುಂಬದ ಸದಸ್ಯರೆಲ್ಲರೂ ಒಟ್ಟಾಗಿ ಜವಾಬ್ದಾರಿಯಿಂದ ಕೆಲಸ ಮಾಡುವ ಕಾಲ ಇದು. ಇಲ್ಲಿ ಯಾರಿಗೂ ವಿನಾಯಿತಿ ಇರದು. ಮಕ್ಕಳಲ್ಲಿ ಲಿಂಗತಾರತಮ್ಯ ಬಾರದಂತೆ ಅವರನ್ನು ಎಲ್ಲ ಬಗೆಯ ಕೆಲಸಗಳಲ್ಲಿ ತೊಡಗಿಸಿ ಅವರ ಮುಂದಿನ ಜೀವನವನ್ನು ಹಸನಾಗಿಸಲೂ ಮನೆ, ಮನೆಗೆಲಸ ಒಂದು ಮಾದರಿ ಪಾಠಶಾಲೆ. ಹೀಗೆ 'ಮನೆಗೆಲಸ' ಮಕ್ಕಳಿಗಷ್ಟೇ ಅಲ್ಲ, ಹಿರಿಯರಿಗೂ ಬೇಕು. ಮನೆಯೊಂದಾಗಲು ಮನೆಯ ಸದಸ್ಯರೆಲ್ಲ ಸೇರಿ ಮನೆಗೆಲಸ ಮಾಡಬೇಕು. ❖

ಒಂಟಿಯಲ್ಲ ನೀ...



ಸುಷ್ಮಾ ಸವಸುದ್ದಿ

ಜೀವನ ಒಂದು ಕಾಲಘಟ್ಟಕ್ಕೆ ತಲುಪಿದಾಗ, ಇದ್ದಕ್ಕಿದ್ದಂತೆ ಒಂಟಿತನ ಆವರಿಸಿ ಜೀವನ ವ್ಯರ್ಥ ಅನ್ನಿಸುತ್ತದೆ. ಶಿಕ್ಷಣ, ವೃತ್ತಿ ಕಾರಣಕ್ಕೆ ದೂರದೂರಿಗೆ ಹೋಗಿ ನೆಲೆಸಿದವರಿಗೆ ಇದು ಪದೇ ಪದೇ ಅನುಭೂತಿಗೆ ಬರುತ್ತದೆ. 'ಜೀವನಪೂರ್ತಿ ಜೊತೆಗಿರುವೆ' ಎಂದು ನೂರಾರು ಆಣೆ, ಪ್ರಮಾಣ ಮಾಡಿದವರು ದೂರವಾದಾಗ, ಸಂತಸ- ನೋವುಗಳನ್ನು ಹಂಚಿಕೊಳ್ಳಲು ಯಾರೂ ಸೂಕ್ತ ವ್ಯಕ್ತಿಗಳು ಸಿಗದಿದ್ದಾಗ ಒಬ್ಬಂಟಿತನ ಕಾಡುತ್ತದೆ. ಜೀವನೋತ್ಸಾಹವನ್ನೆಲ್ಲ ನುಂಗಿ ಬಿಡುತ್ತದೆ. ಇಂತಹ ಖಿನ್ನತೆಗಳು ತೀರಾ ಅಪಾಯ. ಆತ್ಮಹತ್ಯೆಗೂ ಪ್ರಚೋದಿಸಬಹುದು.

ಈ ಒಂಟಿತನ ಎಂದರೆ,ತಮ್ಮ ಪಾಲಿಗೆ ಯಾರೂ ಇಲ್ಲ ಎಂಬ ಭಾವ ಮೂಡುವಂಥದ್ದು. ಸರಳವಾಗಿ ಹೇಳುವುದಾದರೆ, ಅತಿಯಾಗಿ ನಂಬಿದವರು ದೂರವಾಗುವುದು, ನಮ್ಮವರು ಎಂದುಕೊಂಡವರ ತಿರಸ್ಕಾರ ಅಥವಾ ಅವರ ನಡವಳಿಕೆಯಲ್ಲಾದ ವ್ಯತ್ಯಾಸ ಇರಬಹುದು. ಯಾವ ವಯಸ್ಸಿನಲ್ಲಾದರೂ, ಜೀವನದ ಯಾವ ಹಂತದಲ್ಲಾದರೂ ಈ ತರಹದ ಒಂಟಿತನ ನುಸುಳಿ ಬಿಡಬಹುದು.

ಅಪ್ಪ–ಅಮ್ಮನ ಕೆಲಸದ ಮಧ್ಯೆ ನಿರ್ಲಕ್ಷಕ್ಕೊಳಗಾದ ಮಗು, ತನ್ನಲ್ಲಿರುವ ಯಾವುದೋ ಒಂದು ಕೊರತೆಯಿಂದ ಸಮಾಜ ತನ್ನನ್ನು ತಿರಸ್ಕರಿಸುತ್ತಿದೆ ಎಂಬ ಭಾವ. ಪ್ರೀತಿ ಪಾತ್ರರೊಬ್ಬರು ದೂರವಾದರು ಎಂಬ ನೋವು, ಸಂಗಾತಿಯನ್ನು ಕಳೆದುಕೊಂಡಾಗ, ಓದು– ದುಡಿಮೆಯ ನೆಪದಲ್ಲಿ ತಮ್ಮವರನ್ನು ಬಿಟ್ಟು ಬದುಕು ದೂಕುತಿರುವಾಗ, ಜೀವನದುದ್ದಕ್ಕೂ ಓಡಿಯೂ ಸೋಲುಂಡಾಗ, ಮಕ್ಕಳು ತಮ್ಮ ತಮ್ಮ ಜೀವನದಾರಿಯಲ್ಲಿ ಹೆತ್ತವರನ್ನು ಮರೆತು ಓಡುತ್ತಿರುವಾಗ ಇಳಿವಯಸ್ಸಿನ ಹೆತ್ತವರಲ್ಲಿ ಉಂಟಾಗುವ ಜುಗುಪ್ಸೆ...ಹೀಗೆ ಅನೇಕ ಸಂಗತಿಗಳು ಒಂಟಿತನಕ್ಕೆ ದೂಡುತ್ತವೆ.

'ನಮಗೆ ಯಾರೂ ಇಲ್ಲ ಅಥವಾ ನಾನು ಯಾರೊಂದಿಗೂ ಸೇರಲು ಅರ್ಹವಲ್ಲ' ಎಂಬ ಭಾವ ಮೂಡಿದರಂತೂ ಪರಿಸ್ಥಿತಿ ಕೈಮೀರಿತೆಂದೇ ಅರ್ಥ. ಸುತ್ತಮುತ್ತಲಿನ ಪ್ರಕೃತಿ, ಆಗು–ಹೋಗುಗಳು ಕಣ್ಣಿಗೆ ಕಾಣುವುದೇ ಇಲ್ಲ. ಮನಸ್ಸು ಯಾರನ್ನೂ ಮಾತನಾಡಿಸಲು, ಇತರರೊಂದಿಗೆ ಬೆರೆಯಲು ಇಚ್ಛಿಸುವುದಿಲ್ಲ. ಕಳೆದು ಹೋದದ್ದನ್ನೇ ಕೆದರತೊಡಗಿದರೆ, ನೋವು ಗಾಢವಾಗುತ್ತದೆ ಹೊರತು ಯಾವ ಪ್ರಯೋಜನವೂ ಆಗುವುದಿಲ್ಲ.

ಹಾಗಿದ್ದರೆ, ಈ ಒಂಟಿತನ ಮೀರುವುದು ಹೇಗೆ?

ಏಕಾಂತಕ್ಕಿಂತ ಉತ್ತಮ ಸಂಗಾತಿ ಬೇಕೆ?

ಒಂಟಿತನವನ್ನು ಗೆಲ್ಲುವ ಉತ್ತಮ ದಾರಿಯೆಂದರೆ ಆ ಒಬ್ಬಂಟಿತನವನ್ನು ಏಕಾಂತವನ್ನಾಗಿ ಪರಿವರ್ತಿಸುವುದು. ಹೌದು ಏಕಾಂತ ಕೊಡುವ ಸುಖವನ್ನು, ಒಬ್ಬಂಟಿತನ ಕೊಡುವ ನೋವನ್ನು ಬೇರೆ ಯಾವುದು ನೀಡಲಾಗದು. ಏಕಾಂತ ಮತ್ತು ಒಂಟಿತನ ಎರಡರಲ್ಲೂ ಇರುವವರು ನಾವೊಬ್ಬರೆ ಆದರೂ ಅವುಗಳ ಭಾವ, ಪರಿಣಾಮ ಬೇರೆಯೇ. ಒಂಟಿತನ ಖಿನ್ನತೆಯ ಪರಮಾವಧಿಯಾದರೆ ಏಕಾಂತ ಸ್ವಾತಂತ್ರ್ಯದ ಪರಮಾವಧಿ. ನಮ್ಮ ಸಾಂಗತ್ಯವನ್ನು ಸ್ವತಃ ನಾವೇ ಸಂಭ್ರಮಿಸಬೇಕು. ಅದಕ್ಕೆ ವಿವೇಕಾನಂದರು ಹೇಳಿದ್ದು: 'ದಿನಕ್ಕೆ ಸ್ವಲ್ಪ ಹೊತ್ತು ಆದರೂ ನಿಮ್ಮೊಂದಿಗೆ ನೀವು ಮಾತನಾಡಿ. ಇಲ್ಲದಿದ್ದರೆ, ಜಗತ್ತಿನ ಅದ್ಭುತ ವ್ಯಕ್ತಿಯೊಂದಿಗಿನ ಸಂಪರ್ಕದಿಂದ ವಂಚಿತರಾಗುತ್ತೀರಿ'. ನಮ್ಮೊಳಗಿರುವ ಚೆಂದದ ಕಲ್ಪನೆ, ನಮ್ಮನ್ನು ಬದುಕಿಸುವ ನಮ್ಮ ಕನಸುಗಳೊಂದಿಗೆ ಸ್ವಲ್ಪ ಹೊತ್ತು ಮಾತನಾಡಿ. ಆನಂದಿಸಿ.

ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಳ್ಳಿ

ನಾವಿಂದು ಏನಾಗಿದ್ದೇವೋ ಅದರಲ್ಲಿ ನಮ್ಮ ಹವ್ಯಾಸಗಳ ಪಾಲಿದೆ. ನಮ್ಮ ಹವ್ಯಾಸಗಳು ನಮ್ಮ ಪ್ರತಿಬಿಂಬ. ಓದು, ಬರಹ, ಹಾಡು ಕೇಳುವುದು, ಕೈತೋಟ ಮಾಡುವುದು ಇಂಥ ಸಕಾರಾತ್ಮಕ ಹವ್ಯಾಸಗಳು ಮನಸ್ಸಿಗೆ ಮುದ ನೀಡುತ್ತವೆ. ಜತೆಗೆ ವ್ಯಕ್ತಿತ್ವ ವಿಕಸನಕ್ಕೂ ಉತ್ತಮ ದಾರಿ ಮಾಡಿಕೊಡುತ್ತವೆ. ಪುಸ್ತಕಗಳಿಗಿಂತ ಉತ್ತಮ ಸಂಗಾತಿ ಇರಲು ಸಾಧ್ಯವಿಲ್ಲ. ಓದು ನಮ್ಮ ಒಂಟಿತನಕ್ಕೆ ಮದ್ದಾಗಬಹುದು. ಹಾಡಿನ ಯಾವುದೋ ಒಂದು ಸಾಲು ಆಪ್ತ ಎನ್ನಿಸಬಹುದು. ಓದಿದ ಕಥೆ, ಬಿಡಿಸಿದ ಚಿತ್ರ ನಮ್ಮೊಳಗೊಂದು ಹೊಸತನ ಹುಟ್ಟಿಸಬಹುದು. ಜೀವನೋತ್ಸಾಹ ಚಿಗುರಿಸಬಹುದು.

ಪೆಟ್‌ಗಳಿಗೆ ಪೆಟ್ ಆಗಿ

ಕೆಲವರಿಗೆ ಸಾಕುಪ್ರಾಣಿಗಳು ತಮ್ಮ ಅಗತ್ಯವನ್ನು ಪೂರೈಸುವ ಜೀವಗಳಾದರೆ, ಅದೆಷ್ಟೋ ಜನರಿಗೆ ಅವು ಬದುಕಿನ ಭಾಗವಾಗಿ, ಅವರೆಲ್ಲ ಭಾವಗಳಲ್ಲಿ ಪಾಲುದಾರರದಾಗುವ ಒಡನಾಡಿಗಳೇ ಆಗಿರುತ್ತವೆ. ಬೆಕ್ಕು, ನಾಯಿ, ಹಸುಗಳಂತಹ ಸಾಕು ಪ್ರಾಣಿಗಳು ನೀಡುವ ನಿಷ್ಕಲ್ಮಶ, ಪ್ರತಿಫಲಾಪೇಕ್ಷೆ ಬಯಸದ ಪ್ರೀತಿ ನಮ್ಮನ್ನೆಂದೂ ಒಂಟಿತನಕ್ಕೆ ದೂಕಲಾರವು. ಮನೆಯಲ್ಲಿ ಒಂಟಿಯಾಗಿ ಇರುವವರು ಪೆಟ್‌ಗಳ ಪೆಟ್ ಆಗಿ, ಅವುಗಳ ಪ್ರೀತಿಗೆ ಮಾರುಹೋಗುವುದು ಉಚಿತ.

ಹಂಚಿ ಹಗುರಾಗಿ

ನಮ್ಮ ಖುಷಿ, ನೋವುಗಳನ್ನು ಕೇಳಲು ಹಾತೊರೆಯುವ ಜೀವಗಳು ನಮ್ಮ ಕುಟುಂಬ, ಗೆಳೆಯರ ಬಳಗದಲ್ಲಿ ಇರುತ್ತವೆ. ನಾವೇ ನಮ್ಮ ಜಂಜಾಟ, ಒತ್ತಡ, ನೋವುಗಳ ಮಧ್ಯೆ ನಮಗರಿವಿಲ್ಲದೆ ಅವರನ್ನು ನಿರ್ಲಕ್ಷಿಸುತ್ತೇವೆ. ಅವರಿಗೆಲ್ಲ ಆಗಾಗ ಕರೆ ಮಾಡಿ ಮಾತನಾಡಿ, ಅವರ ಕುಶಲ ಕ್ಷೇಮವನ್ನೂ ವಿಚಾರಿಸಿ, ನಿಮ್ಮ ನಿತ್ಯದ ಆಗು–ಹೋಗುಗಳ ಕುರಿತು ಹೇಳುವುದು, ಹರಟುವುದು, ನೆನಪುಗಳ ಮೆಲುಕು ಹಾಕುತ್ತಿರಬೇಕು. ಇದರಿಂದ ನಮಗಾಗಿ ಮಿಡಿಯುವ ಜೀವಗಳೂ ಇವೆ ಎಂಬ ಭಾವ ನಮಗೆ ಹೊಸ ಚೈತನ್ಯ ತುಂಬುತ್ತದೆ. ನೋವು, ಒತ್ತಡ, ಹಿಂಜರಿಕೆ, ಖಿನ್ನತೆಗಳು ಕಾಡುತ್ತಿದ್ದರೆ ಆತ್ಮೀಯರ ಹತ್ತಿರ ಹಂಚಿಕೊಳ್ಳುವುದು ಸೂಕ್ತ. ಇತರರಿಗೆ ಹೇಳಲು ಆಗದಿದ್ದಾಗ ಅಥವಾ ಹೇಳಿಕೊಳ್ಳಲು ಸೂಕ್ತ ಮನಸ್ಸು ಸಿಗದಿದ್ದಾಗ, ನಿಮ್ಮ ಭಾವನೆಗಳನ್ನೆಲ್ಲ ಬರೆದು ತೆಗೆಯಿರಿ. ಸಮಾಧಾನವಾದ ಬಳಿಕ ಬರೆದದ್ದನ್ನು ಹರಿದು ಎಸೆದುಬಿಡಿ. ಮನಸ್ಸಿನ ಭಾವಗಳು ಹಂಚಿ ಹೊರ ಹೋದಷ್ಟು ಮನಸ್ಸು ಹಗುರಾಗುತ್ತದೆ ಎನ್ನುತ್ತಾರೆ ಮನೋವೈದ್ಯರು.



ಮನುಷ್ಯ ಜನ್ಮತಃ ಒಂಟಿ. ಬರುವಾಗಲೂ, ಹೋಗುವಾಗಲೂ... ಆದರೆ ಬಂದು ಹೋಗುವ ಮಧ್ಯೆ ಇರುವ ಈ ಬದುಕಿನಲ್ಲಿ ಮಾತ್ರ ಆತ ಈ ಒಂಟಿತನವನ್ನು ತಾಳಲಾರ. ಬರುವ ಮೊದಲಿನ ಕಥೆ, ಹೋದ ಮೇಲಿನ ಕಥೆ ನಮ್ಮ ಕಲ್ಪನೆ ಮತ್ತು ಜ್ಞಾನದ ವ್ಯಾಪ್ತಿಯನ್ನು ಮೀರಿದ್ದು. ಇದರ ನಡುವಿನ ಬದುಕು ಮಾತ್ರ ನಮ್ಮ ಕೈಯಲ್ಲಿರುವುದು. ಅವರಿಲ್ಲ, ಇವರಿಲ್ಲ ಎನ್ನುವ ನೆಪವೊಡ್ಡಿ ಈ ಬದುಕನ್ನು ಹಾಳು ಮಾಡಿಕೊಳ್ಳುವುದು ಬೇಡ. ಮನವಿಟ್ಟು ನೋಡಿದರೆ ಬೀಸುವ ತಂಗಾಳಿ, ಹಾಡುವ ಕೋಗಿಲೆ, ಸುರಿವ ಮಳೆ, ಸುಡುವ ಭಾಸ್ಕರ ಎಲ್ಲವೂ ನಿನ್ನ ಸಾಂಗತ್ಯಕ್ಕೆ ಹಾತೊರೆಯುತ್ತಿವೆ. ಕೈಚಾಚಿ ತಬ್ಬಿಕೊಳ್ಳಬೇಕಷ್ಟೆ. ಕಣ್ತೆರೆದು ನೋಡು ಒಂಟಿ ಅಲ್ಲ ನೀ, ಪ್ರಕೃತಿಯೊಂದಿಗೆ ಜಂಟಿ. ❖

ಹಲವೆಡೆ ಸೇತುವೆಗಳು ಜಲಾವೃತ • ಕೆಲ ಗ್ರಾಮಗಳಿಗೆ ಸಂಪರ್ಕ ಕಡಿತ • ಜಲಾಶಯಗಳಿಗೆ ಹೆಚ್ಚಿದ ಒಳ ಹರಿವು

ಉಕ್ಕಿ ಹರಿದ ವರದಾ, ಕಾವೇರಿ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಮಲೆನಾಡು, ಕರಾವಳಿ, ಉತ್ತರ ಮತ್ತು ದಕ್ಷಿಣ ಒಳನಾಡಿನಲ್ಲಿ ಸೋಮವಾರ ವ್ಯಾಪಕ ಮಳೆಯಾಗಿದ್ದು, ಅಘನಾಶಿನಿ, ವರದಾ, ಹೇಮಾವತಿ, ಕಾವೇರಿ, ತುಂಗಾ, ಭದ್ರಾ, ಕಾಳಿ ನದಿಗಳು ಮೈದುಂಬಿ ಹರಿಯುತ್ತಿವೆ.

ನಿರಂತರ ಮಳೆಗೆ ಉತ್ತರ ಕನ್ನಡ ಜಿಲ್ಲೆಯ ಅಘನಾಶಿನಿ ನದಿ ಉಕ್ಕಿ ಹರಿಯುತ್ತಿರುವ ಪರಿಣಾಮ ಕುಮಟಾ ತಾಲ್ಲೂಕಿನ ಹೆಗಡೆ, ಮುರೂರು, ಮಣಕಿ, ದಿವಗಿ ಗ್ರಾಮಗಳು ಜಲಾವೃತಗೊಂಡಿವೆ.

ಹೊನ್ನಾವರದ ಗುಂಡಬಾಳ ನದಿ ಪಾತ್ರದಲ್ಲೂ ನೆರೆ ಸ್ಥಿತಿ ಮುಂದುವರಿದಿದೆ. ಜೊಯಿಡಾ ತಾಲ್ಲೂಕಿನ ಕ್ಯಾಸಲ್‌ರಾಕ್ ಬಳಿ ರಸ್ತೆ ಜಲಾವೃತಗೊಂಡು ಗೋವಾ–ಕ್ಯಾಸಲ್‌ರಾಕ್ ಮಾರ್ಗದಲ್ಲಿ ಎರಡನೇ ದಿನವೂ ಸಂಚಾರ ಸ್ಥಗಿತಗೊಂಡಿದೆ.

ತಾಲ್ಲೂಕಿನ ಗಾಂಗೋಡಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಾಪೋಲಿ ಹಿರಿಯ ಪ್ರಾಥಮಿಕ ಶಾಲೆ ಗೋಡೆ ಕುಸಿದಿದೆ. ಅಣಶಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುಮಗಾಳಿ ಶಾಲೆಯ ಚಾವಣಿ ಮುರಿದಿದೆ.

ಸೇತುವೆಗಳು ಮುಳುಗಡೆ, ಗುಡ್ಡ ಕುಸಿತ: ಬೆಳಗಾವಿ ಜಿಲ್ಲಾ ವ್ಯಾಪ್ತಿಯಲ್ಲಿ ಮಲಪ್ರಭಾ, ಘಟಪ್ರಭಾ ಮತ್ತು ಕೃಷ್ಣಾ ನದಿಯಲ್ಲಿ ನೀರಿನ ಹರಿವು ಹೆಚ್ಚಿದ್ದು 21 ಸೇತುವೆಗಳು ಮುಳುಗಡೆಯಾಗಿವೆ. ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಬಿಸ್ಲೆ–ಸುಬ್ರಹ್ಮಣ್ಯ ನಡುವಣ ರಸ್ತೆಯಲ್ಲಿ ಮಣ್ಣು ಕುಸಿತ ಹಾಗೂ ಮರ ಬಿದ್ದಿದ್ದರಿಂದ ವಾಹನ ಸಂಚಾರ ಸ್ಥಗಿತಗೊಂಡಿತ್ತು. ಜಿಲ್ಲೆಯಲ್ಲಿ 8 ಮನೆಗಳಿಗೆ ಹಾನಿಯಾಗಿದೆ.

ಹಾಸನ– ಸಕಲೇಶಪುರ ರಾಷ್ಟ್ರೀಯ ಹೆದ್ದಾರಿ 75ರ ಕೊಲ್ಲಹಳ್ಳಿ ಬಳಿ ನಿರ್ಮಿಸಿರುವ ಕಾಂಕ್ರೀಟ್ ರಸ್ತೆ ಪಕ್ಕದ ತಡೆಗೋಡೆ ಕುಸಿದಿದ್ದು, ಮಣ್ಣು ಕುಸಿತ ಆರಂಭವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಮಂಜೇಶ್ವರ– ಪಂಜ–ಸುಬ್ರಹ್ಮಣ್ಯವನ್ನು ಸಂಪರ್ಕಿಸುವ ಹೆದ್ದಾರಿಯ ಸೇತುವೆ ಜಲಾವೃತವಾಗಿದೆ. ನೇತ್ರಾವತಿ ನದಿ ಬಂಟ್ವಾಳದಲ್ಲಿ ಅಪಾಯದ ಮಟ್ಟದಲ್ಲಿ ಹರಿಯುತ್ತಿದ್ದು, ಪಾಣೆ ಮಂಗಳೂರು, ಆಲಡ್ಕದಲ್ಲಿ 10ಕ್ಕೂ ಹೆಚ್ಚು ಕುಟುಂಬಗಳನ್ನು ಸ್ಥಳಾಂತರ ಮಾಡಲಾಗಿದೆ.

ಚಿಕ್ಕಮಗಳೂರಿನ ಚಾರ್ಮಾಡಿ ಘಾಟಿಯ ಬಿದಿರುತಳ ಹಾಗೂ ಆಲೇಕಾನ್ ನಡುವೆ ಗುಡ್ಡ ಕುಸಿತಗೊಂಡು ವಾಹನ ಸಂಚಾರಕ್ಕೆ ಸಮಸ್ಯೆ ಉಂಟಾಗಿತ್ತು. ಮಣ್ಣನ್ನು ತೆರವುಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು. ಹುಬ್ಬಳ್ಳಿ ತಾಲ್ಲೂಕಿನ ಬೆಳಗಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೆಳಗಲಿ ಹಳ್ಳ ತುಂಬಿ ಹರಿದು ಬೆಳಗಲಿ ಮತ್ತು ಬೊಮ್ಮಸಮುದ್ರ ನಡುವೆ ಸಂಪರ್ಕ ಕಲ್ಪಿಸುವ ರಸ್ತೆ ಕೊಚ್ಚಿಹೋಗಿದೆ.

ಕೊಡಗು ಜಿಲ್ಲೆಯಲ್ಲಿ ಹಲವು ರಸ್ತೆಗಳು ಜಲಾವೃತಗೊಂಡಿದ್ದು, ಗುಡ್ಡ, ಮಣ್ಣುಕುಸಿತ ಆರಂಭವಾಗಿದೆ. ರಾಷ್ಟ್ರೀಯ ವಿಪತ್ತು ಪರಿಹಾರ ತಂಡ (ಎನ್‌ಡಿಆರ್‌ಎಫ್) ಸನ್ನದ್ಧ ಸ್ಥಿತಿಯಲ್ಲಿದೆ. ಮದೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಡಿಕೇರಿ– ಮಂಗಳೂರು ರಸ್ತೆಯ ಅಬ್ಬಿಕೊಲ್ಲಿ ಜಲಪಾತದ ಸಮೀಪ ರಸ್ತೆಬದಿಯಲ್ಲಿ ಮಣ್ಣು ಕುಸಿದು ಆತಂಕ ಮೂಡಿಸಿದೆ. ಮಡಿಕೇರಿ–ಸೋಮವಾರಪೇಟೆ ರಸ್ತೆ, ಕಾಲೂರು – ಗಾಳಿಬೀಡು ರಸ್ತೆ, ಕರಿಕೆ– ಭಾಗಮಂಡಲ ರಸ್ತೆಯಲ್ಲೂ ಮಣ್ಣು ಕುಸಿದಿದೆ.

ಭಾಗಮಂಡಲ– ಮಡಿಕೇರಿ ಹಾಗೂ ಭಾಗಮಂಡಲ– ನಾಪೋಕ್ಲು ರಸ್ತೆಯಲ್ಲಿ ನೀರು ಹರಿಯುತ್ತಿದ್ದು, ವಾಹನ ಸಂಪರ್ಕ ತಪ್ಪಿದೆ. ಬೆಂಗೂರು ಗ್ರಾಮದ ದೋಣಿಕಡುವಿನಿಂದ ಚೇರಂಬಾಣೆ ಸಂಪರ್ಕಿಸುವ ರಸ್ತೆಯೂ ಸಂಪೂರ್ಣ ಜಲಾವೃತಗೊಂಡಿದೆ. ಕಲ್ಲುಮೊಟ್ಟೆ ಸಂಪರ್ಕ ರಸ್ತೆಯಲ್ಲಿ ಮಂಡಿಯುದ್ದದ ನೀರು ಹರಿಯುತ್ತಿದ್ದು, ಜನ ತೆಪ್ಪ ಬಳಸುತ್ತಿದ್ದಾರೆ.

ನಾಪೋಕ್ಲು– ಮಡಿಕೇರಿ ಸಂಪರ್ಕ ರಸ್ತೆಯ ಕೊಟ್ಟಮುಡಿ ಎಂಬಲ್ಲಿ ನದಿ ನೀರಿನ ಹರಿವು ಹೆಚ್ಚಿದರೆ, ನಾಪೋಕ್ಲು ಹೋಬಳಿ ಮತ್ತು ಮಡಿಕೇರಿ ಸಂಪರ್ಕ ಕಡಿತಗೊಳ್ಳುವ ಸಾಧ್ಯತೆ ಇದೆ. ಒಂದೇ ದಿನ ಜಿಲ್ಲೆಯಲ್ಲಿ 77 ವಿದ್ಯುತ್ ಕಂಬಗಳು ನೆಲಕಚ್ಚಿವೆ.

ಭಾಗಮಂಡಲದಲ್ಲಿ ತ್ರಿವೇಣಿ ಸಂಗಮ ಸಂಪೂರ್ಣ ಜಲಾವೃತಗೊಂಡಿದ್ದು, ಭಗಂಡೇಶ್ವರ ದೇಗುಲದ ಮುಖ್ಯ ದ್ವಾರದ ಎರಡು ಮೆಟ್ಟಿಲುಗಳವರೆಗೆ ನೀರು ಬಂದಿದೆ. ಮುಂಜಾಗ್ರತಾ ಕ್ರಮವಾಗಿ ಭಾಗಮಂಡಲದಲ್ಲಿ ಕಾಳಜಿ ಕೇಂದ್ರ ತೆರೆಯಲು ಸಿದ್ಧತೆ ನಡೆಸಲಾಗುತ್ತಿದೆ. ಎನ್‌ಡಿಆರ್‌ಎಫ್ ತಂಡ ಭಾಗಮಂಡಲಕ್ಕೆ ಭೇಟಿ ನೀಡಿ, ಪರಿಸ್ಥಿತಿಯನ್ನು ಅವಲೋಕಿಸಿದೆ.

ಶಿವಮೊಗ್ಗದ ತುಮರಿಯಲ್ಲಿ ಶರಾವತಿ ಹಿನ್ನೀರಿನಲ್ಲಿ ಭತ್ತದ ಗದ್ದೆಗಳು ಮುಳುಗಡೆ ಆಗಿವೆ. ತುಮರಿ ಸಮೀಪದ ಕೊಡಸರ ಗ್ರಾಮವನ್ನು ಸಂಪರ್ಕಿಸುವ ಗಣಪೂಡಿ ಬಳಿ ಕಿರುಸೇತುವೆ ಮೇಲೆ ನೀರು ಹರಿಯುತ್ತಿರುವುದರಿಂದ 40 ಮನೆಗಳ ಸಂಪರ್ಕ ಕಡಿತಗೊಂಡಿದೆ.

ಜಲಾಶಯಕ್ಕೆ ಹೆಚ್ಚಿದ ಹರಿವು: ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣ ಕ್ಷಣಕ್ಷಣವೂ ಹೆಚ್ಚುತ್ತಿದ್ದು, ನದಿಗೆ ಸದ್ಯ 30 ಸಾವಿರ ಕ್ಯುಸೆಕ್ ನೀರನ್ನು ಹರಿಸಲಾಗುತ್ತಿದೆ. ಅದರಿಂದ ಕುಶಾಲನಗರ ಸಾಯಿ ಬಡಾವಣೆಗೆ ನೀರು ನುಗ್ಗಿದೆ. ಸಾಯಿ ದೇವಾಲಯದ ಆವರಣ ಜಲಾವೃತವಾಗಿದೆ

ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ನಿರಂತರವಾಗಿ ಮಳೆ ಸುರಿಯುತ್ತಿದ್ದು, ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಬಳಿ ಕೃಷ್ಣಾ ನದಿಗೆ 1.14 ಲಕ್ಷ ಕ್ಯುಸೆಕ್ ನೀರು ಹರಿದುಬರುತ್ತಿದೆ. ಸವದತ್ತಿ ತಾಲ್ಲೂಕಿನ ನವಿಲುತೀರ್ಥ ಜಲಾಶಯದಲ್ಲಿ ಒಳ ಹರಿವು 21,247 ಕ್ಯುಸೆಕ್‌ಗೆ ಏರಿಕೆಯಾಗಿದೆ. ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಜಲಾಶಯಕ್ಕೆ 31,815 ಕ್ಯುಸೆಕ್ ನೀರು ಹರಿದುಬರುತ್ತಿದೆ.

ವಿಜಯನಗರ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ ಸಿಂಗಟಾಲೂರು ಬ್ಯಾರೇಜ್‌ನ 15 ಗೇಟ್‌ಗಳನ್ನು ತೆರೆಯಲಾಗಿದ್ದು, ತುಂಗಭದ್ರಾ ನದಿಯ ಒಳ ಹರಿವಿನ ಪ್ರಮಾಣ 64,023 ಕ್ಯುಸೆಕ್‌ಗೆ ಹೆಚ್ಚಳವಾಗಿದೆ. ಮಹಾರಾಷ್ಟ್ರ ಹಾಗೂ ರಾಜ್ಯದ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಮಳೆ ಪ್ರಮಾಣ ಹೆಚ್ಚಿದ್ದರಿಂದ, ವಿಜಯಪುರದ ಆಲಮಟ್ಟಿ ಜಲಾಶಯಕ್ಕೆ ಸೋಮವಾರ ಒಂದೇ ದಿನ ಸರಾಸರಿ 10 ಟಿಎಂಸಿ ಅಡಿ ನೀರು ಹರಿದು ಬಂದಿದೆ. ಈ ಮೂಲಕ ಜಲಾಶಯ ಅರ್ಧ ಭರ್ತಿಯಾಗಿದೆ.

ಕಾಳಜಿ ಕೇಂದ್ರ: ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ 4, ಹೊನ್ನಾವರ ತಾಲ್ಲೂಕಿನ 5 ಗ್ರಾಮಗಳಲ್ಲಿ ಕಾಳಜಿ ಕೇಂದ್ರ ತೆರೆಯಲಾಗಿದ್ದು 164 ಮಂದಿ ಇಲ್ಲಿ ಆಶ್ರಯ ಪಡೆದುಕೊಂಡಿದ್ದಾರೆ. ಜಿಲ್ಲೆಯಾದ್ಯಂತ 39 ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ಕಾಳಿನದಿ ಒಳಹರಿವು ಹೆಚ್ಚುತ್ತಿದ್ದು ಕದ್ರಾ ಜಲಾಶಯದಿಂದ ಆರು ಕ್ರಸ್ಟ್ ಗೇಟ್‌ಗಳಿಂದ 61 ಸಾವಿರ ಕ್ಯುಸೆಕ್ ನೀರು ಹೊರಕ್ಕೆ ಬಿಡಲಾಗುತ್ತಿದೆ.

ಶಿರಸಿ ತಾಲ್ಲೂಕಿನ ವರದಾ ನದಿ ಉಕ್ಕೇರಿ ನದಿ ತಟದ 300 ಹೆಕ್ಟೇರ್ ಗೂ ಅಧಿಕ ಕೃಷಿ ಭೂಮಿ ಜಲಾವೃತವಾಗಿದೆ. ನದಿ ನೀರು ಏರಿಕೆಯಿಂದ ಅಜ್ಜರಣಿ ಸೇತುವೆ ಮುಳುಗಿ ಸಂಚಾರ ಸ್ಥಗಿತಗೊಂಡಿದೆ.



ಅಘನಾಶಿನಿ ನದಿ ಉಕ್ಕಿ ಹರಿದ ಪರಿಣಾಮ ಕುಮಟಾ ತಾಲ್ಲೂಕಿನ ದೀವಗಿ, ಮಣಕಿ, ಹೆಗಡೆ ಗ್ರಾಮಗಳ ನೂರಾರು ಎಕರೆ ಕೃಷಿ ಭೂಮಿ ಜಲಾವೃತಗೊಂಡಿದ್ದ ದೃಶ್ಯ. ಚಿತ್ರ:ಗೋಪಿ ಜಾಲಿ

100 ಅಡಿ ಸನಿಹಕ್ಕೆ ಕೆಆರ್‌ಎಸ್

ಮಂಡ್ಯ: ಕೊಡಗು ಜಿಲ್ಲೆಯಲ್ಲಿ ಭಾರಿ ಮಳೆ ಸುರಿಯುತ್ತಿರುವುದರಿಂದ ಕೆಆರ್‌ಎಸ್ ಜಲಾಶಯದ ಒಳಹರಿವು ಹೆಚ್ಚಾಗಿದ್ದು ನೀರಿನ ಮಟ್ಟ 100 ಅಡಿ ಸನಿಹಕ್ಕೆ ತಲುಪಿದೆ. 24 ಗಂಟೆಯಲ್ಲಿ ಜಲಾಶಯಕ್ಕೆ 5 ಅಡಿ ನೀರು ಹರಿದು ಬಂದಿದೆ.

ಭಾನುವಾರ ರಾತ್ರಿ ಜಲಾಶಯದ ನೀರಿನ ಮಟ್ಟ 92.60 ಅಡಿ ಇತ್ತು, ಸೋಮವಾರ ರಾತ್ರಿ 8 ಗಂಟೆಯ ವೇಳೆಗೆ ನೀರಿನ ಮಟ್ಟ 97.50 ಅಡಿಗೆ ಹೆಚ್ಚಾಗಿದೆ. 44,436 ಕ್ಯುಸೆಕ್ ಒಳಹರಿವು ಇದ್ದು 5,452 ಹೊರಹರಿವು ದಾಖಲಾಗಿದೆ. ಮಂಗಳವಾರ ಸಂಜೆ ವೇಳೆಗೆ 100 ಅಡಿ ದಾಟಲಿದೆ ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.



ಉಡುಪಿ ಜಿಲ್ಲೆಯ ಬೈಂದೂರಿನ ಗಂಗಾನಾಡಿಗೆ ಹೋಗುವ ರಸ್ತೆ ಕುಸಿದಿದೆ

ಮಳೆಯ ಪ್ರಮಾಣ (ಸೆಂ.ಮೀ ಗಳಲ್ಲಿ)

ಮಾಸ್ತಿಕಟ್ಟೆ (ಶಿವಮೊಗ್ಗ)	21
ಹುಲಿಕಲ್ ಘಾಟ (ಶಿವಮೊಗ್ಗ)	20
ಆಗುಂಬೆ (ಶಿವಮೊಗ್ಗ)	19
ಕಡಬ (ದಕ್ಷಿಣ ಕನ್ನಡ)	16
ಹೆತ್ತೂರು (ಹಾಸನ)	14
ಬೈಂದೂರು(ಉಡುಪಿ)	12
ಬೆಳ್ತಂಗಡಿ (ದಕ್ಷಿಣ ಕನ್ನಡ)	11
ಹಾನಬಾಳು (ಹಾಸನ)	11
ಯಸಳೂರು (ಹಾಸನ)	11
ಹೆಬ್ರಿ (ಉಡುಪಿ)	11
ಬಂಟ್ವಾಳ (ದಕ್ಷಿಣ ಕನ್ನಡ)	10
ಮೂಡುಬಿದಿರೆ (ದಕ್ಷಿಣ ಕನ್ನಡ)	10
ಸುಳ್ಯ (ದಕ್ಷಿಣ ಕನ್ನಡ)	10
ಕಾರ್ಕಳ (ಉಡುಪಿ)	10

* ಭಾನುವಾರ ಬೆಳಿಗ್ಗೆ 8.30ರಿಂದ ಸೋಮವಾರ ಬೆಳಿಗ್ಗೆ 8.30ರವರೆಗಿನ ಮಾಹಿತಿ

ಕರಾವಳಿ ಜಿಲ್ಲೆಗಳಿಗೆ ‘ಆರೆಂಜ್ ಅಲರ್ಟ್’

ಬೆಂಗಳೂರು: ರಾಜ್ಯದ ಕರಾವಳಿ ವ್ಯಾಪ್ತಿಯ ಜಿಲ್ಲೆಗಳಲ್ಲಿ ಇನ್ನೂ ಎರಡು ದಿನ ಮಳೆಯ ಅಬ್ಬರ ಮುಂದುವರಿಯುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಜುಲೈ 25 ಹಾಗೂ 26ರಂದು ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಿಗೆ ‘ಆರೆಂಜ್ ಅಲರ್ಟ್’ ನೀಡಲಾಗಿದೆ. ಅದೇ ದಿನ ಕಲಬುರಗಿ, ವಿಜಯಪುರ, ಹಾವೇರಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ಜುಲೈ 27 ರಂದು ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	97.50	44,436	5,283
ಹಾರಂಗಿ	2,859	2,854.30	27,180	30,000
ಕಬಿನಿ	2284.00	2,279.30	21,600	10,000
ಹೇಮಾವತಿ	2,922	2,903.05	23,142	200
ಲಿಂಗನಮಕ್ಕಿ	1,819	1,777.2	73,505	1,800
ಸೂಪಾ (ಮೀ)	564	538.00	52,653.68	00
ಮಾಣಿ	595	577.98	7,138	-
ತುಂಗಭದ್ರಾ	1,633	1,602.84	64,023	213
ಮಲಪ್ರಭಾ	2079.5	2,054.80	21,247	194
ಘಟಪ್ರಭಾ	2175	2,127.50	31,815	99
ಭದ್ರಾ	186	149.5	39,348	170
ಆಲಮಟ್ಟಿ (ಮೀ)	519.6	514.94	1,14,445	6,761
ನಾರಾಯಣಪುರ (ಮೀ)	492.25	487.41	13,657	00

* ನೆಲಮಟ್ಟದಿಂದ

ಭಾರಿ ವಾಹನಗಳ ಸಂಚಾರ ನಿಷೇಧ

ಶಿರಸಿ: ಕುಮಟಾ–ಶಿರಸಿ–ಹಾವೇರಿ ರಾಷ್ಟ್ರೀಯ ಹೆದ್ದಾರಿಯಲ್ಲಿ ದೇವಿಮನೆ ಘಟ್ಟದ ಸಮೀಪ ಭಾನುವಾರ ರಾತ್ರಿ ರಾಗಿಹೊಸಳ್ಳಿ ಬಳಿ ಭೂಕುಸಿತ ಉಂಟಾದ ಹಿನ್ನೆಲೆಯಲ್ಲಿ ಭಾರಿ ವಾಹನಗಳ ಸಂಚಾರ ನಿಷೇಧಿಸಲಾಗಿದೆ. ಸೋಮವಾರ ಮಣ್ಣನ್ನು ತೆಗೆದು ಲಘು ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

ಕುಶಾಲನಗರ; ಶವಸಂಸ್ಕಾರಕ್ಕೆ ಪರದಾಟ

ಮಡಿಕೇರಿ: ಕೊಡಗು ಜಿಲ್ಲೆಯ ಕುಶಾಲನಗರದ ಹೆಬ್ಬಾಲೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಹಕ್ಕೆ ಗ್ರಾಮದಲ್ಲಿ ಶವಸಂಸ್ಕಾರ ಮಾಡುತ್ತಿದ್ದ ಕಾವೇರಿ ನದಿದಂಡೆಯು ನೀರಿನಲ್ಲಿ ಮುಳುಗಿದ್ದರಿಂದ ಮಂಚಮ್ಮ ಎಂಬುವವರ ಶವಸಂಸ್ಕಾರಕ್ಕೆ ಸಂಬಂಧಿಕರು ಪರದಾಡಿದರು.

ನಂತರ ತಹಶೀಲ್ದಾರ್ ಪ್ರಕಾಶ್ ಅವರು ವಾಟರ್ ಗೇಜ್ ಬಳಿ ಇರುವ ಅರಣ್ಯ ಇಲಾಖೆಯ ಸಸ್ಯಕೇಂದ್ರದ ಬಳಿ ಗದ್ದೆಹಳ್ಳದಲ್ಲಿ ಸ್ಥಳಾವಕಾಶ ಮಾಡಿಕೊಟ್ಟರು. ಸುರಿಯುವ ಮಳೆಯಲ್ಲಿಯೇ ಮಂಚಮ್ಮ ಅವರ ಅಂತ್ಯಸಂಸ್ಕಾರವನ್ನು ಸಂಬಂಧಿಕರು ಹಾಗೂ ಗ್ರಾಮಸ್ಥರು ನೆರವೇರಿಸಿದರು.

ಮಡಿಕೇರಿ– ಮಂಗಳೂರು ರಸ್ತೆ ಸಂಚಾರ ಮುಕ್ತ

ಮಡಿಕೇರಿ– ಮಂಗಳೂರು ರಸ್ತೆಯಲ್ಲಿ ಸೋಮವಾರ ಸಂಜೆ ಕುಸಿದಿದ್ದ ಮಣ್ಣ ಹಾಗೂ ಮರವನ್ನು ಜಿಲ್ಲಾಡಳಿತ ರಾತ್ರಿ ತೆರವುಗೊಳಿಸಿದ್ದರಿಂದ, ಎರಡೂ ಬದಿಯಲ್ಲೂ ಕಿಲೋ ಮೀಟರ್‌ಗಟ್ಟಲೆ ಸಾಲುಗಟ್ಟಿ ನಿಂತಿದ್ದ ವಾಹನಗಳು ಸಂಚರಿಸಿದವು.

ರಸ್ತೆಯ ಬದಿಯಲ್ಲಿ ಮಣ್ಣಿನ ರಾಶಿಯನ್ನು ತೆರವು ಮಾಡಿದರೆ, ಗುಡ್ಡದಿಂದ ಮತ್ತಷ್ಟು ಮಣ್ಣು ಜಾರಬಹುದೆಂಬ ಆತಂಕದಿಂದ ತೆರವುಗೊಳಿಸಿಲ್ಲ. ಸದ್ಯ, ವಾಹನಗಳು ರಸ್ತೆಯಲ್ಲಿ ನಿಧಾನಗತಿಯಲ್ಲಿ ಸಂಚರಿಸುತ್ತಿವೆ.



ಕೊಡಗು ಜಿಲ್ಲೆಯ ಪಾರ್ಟಿ – ಕಾಲೂರು ರಸ್ತೆಗೆ ಮಣ್ಣು ಕುಸಿದು ಸಂಚಾರ ಬಂದ್ ಆಗಿದೆ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಸಚಿವರ ಮೇಲೆ ಶಾಸಕರ ಅತೃಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಗಾವಣೆ ವಿಚಾರದಲ್ಲಿ ಮಾಡಿದ ಶಿಫಾರಸುಗಳಿಗೆ ಸಚಿವರು ಸ್ಪಂದಿಸುತ್ತಿಲ್ಲವೆಂದು ಅಸಮಾಧಾನಗೊಂಡಿರುವ ಕೆಲವು ಕಾಂಗ್ರೆಸ್ ಶಾಸಕರು, ಇದೇ 27ರಂದು ನಡೆಯಲಿರುವ ಶಾಸಕಾಂಗ ಪಕ್ಷದ ಸಭೆಯಲ್ಲಿ (ಸಿಎಲ್‌ಪಿ) ಈ ವಿಷಯ ಪ್ರಸ್ತಾಪಿಸಲು ಮುಂದಾಗಿದ್ದಾರೆ.

ಹೋಟೆಲ್ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಅಂದು ಸಂಜೆ 6.30ಕ್ಕೆ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೂಡಾ ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ.

‘ಸರ್ಕಾರ ಅಸ್ತಿತ್ವಕ್ಕೆ ಬಂದು ಎರಡು ತಿಂಗಳ ಕಳೆದಿದ್ದು, ಸಚಿವರ ಕಾರ್ಯವೈಖರಿಯ ಬಗ್ಗೆ ಸಭೆಯಲ್ಲಿ ಪರಿಶೀಲನೆ ನಡೆಯಲಿದೆ. ಆದರೆ, ಸಚಿವರು ತಮ್ಮ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತಿಲ್ಲವೆಂದು ಕೆಲವು ಶಾಸಕರು ಈಗಾಗಲೇ ಪಕ್ಷದ ನಾಯಕರಲ್ಲಿ ಅಸಮಾಧಾನ ತೋಡಿಕೊಂಡಿದ್ದಾರೆ. ತಮ್ಮ ಕ್ಷೇತ್ರಗಳ ಅಧಿಕಾರಿ, ನೌಕರರ ವರ್ಗಾವಣೆಗೆ ಮಾಡಿದ ಶಿಫಾರಸುಗಳಿಗೆ ಬೆಲೆ ನೀಡುತ್ತಿಲ್ಲ. ಈ ವಿಚಾರವನ್ನು ಸಭೆಯಲ್ಲಿ ಪ್ರಸ್ತಾಪಿಸಲು ಕೆಲವರು ನಿರ್ಧರಿಸಿದ್ದಾರೆ ಎಂದು ಶಾಸಕರೊಬ್ಬರು ಹೇಳಿದರು.

ಚುನಾವಣೆಯಲ್ಲಿ ಘೋಷಿಸಿದ್ದ ‘ಗ್ಯಾರಂಟಿ’ಗಳ ಪೈಕಿ, ಶಕ್ತಿ, ಅನ್ನ ಭಾಗ್ಯ (5 ಕೆ.ಜಿ. ಹೆಚ್ಚುವರಿ ಅಕ್ಕಿ ಬದಲು ₹170 ನಗದು), ಗೃಹ ಜ್ಯೋತಿ, ಗೃಹ ಲಕ್ಷ್ಮಿ ಯೋಜನೆಗಳು ಈಗಾಗಲೇ ಜಾರಿಗೆ ಬಂದಿವೆ. ‘ಯುವ ನಿಧಿ‘ಗೆ ಇನ್ನಷ್ಟೆ ಚಾಲನೆ ಸಿಗಬೇಕಿದೆ. ಈ ಗ್ಯಾರಂಟಿಗಳ ಜಾರಿಯ ಕಾರಣಕ್ಕೆ ಈ ಬಾರಿ ಶಾಸಕರ ವಿಶೇಷ ಅನುದಾನಕ್ಕೆ ಕತ್ತರಿ ಬೀಳುವ ಸಾಧ್ಯತೆಯಿದೆ. ಇದು ಕೂಡಾ ಕೆಲವು ಶಾಸಕರ ಕೋಪಕ್ಕೆ ಕಾರಣವಾಗಿದೆ ಎಂದು ಗೊತ್ತಾಗಿದೆ.

ಐವರ ಬಂಧನದ ಬಳಿಕ ಆಕೆಯ ಸಂಪರ್ಕಕ್ಕೆ ಸಿಗದ ಆರೋಪಿ

ಜುನೇದ್ ಪ್ರೇಯಸಿ ವಾಸ ಸ್ಥಳ ಪತ್ತೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸಿಸಿಬಿ ಪೊಲೀಸರಿಂದ ಕಾರ್ಯಾಚರಣೆ
- ತಲೆಮರೆಸಿಕೊಂಡಿದ್ದ ದೇಶದಿಂದಲೇ ಪ್ರೇಯಸಿಗೆ ಕರೆ ಮಾಡುತ್ತಿದ್ದ ಜುನೇದ್

ಬೆಂಗಳೂರು: ಭಯೋತ್ಪಾದನೆ ಕೃತ್ಯಕ್ಕೆ ಸಂಚು ರೂಪಿಸಿದ್ದ ಪ್ರಕರಣದ ಪ್ರಮುಖ ಆರೋಪಿ, ಸುಲ್ತಾನ್ ಪಾಳ್ಯದ ನಿವಾಸಿ ಜುನೇದ್ ಅಹಮ್ಮದ್‌ನ ಪ್ರೇಯಸಿ ಇರುವ ಸ್ಥಳವನ್ನು ಸಿಸಿಬಿ ಪೊಲೀಸರು ಪತ್ತೆ ಮಾಡಿದ್ದಾರೆ.

ತಾನು ತಲೆಮರೆಸಿಕೊಂಡಿದ್ದ ದೇಶದಿಂದಲೇ ಪ್ರೇಯಸಿಗೆ ಜುನೇದ್ ಕರೆ ಮಾಡುತ್ತಿದ್ದ ಅಂಶ ತನಿಖೆಯಿಂದ ತಿಳಿದುಬಂದಿದೆ. ಮೊಬೈಲ್ ಕರೆಗಳ ಪರಿಶೀಲನೆ ವೇಳೆ ತನಿಖಾಧಿಕಾರಿಗಳಿಗೆ ಈ ವಿಚಾರ ಗೊತ್ತಾಗಿದೆ.

ಆಕೆಯ ಮೂಲಕ ಜುನೇದ್ ಬಗ್ಗೆ ಮತ್ತಷ್ಟು ಮಾಹಿತಿ ಕಲೆಹಾಕಿ ಬಂಧನಕ್ಕೆ ತಯಾರಿ ನಡೆಸುತ್ತಿದ್ದಾರೆ. ಅಗತ್ಯಬಿದ್ದರೆ ಆಕೆಗೂ ನೋಟಿಸ್ ನೀಡಿ ತನಿಖೆ ನಡೆಸಲಾಗುವುದು ಎಂದು ಮೂಲಗಳು ಹೇಳಿವೆ.

ಕೊಲೆ, ದರೋಡೆ ಯತ್ನ ಪ್ರಕರಣದಲ್ಲಿ ಮತ್ತೊಮ್ಮೆ ಪೊಲೀಸರು ಬಂಧಿಸುವ ಸಾಧ್ಯತೆ ತಿಳಿದಿದ್ದ ಜುನೇದ್ ಅಹಮ್ಮದ್ ವಿದೇಶಕ್ಕೆ ಪರಾರಿಯಾಗಿದ್ದ. ಅಲ್ಲಿಂದಲೇ ಪ್ರೇಯಸಿಗೆ ಕರೆ ಮಾಡುತ್ತಿದ್ದ. ಜುಲೈ 19ರಂದು ತನ್ನ ಸಹಚರರಾದ ಸೈಯದ್ ಸುಹೇಲ್ ಖಾನ್, ಜಾಹೀದ್ ತಬ್ರೇಜ್, ಸೈಯದ್ ಮುದಾಸೀರ್ ಪಾಷಾ, ಮಹಮ್ಮದ್ ಫೈಜಲ್ ರಬ್ಬಾನಿ ಹಾಗೂ ಮಹಮ್ಮದ್ ಉಮರ್‌ನ ಬಂಧನದ ಮಾಹಿತಿ ತಿಳಿದ ಬಳಿಕ ಬೆಂಗಳೂರಿನಲ್ಲಿರುವ ಪ್ರೇಯಸಿಗೆ ಕರೆ ಮಾಡುವುದನ್ನು ಬಿಟ್ಟಿದ್ದಾನೆ ಎಂದು ಮೂಲಗಳು ಹೇಳಿವೆ.

ದುಬೈನಲ್ಲಿ ಕೆಲಸಕ್ಕೆ ತೆರಳಿರುವುದಾಗಿ ಜುನೇದ್ ಪ್ರೇಯಸಿಗೆ ಹೇಳಿದ್ದ. ತನ್ನ ಉಗ್ರ ಚಟುವಟಿಕೆಗಳು ಹಾಗೂ ದಾಖಲಾಗಿರುವ ದರೋಡೆ ಮತ್ತು ಕೊಲೆ ಪ್ರಕರಣಗಳ ಬಗ್ಗೆ ಆಕೆಗೂ ಮಾಹಿತಿ ನೀಡಿರಲಿಲ್ಲ. ಆತನ ವರ್ತನೆಗಳು ಹೇಗಿದ್ದವು ಎಂಬುದನ್ನು ಪ್ರೇಯಸಿಯಿಂದ ತಿಳಿದುಕೊಳ್ಳಲು ಪ್ರಯತ್ನಿಸಲಾಗುತ್ತಿದೆ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಜುನೇದ್ ದುಬೈನಲ್ಲಿ ನೆಲೆಸಿರುವುದು ದೃಢಪಟ್ಟಿದೆ. ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಅಧಿಕಾರಿಗಳ ಸಹಕಾರದಲ್ಲಿ ಆತನನ್ನು ಬಂಧಿಸಿ ನಗರಕ್ಕೆ ಕರೆ ತರಲು ಪ್ರಯತ್ನಗಳು ನಡೆಯುತ್ತಿವೆ. ಆತನ ಬಂಧನದ ಬಳಿಕವಷ್ಟೇ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಟಿ.ನಾಸೀರ್‌ನನ್ನು ವಿಚಾರಣೆಗೋಸ್ಕರ ಕಸ್ಟಡಿಗೆ ಪಡೆಯಲು ಸಾಧ್ಯವಾಗಲಿದೆ ಎಂದು ಮೂಲಗಳು ಹೇಳಿವೆ.

‘ಸರ್ಕಾರದ ವಿರುದ್ಧ ಪಿತೂರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರದ ವಿರುದ್ಧ ಕೆಲವರು ಪಿತೂರಿ ನಡೆಸುತ್ತಿರುವ ಬಗ್ಗೆ ನಮಗೂ ಮಾಹಿತಿ ಇದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಸರ್ಕಾರ ಉರುಳಿಸಲು ಕೆಲವರು ಸಿಂಗಪುರದಲ್ಲಿ ಪಿತೂರಿ ಯೋಜಿಸಿದ್ದಾರಂತಲ್ಲ’ ಎಂಬ ಸುದ್ದಿಗಾರರ ಪ್ರಶ್ನೆಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, ‘ಆ ಬಗ್ಗೆ ನಮ್ಮದೇ ಆದ ಮೂಲಗಳಿಂದ ಮಾಹಿತಿ ಇದೆ. ಅವರು ಬೆಂಗಳೂರಲ್ಲಿ ಮಾಡದೇ ಅಲ್ಲಿಗೆ ಹೋಗಿ ಮಾಡುವುದು ಅವರ ತಂತ್ರ. ಯಾರು ಏನು ಮಾಡುತ್ತಿದ್ದಾರೆ ಎಂಬುದೂ ಗೊತ್ತಿದೆ’ ಎಂದರು.

‘ಶತ್ರುವಿನ ಶತ್ರು ಮಿತ್ರ ಎಂಬ ತಂತ್ರಗಾರಿಕೆ ಮೇಲೆ ಬಿಜೆಪಿ ಮತ್ತು ಜೆಡಿಎಸ್ ನಾಯಕರು ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದು, ಈ ಬಗ್ಗೆ ಇಲ್ಲಿ (ಬೆಂಗಳೂರು) ಹಾಗೂ ದೆಹಲಿಯಲ್ಲಿ ಮಾತುಕತೆ ಮಾಡಲಾಗದೇ ಸಿಂಗಪುರಕ್ಕೆ ತೆರಳಿದ್ದಾರೆ. ಅದು ಮುಂದುವರಿಯುತ್ತದೆಯೋ ಇಲ್ಲವೋ ಗೊತ್ತಿಲ್ಲ. ಸರ್ಕಾರ ಬೀಳಿಸುವ ತಂತ್ರದ ಬಗ್ಗೆ ವ್ಯಾಪಕ ಚರ್ಚೆಯಾಗುತ್ತಿರುವ ಬಗ್ಗೆ ಕೇಳಿದಾಗ, ‘ಚರ್ಚೆ ಆಗಬೇಕು. ಹೊರಗೆ ಹೋಗಿ ಚರ್ಚೆ ಮಾಡುವವರು ಹೋಗಲಿ. ಇಲ್ಲಿ ಚರ್ಚೆ ಮಾಡುವವರು ಮಾಡಲಿ. ಎಲ್ಲಿ ಯಾವ ಸಭೆಗಳ ಬಗ್ಗೆ ಚಿಂತನೆ ನಡೆಯುತ್ತಿದೆ ಎಂದು ನಮಗೂ ಗೊತ್ತಿದೆ’ ಎಂದರು.

ಎಚ್‌ಡಿಕೆ ಯುರೋಪ್ ಪ್ರವಾಸ: ‘ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಭಾನುವಾರ ಬೆಳಿಗ್ಗೆ ಕುಟುಂಬ ಸಮೇತ ಯುರೋಪ್ ಪ್ರವಾಸಕ್ಕೆ ತೆರಳಿದ್ದಾರೆ. ಅವರು ಫಿನ್ಲೆಂಡ್‌ಗೆ ಭೇಟಿ ನೀಡಲಿದ್ದಾರೆ. ಆಗಸ್ಟ್ 2 ರಂದು ವಾಪಸಾಗಲಿದ್ದಾರೆ’ ಎಂದು ಕುಮಾರಸ್ವಾಮಿ ಅವರ ಆಪ್ತ ಮೂಲಗಳು ತಿಳಿಸಿವೆ.

ಕಂದಾಯ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ



ಜಿ.ಅರುಣ್ ಕುಮಾರ್

ಶಿವಮೊಗ್ಗ: ಜಮೀನಿನ ಖಾತೆ ಬದಲಾವಣೆ ಮಾಡಿಕೊಡಲು ಸಾರ್ವಜನಿಕರೊಬ್ಬರಿಂದ ₹1.5 ಲಕ್ಷ ಲಂಚ ಪಡೆಯುತ್ತಿದ್ದ ಇಲ್ಲಿನ ತಾಲ್ಲೂಕು ಕಚೇರಿಯ ಶಿರಸ್ತೇದಾರ ಜಿ.ಅರುಣ್‌ಕುಮಾರ್ ಸೋಮವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಲಂಚ ಪಡೆಯುವಾಗಲೇ ಸಿಕ್ಕಿಬಿದ್ದು ಬಂಧನಕ್ಕೆ ಒಳಗಾಗಿರುವ ಅರುಣ್‌ಕುಮಾರ್ ಕಂದಾಯ ಇಲಾಖೆ ನೌಕರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷರೂ ಆಗಿದ್ದಾರೆ.

ಶಿವಮೊಗ್ಗದ ವಿನಾಯಕ ನಗರ ನಿವಾಸಿ ಹನುಮಂತ ಬನ್ನಿಕೋಡ್ ಅವರು ಇಲ್ಲಿನ ಮಲ್ಲಿಗೇನಹಳ್ಳಿ ಸರ್ವೆ ನಂ. 84ರಲ್ಲಿ ಗೆಳೆಯರೊಂದಿಗೆ ಸೇರಿ ಎರಡು ಎಕರೆ ಜಮೀನು ಖರೀದಿಸಿದ್ದು, ಅದರ ಖಾತೆ ಬದಲಾವಣೆ ಮಾಡಿಕೊಡಲು ತಾಲ್ಲೂಕು ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಈ ಕೆಲಸ ಮಾಡಿಕೊಡಲು ಶಿರಸ್ತೇದಾರ ಅರುಣ್‌ಕುಮಾರ್ ₹3 ಲಕ್ಷ ಲಂಚಕ್ಕೆ ಬೇಡಿಕ ಇಟ್ಟಿದ್ದರು ಎನ್ನಲಾಗಿದೆ. ಹನುಮಂತ ಅವರು ಈ ಸಂಬಂಧ ದಾಖಲೆ ಸಮೇತ ಲೋಕಾಯುಕ್ತ ಕಚೇರಿಗೆ ದೂರು ನೀಡಿದ್ದರು.

ಆಟೊದಲ್ಲಿ ಬಂದ ಎಸ್ಪಿ: ಅರುಣ್‌ಕುಮಾರ್ ನೌಕರರ ಸಂಘಟನೆಯಲ್ಲಿರುವ ಕಾರಣ ಲೋಕಾಯುಕ್ತ ಪೊಲೀಸರು ನಡೆಸಿದ್ದ ಭ್ರಷ್ಟಾಚಾರದ ವಿರುದ್ಧದ ಹಲವು ಜನಜಾಗೃತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಹೀಗಾಗಿ ಸ್ಥಳೀಯ ಲೋಕಾಯುಕ್ತ ಅಧಿಕಾರಿಗಳ ಪರಿಚಯ ಅವರಿಗಿತ್ತು. ದಾಳಿಗೆ ಸ್ಥಳೀಯ ಅಧಿಕಾರಿಗಳು ಬಂದರೆ ಅವರನ್ನು ಗುರುತಿಸಬಹುದು ಎಂದು ಚಿತ್ರದುರ್ಗದಿಂದ ಹೆಚ್ಚಿನ ಅಧಿಕಾರಿಗಳು ಬಂದಿದ್ದರು. ಸ್ವತಃ ಲೋಕಾಯುಕ್ತ ಎಸ್ಪಿ ಎನ್. ವಾಸುದೇವರಾಮ ಆಟೊದಲ್ಲಿ ಜನಸಾಮಾನ್ಯರ ರೀತಿ ಬಂದು ತಾಲ್ಲೂಕು ಕಚೇರಿ ಎದುರು ಕಾದು ಕುಳಿತಿದ್ದರು. ಅಧಿಕಾರಿಗಳು ಬೈಕ್‌ನಲ್ಲಿ ಬಂದು ಕಾಯುತ್ತಾ ನಿಂತಿದ್ದರು ಎಂದು ತಿಳಿದುಬಂದಿದೆ.

ನಿಗದಿಯಂತೆ ತಾಲ್ಲೂಕು ಕಚೇರಿಯಲ್ಲಿ ಲಂಚದ ಮೊತ್ತದ ಮೊದಲ ಕಂತು ₹1.5 ಲಕ್ಷವನ್ನು ಹನುಮಂತ ಅವರಿಂದ ಪಡೆಯುವಾಗ ಲೋಕಾಯುಕ್ತ ಎಸ್‌ಪಿ ವಾಸುದೇವ್ ನೇತೃತ್ವದಲ್ಲಿ ದಾಳಿ ಮಾಡಿ ಅರುಣ್‌ಕುಮಾರ್ ಅವರನ್ನು ಬಂಧಿಸಲಾಗಿದೆ. ತಾಲ್ಲೂಕು ಕಚೇರಿಯಲ್ಲಿ ಜನಜಂಗುಳಿ ಇದ್ದದ್ದು, ಅರುಣ್‌ಕುಮಾರ್‌ಗೆ ಲೋಕಾಯುಕ್ತ ಅಧಿಕಾರಿಗಳ ದಾಳಿಯ ಸುಳಿವು ಸಿಗದಿರಲು ವರವಾಯಿತು ಎಂದು ಮೂಲಗಳು ತಿಳಿಸಿವೆ. ದಾಳಿಯ ಸಂದರ್ಭದಲ್ಲಿ ಲೋಕಾಯುಕ್ತ ಡಿವೈಎಸ್‌ಪಿ ಉಮೇಶ್ ನಾಯ್ಕ್, ಇನ್‌ಸ್ಪೆಕ್ಟರ್‌ಗಳಾದ ಶಿಲ್ಪಾ ಹಾಗೂ ರಾಧಾಕೃಷ್ಣ ಇದ್ದರು.

ಮುಸ್ಲಿಮರ ನೆರವಿನೊಂದಿಗೆ ಪಾದಪೂಜೆ, ಭಾವೈಕ್ಯ ಸಾರಿದ ಹಿಂದೂ–ಮುಸ್ಲಿಮರು

ಮಸೀದಿ ಉದ್ಘಾಟಿಸಿದ ಸ್ವಾಮೀಜಿಗಳು

ಪ್ರಜಾವಾಣಿ ವಾರ್ತೆ

ಕುಕನೂರು (ಕೊಪ್ಪಳ ಜಿಲ್ಲೆ): ಪಟ್ಟಣದ ಕೋಳಿಪೇಟೆಯಲ್ಲಿ ನೂತನವಾಗಿ ನಿರ್ಮಿಸಿರುವ ಇಟಗಿ ಮಸೀದಿಯನ್ನು ಸೋಮವಾರ ಹಿಂದೂ ಸಮಾಜದ ಸ್ವಾಮೀಜಿಗಳು ಉದ್ಘಾಟಿಸುವ ಮೂಲಕ ಭಾವೈಕ್ಯ ಮೆರೆದರು. ಇದು ಬಹಳಷ್ಟು ಜನರ ಮೆಚ್ಚುಗೆಗೆ ಕಾರಣವಾಗಿದೆ.

ಯಲಬುರ್ಗಾದ ಶ್ರೀಧರ ಮುರುಡಿಮಠದ ಬಸವಲಿಂಗ ಶಿವಾಚಾರ್ಯ ಸ್ವಾಮೀಜಿ ಹಾಗೂ ಕುಕನೂರಿನ ಅನ್ನದಾನೇಶ್ವರ ಶಾಖಾಮಠದ ಮಹದೇವಯ್ಯ ಸ್ವಾಮೀಜಿ ಮಸೀದಿ ಉದ್ಘಾಟಿಸಿದರು. ಬಳಿಕ ಹಿಂದೂ ಸಮಾಜದ ಮುಖಂಡರು ಸ್ವಾಮೀಜಿಗಳಿಗೆ ಪಾದಪೂಜೆ ನೆರವೇರಿಸಿದರೆ, ಅವರಿಗೆ ಮುಸ್ಲಿಂ ಸಮಾಜದ ಮುಖಂಡರು ಪಾದ ತೊಳೆಯಲು ನೀರು, ಬಿಲ್ವಪತ್ರೆ, ಆರತಿ ನೀಡಿ ನೆರವಾದರು.



ಕುಕನೂರಿನಲ್ಲಿ ಸೋಮವಾರ ಯಲಬುರ್ಗಾದ ಶ್ರೀಧರ ಮುರುಡಿಮಠದ ಬಸವಲಿಂಗ ಶಿವಾಚಾರ್ಯ ಸ್ವಾಮೀಜಿ ಹಾಗೂ ಕುಕನೂರಿನ ಅನ್ನದಾನೇಶ್ವರ ಶಾಖಾಮಠದ ಮಹದೇವಯ್ಯ ಸ್ವಾಮೀಜಿ ಅವರು ಮಸೀದಿ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಬಸವಲಿಂಗ ಸ್ವಾಮೀಜಿ, ‘ನಮ್ಮ ನಡವಳಿಕೆಗಳು ಯುವ ಪೀಳಿಗೆಗೆ ಮಾದರಿಯಾಗಿರಬೇಕು. ಹಾಗೆ ನಾವೆಲ್ಲರೂ ಬದುಕಬೇಕಾದ ಅನಿವಾರ್ಯವಿದೆ. ಆಗ ಮಾತ್ರ ಸಮಾಜದಲ್ಲಿ ನೆಮ್ಮದಿ ಹಾಗೂ ಶಾಂತಿ ಸ್ಥಾಪನೆಯಾಗಲು ಸಾಧ್ಯವಾಗುತ್ತದೆ’ ಎಂದರು.

ಮಹದೇವಯ್ಯ ಸ್ವಾಮೀಜಿ, ‘ಗ್ರಾಮೀಣ ಪ್ರದೇಶದಲ್ಲಿ ಹಿಂದೂ ಹಾಗೂ ಮುಸ್ಲಿಮರು ಸೌಹಾರ್ದ ಭಾವನೆ ಬೆಳೆಸಿಕೊಂಡು ಎಲ್ಲ ಹಬ್ಬಗಳನ್ನು ಶಾಂತರೀತಿಯಿಂದ ಆಚರಿಸುತ್ತಾರೆ. ಇದೇ ನಮ್ಮ ಹೆಗ್ಗಳಿಕೆ’ ಎಂದು ತಿಳಿಸಿದರು.

> **ಮುಸ್ಲಿಂ ಸಮಾಜ ಶಾಂತಿ, ಸೌಹಾರ್ದವನ್ನೇ ಬಯಸುತ್ತದೆ. ಕುಕನೂರಿನಲ್ಲಿ ನಾವೆಲ್ಲರೂ ಸಹೋದರರಂತೆ ಇದ್ದೇವೆ. ಮಸೀದಿ ಉದ್ಘಾಟನೆಗೆ ಸ್ವಾಮೀಜಿಗಳನ್ನು ಕರೆಸಿದ್ದೇವೆ**
> **ಮಹಮ್ಮದ್ ಅಲಿ**
> ಮುಸ್ಲಿಂ ಸಮಾಜದ ಮುಖಂಡ

ಜಾಮಿಯಾ ಮಸೀದಿಯ ಮುಖಂಡ ಮಹಮ್ಮದ್ ಅಲಿ, ಫಕೀರಪ್ಪ ಚಂಡೂರ್, ಬಸವರಾಜ ಆರ್ಯರ, ಮೌಲಸಾಬ್ ಮಕ್ಕಂದಾರ, ಹುಸೇನಸಾಬ್ ಚೋಕಾಲಿ, ದೂದಪೀರ್ ಸಾಬ್ ಅಲಿಸಾಬ್, ನೂರ್ ಅಹ್ಮದ್ ಕೊಪ್ಪಳ, ರಾಮಣ್ಣ ಮುಂದಲಮನಿ, ರಫೀಸಾಬ್ ಚೋಕಾಲಿ, ಮೌಲಾಸಾಬ್, ಶಿವಪ್ಪ ಸಂದಿಮನಿ, ಶರಣಪ್ಪ ಚಂಡೂರು, ಮಲ್ಲಪ್ಪ ವಾಲ್ಮೀಕಿ ಇದ್ದರು.

ಆಗಸ್ಟ್ ಮೊದಲ ವಾರ ಗೃಹಜ್ಯೋತಿಗೆ ಚಾಲನೆ

ಕಲಬುರಗಿ: ‘ಕಾಂಗ್ರೆಸ್ ಪಕ್ಷವು ರಾಜ್ಯದ ಜನತೆಗೆ ನೀಡಿರುವಂತಹ 5 ಗ್ಯಾರಂಟಿಗಳನ್ನು ನಮ್ಮ ಸರ್ಕಾರ ಹಂತ ಹಂತವಾಗಿ ಈಡೇರಿಸುತ್ತಿದ್ದು, ಆಗಸ್ಟ್ ತಿಂಗಳ ಮೊದಲ ವಾರದಲ್ಲಿ ಗೃಹಜ್ಯೋತಿ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಲಬುರಗಿಯಲ್ಲೇ ಚಾಲನೆ ನೀಡಲಿದ್ದಾರೆ’ ಎಂದು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲಾಭಿವೃದ್ಧಿ ಸಚಿವ ಡಾ.ಶರಣಪ್ರಕಾಶ ಪಾಟೀಲ ತಿಳಿಸಿದರು.

ಸೇಡಂ ಪಟ್ಟಣದಲ್ಲಿ ಸೋಮವಾರ ಆಯೋಜಿಸಿದ್ದ ಪತ್ರಿಕಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ‘ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿ ಹಲವು ಮುಖಂಡರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಜುಲೈ ತಿಂಗಳಿನಲ್ಲಿ 200 ಯೂನಿಟ್‌ವರೆಗಿನ ವಿದ್ಯುತ್ ಬಿಲ್ ಕಟ್ಟಬೇಕಾಗಿಲ್ಲ. ಯುವನಿಧಿ ಯೋಜನೆ ಜಾರಿಗೂ ತಯಾರಿ ನಡೆಸಲಾಗಿದ್ದು, ಡಿಸೆಂಬರ್ ತಿಂಗಳಲ್ಲಿ ಜಾರಿಯಾಗಲಿದೆ’ ಎಂದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in




ಸುಭಾಷಿತ

ಯಶಸ್ಸನ್ನು ಸಂಭ್ರಮಿಸುವುದರಲ್ಲಿ ತಪ್ಪಿಲ್ಲ. ಆದರೆ, ವೈಫಲ್ಯದಿಂದ ಪಾಠ ಕಲಿಯುವುದೂ ಅಷ್ಟೇ ಮುಖ್ಯ.
– ಬಿಲ್ ಗೇಟ್ಸ್

ವನ್ಯಜೀವಿ ಯೋಜನೆಗಳು ವನ್ಯಮೃಗಗಳ ಹಿತಕ್ಕೇ ವಿನಾ ನಾಯಕರ ಪ್ರತಿಷ್ಠೆಗಲ್ಲ

ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಒಂದೊಂದು ಚೀತಾ ಸಾವಿನ ಸುದ್ದಿ ಕೇಳಿದಾಗಲೂ ಈ ಪ್ರಾಣಿಗಳನ್ನು ಆಫ್ರಿಕಾದಿಂದ ಭಾರತಕ್ಕೆ ಸ್ಥಳಾಂತರ ಮಾಡಿದ ನಿರ್ಧಾರದ ಬಗ್ಗೆಯೇ ಪ್ರಶ್ನೆಗಳು ಏಳುತ್ತವೆ. ದಕ್ಷಿಣ ಆಫ್ರಿಕಾ ಮತ್ತು ನಮೀಬಿಯಾದಿಂದ ಭಾರತಕ್ಕೆ ತಂದ 20 ಚೀತಾಗಳ ಪೈಕಿ ಎಂಟು ಚೀತಾಗಳು ಇಲ್ಲಿಗೆ ಬಂದ ಕೆಲವೇ ತಿಂಗಳಲ್ಲಿ ಮೃತಪಟ್ಟಿವೆ. ಕಳೆದ ವಾರದಲ್ಲಿ ಕೂಡ ಒಂದು ಚೀತಾ ಸತ್ತುಹೋಗಿದೆ. ಸೆಪ್ಟಿಸೀಮಿಯಾದಿಂದ (ಬ್ಯಾಕ್ಟೀರಿಯಾದಿಂದಾಗಿ ರಕ್ತದಲ್ಲಿ ನಂಜು) ಸಾವು ಉಂಟಾಗಿದೆ. ಕುತ್ತಿಗೆಯಲ್ಲಿ ಆಗಿದ್ದ ಸೋಂಕು ರಕ್ತ ನಂಜಾಗುವುದಕ್ಕೆ ಕಾರಣ. ಚೀತಾಕ್ಕೆ ಅಳವಡಿಸಲಾಗಿದ್ದ ರೇಡಿಯೊ ಕಾಲರ್‌ನಿಂದಾಗಿ ಕುತ್ತಿಗೆಯಲ್ಲಿ ಸೋಂಕು ಆಗಿರಬಹುದು ಎಂದು ಅಂದಾಜಿಸಲಾಗಿದೆ. ಮಳೆ, ಆರ್ದ್ರತೆ ಮತ್ತು ಕೀಟಗಳಿಂದಾಗಿ ಪರಿಸ್ಥಿತಿ ಇನ್ನಷ್ಟು ಶೋಚನೀಯವಾಯಿತು. ಚೀತಾಗಳ ಸಾವು ಅವುಗಳಿಗೆ ಅತ್ಯಂತ ವೇದನಾದಾಯಕವೇ ಆಗಿರಬೇಕು. ಇನ್ನೂ ಎರಡು ಚೀತಾಗಳಿಗೆ ಇದೇ ಅನಾರೋಗ್ಯ ಕಾಡುತ್ತಿದೆ ಎಂಬ ವರದಿಗಳಿವೆ. ಹಾಗಿದ್ದರೂ ಚೀತಾಗಳು ಸೋಂಕಿನಿಂದಾಗಿ ಸತ್ತಿವೆ ಎಂಬುದನ್ನು ಸರ್ಕಾರ ಅಲ್ಲಗಳೆದಿದೆ. ಚೀತಾಗಳನ್ನು ಭಾರತಕ್ಕೆ ಕರೆತಂದ ಬಳಿಕ ನಾಲ್ಕು ಮರಿಗಳು ಜನಿಸಿವೆ. ಅವುಗಳ ಪೈಕಿ ಮೂರು ಮರಿಗಳು ಸತ್ತಿವೆ. ಪ್ರತಿ ಚೀತಾದ ಸಾವಿಗೂ ಭಿನ್ನವಾದ ಕಾರಣವೇ ಇದೆ. ಈ ಪ್ರಾಣಿಗಳು ಇಲ್ಲಿನ ಪರಿಸರದಲ್ಲಿ ಎದುರಿಸುತ್ತಿರುವ ಸಂಕಷ್ಟಗಳನ್ನು ಇದು ತೋರಿಸುತ್ತಿದೆ.



ಚೀತಾಗಳು ಅಳಿವಿನ ಅಂಚಿನಲ್ಲಿ ಇರುವ ಪ್ರಾಣಿಗಳು. ಹಾಗಿರುವಾಗ, ಒಂದೇ ಒಂದು ಚೀತಾವನ್ನು ಸಾಯಲು ಬಿಡುವುದು ಕೂಡ ಸರಿಯಲ್ಲ

ಚೀತಾ ಸ್ಥಳಾಂತರ ಯೋಜನೆ ಜಾರಿಯ ಉಸ್ತುವಾರಿ ಹೊತ್ತಿರುವ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರವು ಈ ಎಲ್ಲವೂ ಸಹಜ ಸಾವುಗಳೇ ಎಂದು ಹೇಳಿದೆ. ಆದರೆ, ಕೆಲವೇ ತಿಂಗಳೊಳಗೆ ಅಷ್ಟೊಂದು ಚೀತಾಗಳು ಸತ್ತಿರುವುದೇ ಈ ಸಾವುಗಳನ್ನು ಅಸಹಜ ಮಾಡಿಬಿಡುತ್ತದೆ. ಪ್ರಾಣಿಗಳ ಸ್ಥಳಾಂತರ ಯೋಜನೆಯಲ್ಲಿ ಕೆಲವು ಪ್ರಾಣಿಗಳು ಸಾಯುವುದು ನಿರೀಕ್ಷಿತವೇ ಎಂದು ಹೇಳಲಾಗುತ್ತಿದೆ. ಆದರೆ ಚೀತಾಗಳು ಅಳಿವಿನ ಅಂಚಿನಲ್ಲಿ ಇರುವ ಪ್ರಾಣಿಗಳು. ಹಾಗಿರುವಾಗ ಒಂದೇ ಒಂದು ಚೀತಾವನ್ನು ಸಾಯಲು ಬಿಡುವುದು ಕೂಡ ಸರಿಯಲ್ಲ. ಇತ್ತೀಚೆಗೆ ಚೀತಾವೊಂದು ಸತ್ತ ಬಳಿಕ, ರಾಜ್ಯದ ಮುಖ್ಯ ವನ್ಯಜೀವಿ ಅಧಿಕಾರಿಯನ್ನು ಮಧ್ಯಪ್ರದೇಶ ಸರ್ಕಾರವು ವರ್ಗಾವಣೆ ಮಾಡಿದೆ. ಉಳಿದ ಚೀತಾಗಳ ಮೇಲೆ ಹೆಚ್ಚಿನ ನಿಗಾ ಮತ್ತು ಕಣ್ಗಾವಲು ಇರಿಸಬೇಕು ಹಾಗೂ ಅವುಗಳ ಅಗತ್ಯಗಳಿಗೆ ತಕ್ಷಣವೇ ಸ್ಪಂದಿಸಬೇಕು ಎಂಬ ಆದೇಶವನ್ನೂ ಮಾಡಿದೆ.

ಈ ಯೋಜನೆಯ ಸುತ್ತ ವಿವಾದಗಳು ಆರಂಭದಿಂದಲೂ ಸುತ್ತಿಕೊಂಡಿದ್ದವು. ಚೀತಾಗಳಿಗೆ ವಿಶಾಲವಾದ ಆವಾಸಸ್ಥಾನಗಳ ಅಗತ್ಯ ಇದೆ. ಕುನೊ ರಾಷ್ಟ್ರೀಯ ಉದ್ಯಾನವು ಚೀತಾಗಳ ಅಗತ್ಯಕ್ಕೆ ಅನುಗುಣವಾಗಿ ಇಲ್ಲ ಎಂದು ಪರಿಣತರು ಅಭಿಪ್ರಾಯಪಟ್ಟಿದ್ದಾರೆ. ರಾಷ್ಟ್ರೀಯ ಉದ್ಯಾನದ ಅಂಚಿನಲ್ಲಿ ಇರುವ ಗ್ರಾಮಗಳಿಗೆ ಚೀತಾಗಳು ಪ್ರವೇಶಿಸುವ ಸಾಧ್ಯತೆ ಇದ್ದು, ಮಾನವ–ಪ್ರಾಣಿ ಸಂಘರ್ಷದ ಅಪಾಯವೂ ಇದೆ. ಚೀತಾಗಳನ್ನು ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಸ್ಥಳಾಂತರಿಸಬಾರದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದ ಪರಿಣತರ ಅಭಿಮತ ಸರಿಯಾಗಿಯೇ ಇತ್ತು ಎಂಬುದು ಈಗ ಸಾಬೀತಾದಂತೆ ಆಯಿತು. ಇದೊಂದು ತೋರ್ಪಡಿಕೆಯ ಯೋಜನೆ ಎಂಬ ಟೀಕೆ ಈ ಹಿಂದೆ ವ್ಯಕ್ತವಾಗಿತ್ತು. ಗುಜರಾತ್‌ನ ಗಿರ್ ರಾಷ್ಟ್ರೀಯ ಉದ್ಯಾನದಲ್ಲಿ ಸಿಂಹಗಳ ಸಂಖ್ಯೆ ಹೆಚ್ಚಾಗಿದೆ. ಕೆಲವು ಸಿಂಹಗಳನ್ನು ಸ್ಥಳಾಂತರಿಸಲು ಕುನೊ ಉದ್ಯಾನವು ಸೂಕ್ತವಾಗಿತ್ತು. ಆದರೆ, ಈ ಪ್ರಸ್ತಾವವನ್ನು ಗುಜರಾತ್ ಸರ್ಕಾರವು ವಿರೋಧಿಸಿತ್ತು. ಆ ರಾಜ್ಯವು ಈ ಪ್ರಸ್ತಾವವನ್ನು ವಿರೋಧಿಸಿದಾಗ, ಈಗ ಪ್ರಧಾನಿಯಾಗಿರುವ ನರೇಂದ್ರ ಮೋದಿ ಅವರು ಗುಜರಾತ್‌ನ ಮುಖ್ಯಮಂತ್ರಿ ಆಗಿದ್ದರು. ವನ್ಯಜೀವಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವಾಗ ವನ್ಯಮೃಗಗಳ ಹಿತವೇ ಮುಖ್ಯವಾಗಬೇಕು. ರಾಜಕೀಯ ನಾಯಕರ ಪ್ರತಿಷ್ಠೆ ಅಥವಾ ಇತರ ಯಾವುದೇ ಭಾವನೆಗಳು ಪ್ರಧಾನವಾಗಬಾರದು.

ದಿನದ ಟ್ವೀಟ್

ತಕ್ಷಣದ ಕ್ರಮ ಏಕಿಲ್ಲ?



ಭಾರತದ ಪಾಲಿಗೆ ದುರಂತವೆಂದರೆ, ಶರಶಯ್ಯೆಯ ಮೇಲೆ ಮಲಗಿದ್ದಾಗ ಮಾತ್ರ ರಾಜಧರ್ಮವನ್ನು ಬೋಧಿಸಲಾಗುತ್ತದೆ. ಮಹಿಳೆಯೊಬ್ಬಳನ್ನು ಪುರುಷರ ಎದುರಿನಲ್ಲಿ, ಸಾರ್ವಜನಿಕವಾಗಿ ವಿವಸ್ತ್ರಗೊಳಿಸಿದಾಗ ರಾಜಧರ್ಮದ ಬೋಧನೆ ಮಾಡುವುದಿಲ್ಲ. ಭೀಷ್ಮ ಮತ್ತು ಇತರ ಹಿರಿಯರು ದುಶ್ಶಾಸನನನ್ನು ತಕ್ಷಣವೇ ಶಿಕ್ಷೆಗೆ ಗುರಿಪಡಿಸಿದ್ದಿದ್ದರೆ ಯುದ್ಧ ನಡೆಯುತ್ತಿತ್ತೇ?

ಸಂಜಯ್ ಹೆಗ್ಡೆ, ವಕೀಲ

ಕಿಡಿನುಡಿ



ಸಂಸತ್ತು ಒತ್ತಟ್ಟಿಗಿರಲಿ, ಮಗುವೊಂದನ್ನು ಅಮಾನತು ಮಾಡಬೇಕೆಂದರೆ ಶಾಲೆಯಲ್ಲಿ ಕೂಡ ಇದಕ್ಕಿಂತಲೂ ಗಂಭೀರವಾದ ಕಾರಣ ಬೇಕಾಗುತ್ತಿತ್ತು. ಇದೆಂತಹ ನಾಚಿಕೆಗೇಡಿನ ಸಂಗತಿ!

ಶಿವಂ ಶಂಕರ್ ಸಿಂಗ್, ಲೇಖಕ

25 ವರ್ಷಗಳ ಹಿಂದೆ

ಶನಿವಾರ, 25-7-1998

- **ದೇವನಹಳ್ಳಿ ವಿಮಾನ ನಿಲ್ದಾಣ: ಟಾಟಾ– ಪಟೇಲ್ ಫಲಪ್ರದ ಚರ್ಚೆ**

ಬೆಂಗಳೂರು, ಜುಲೈ 24– ದೇವನಹಳ್ಳಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣ ಮಾಡುವ ಯೋಜನೆಯನ್ನು ಟಾಟಾ ಸಮೂಹ ಕೈಬಿಟ್ಟಿಲ್ಲ; ಆದರೆ ಆರ್ಥಿಕವಾಗಿ ಎಷ್ಟರ ಮಟ್ಟಿಗೆ ಲಾಭದಾಯಕ ಎಂಬುದರ ಬಗ್ಗೆ ಹೊಸದಾಗಿ ಅಂದಾಜು ಮಾಡಲಿದೆ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ಇಲ್ಲಿ ತಿಳಿಸಿದರು.

ವಿಧಾನಸೌಧದ ತಮ್ಮ ಕಚೇರಿಯಲ್ಲಿ ಮುಖ್ಯಮಂತ್ರಿ ಅವರು, ಟಾಟಾ ಸಂಸ್ಥೆಯ ಅಧ್ಯಕ್ಷ ಜೆ.ಎನ್.ರತನ್ ಟಾಟಾ ಅವರೊಂದಿಗೆ ಸುಮಾರು 90 ನಿಮಿಷಗಳ ಕಾಲ ನಡೆಸಿದ ಸುದೀರ್ಘ ಚರ್ಚೆಯ ನಂತರ ಈ ವಿಷಯವನ್ನು ಪತ್ರಕರ್ತರಿಗೆ ತಿಳಿಸಿದ ಅವರು 'ಇದರಿಂದ ಈ ಯೋಜನೆಯನ್ನು ಟಾಟಾ ಸಂಸ್ಥೆ ಕೈ ಬಿಟ್ಟಿಲ್ಲ ಎಂಬುದು ಸ್ಪಷ್ಟವಾಗಿದೆ' ಎಂದು ಒತ್ತಿ ಹೇಳಿದರು.

ರತನ್ ಟಾಟಾ ಅವರೊಂದಿಗೆ ಮುಖಾಮುಖಿಯಾಗಿ ನಡೆಸಿದ ಚರ್ಚೆ 'ಅತ್ಯಂತ ಫಲಪ್ರದ' ಎಂದು ಮುಖ್ಯಮಂತ್ರಿ ಅವರು ಬಣ್ಣಿಸಿದರು.

- **ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಕಾಂಗ್ರೆಸ್ ಪಕ್ಷದ ಆಗ್ರಹ**

ನವದೆಹಲಿ, ಜುಲೈ 24 (ಯುಎನ್‌ಐ)– 'ಕಾನೂನು ತಿದ್ದುಪಡಿ ಮಾಡಿ, ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿ, ಆರ್ಥಿಕ ಸ್ವಾತಂತ್ರ್ಯ ನೀಡಿ ಹಾಗೂ ಮಹಿಳೆಯರ ಕುರಿತ ಪುರುಷರ ಮನೋಧರ್ಮ ಬದಲಿಸಿ, ಆ ಮೂಲಕ ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಎಲ್ಲ ರೀತಿಯ ಕ್ರಮ ಕೈಗೊಳ್ಳಬೇಕು'

ಈ ಅಭಿಪ್ರಾಯವನ್ನು, ಲೋಕಸಭೆಯಲ್ಲಿ ಇಂದು ನಡೆದ ವಿಶೇಷ ಚರ್ಚೆಯಲ್ಲಿ ಭಾಗವಹಿಸಿದ್ದ ವಿರೋಧ ಪಕ್ಷದ ನಾಯಕ ಹಾಗೂ ಕಾಂಗ್ರೆಸ್ ಮುಖಂಡ ಶರದ್ ಪವಾರ್ ವ್ಯಕ್ತಪಡಿಸಿದರು. ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ಕುರಿತು ಗೀತಾ ಮುಖರ್ಜಿ (ಸಿಪಿಐ) ಅವರು ಆರಂಭಿಸಿದ ವಿಶೇಷ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಪವಾರ್ ಅವರು, 'ಸರ್ಕಾರಿ ಹಾಗೂ ಅರೆ ಸರ್ಕಾರಿ ಹುದ್ದೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಇರಬೇಕು. ಅದರಿಂದ ಅವರಿಗೆ ಅವಕಾಶ ಹೆಚ್ಚುತ್ತದೆ' ಎಂದು ವಾದಿಸಿದರು.

50 ವರ್ಷಗಳ ಹಿಂದೆ

ಬುಧವಾರ, 25-7-1973

- **ಕರ್ನಾಟಕ ರಫ್ತು ಸಂಸ್ಥೆ ಫೈಲು ನಾಪತ್ತೆ ಬಗ್ಗೆ ಆರೋಪ–ಪ್ರತ್ಯಾರೋಪ**

ನವದೆಹಲಿ, ಜುಲೈ 24– ಕರ್ನಾಟಕ ರಫ್ತು ಸಂಸ್ಥೆಗೆ ಸಂಬಂಧಿಸಿದ 'ಫೈಲು' ನಾಪತ್ತೆಯಾಗಿರುವ ವಿವಾದವು ಇಂದು ರಾಜ್ಯಸಭೆಯಲ್ಲಿ ಕೋಲಾಹಲಕ್ಕೆ ಕಾರಣವಾಯಿತು.

ಈಗ ರೈಲ್ವೆ ಸಚಿವರಾಗಿರುವ ಎಲ್.ಎನ್. ಮಿಶ್ರಾ ಅವರು ಹಿಂದೆ ವಿದೇಶಿ ವಾಣಿಜ್ಯ ಸಚಿವರಾಗಿದ್ದ ಕಾಲದಲ್ಲೇ ಈ ಫೈಲು ನಾಪತ್ತೆಯಾಗಿರುವುದನ್ನು ಪ್ರಸಕ್ತ ವಿದೇಶಿ ವಾಣಿಜ್ಯ ಸಚಿವ ಡಿ.ಚಟ್ಟೋಪಾಧ್ಯಾಯ ಅವರು ಒಪ್ಪಿಕೊಂಡರು. ಅಕ್ರಮ ವ್ಯವಹಾರಗಳನ್ನು ಮುಚ್ಚಿಡುವುದಕ್ಕಾಗಿ ದಾಖಲೆ ಪತ್ರಗಳನ್ನು ಪತ್ತೆ ಇಲ್ಲದ ಹಾಗೆ ಮಾಡಲಾಯಿತೆಂದು ಸದಸ್ಯರು ಆಪಾದಿಸಿದರು.

- **ಸಂಸತ್ ಸಮಿತಿಯಿಂದ ತನಿಖೆಗೆ ಆಗ್ರಹ: ವಿರೋಧ ಪಕ್ಷಗಳ ಸಭಾತ್ಯಾಗ**

ನವದೆಹಲಿ, ಜುಲೈ 24– ಉತ್ತರಪ್ರದೇಶ, ಬಿಹಾರ ಮತ್ತು ಒರಿಸ್ಸಾಗಳ ಅಭಾವಪೀಡಿತ ಪ್ರದೇಶಗಳಲ್ಲಿ ಹಸಿವಿನಿಂದ ಸಾವು ಸಂಭವಿಸಿದೆ ಎಂಬ ವರದಿಗಳ ಬಗ್ಗೆ ವಿಚಾರಣೆಗೆ ಸರ್ವ ಪಕ್ಷಗಳ ಸಂಸದೀಯ ಸಮಿತಿಯೊಂದನ್ನು ನೇಮಕ ಮಾಡಬೇಕೆಂಬ ಬೇಡಿಕೆಯನ್ನು ಲೋಕಸಭೆಯಲ್ಲಿ ಸರ್ಕಾರ ತಿರಸ್ಕರಿಸಿದ ಕಾರಣ, ಎಲ್ಲ ವಿರೋಧಪಕ್ಷಗಳ ಸದಸ್ಯರು ಇಂದು ಪ್ರತಿಭಟನೆ ನಡೆಸಿ ಸಭಾತ್ಯಾಗ ಮಾಡಿದರು.

ಹದಗೆಡುತ್ತಿರುವ ಆಹಾರ ಪರಿಸ್ಥಿತಿ, ಎರಡನೇ ದಿನವಾದ ಇಂದೂ ಸಹ ಪ್ರಮುಖವಾಗಿ ಚರ್ಚೆಗೆ ಬಂದಿತು. ನಿನ್ನೆ ಚರ್ಚೆ ಸಂದರ್ಭದಲ್ಲಿಯಂತೆಯೇ ಸದಸ್ಯರು ಇಂದು ಸಹ 'ಆಹಾರ ಪರಿಸ್ಥಿತಿ ಬಗ್ಗೆ ಸರ್ಕಾರದ ಸಂತೃಪ್ತ ಮನೋಭಾವ'ದ ಬಗ್ಗೆ ತಮ್ಮ ಕಳವಳ ವ್ಯಕ್ತಪಡಿಸಿದರು.

- **ರೈಲ್ವೆಯಲ್ಲಿ ಮುಷ್ಕರ ನಿಷೇಧ**

ನವದೆಹಲಿ, ಜುಲೈ 24– ರೈಲುಗಳ ಸಂಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳಲು ರೈಲ್ವೆ ಇಲಾಖೆಯಲ್ಲಿ ಮುಷ್ಕರ, ಮತ್ತಿತರ ಬಗೆಯ ಕೆಲಸ ನಿಲುಗಡೆಯನ್ನು ಸರ್ಕಾರ ನಿಷೇಧಿಸಿದೆ ಎಂದು ರೈಲ್ವೆ ಉಪ ಸಚಿವ ಮಹಮದ್‌ಷಫಿ ಖುರೇಷಿ ಅವರು ಇಂದು ಲೋಕಸಭೆಗೆ ತಿಳಿಸಿದರು.

ಹಾಡಿದ್ದನ್ನೇ ಹಾಡುತ್ತಿರಬೇಕು, ಬಂಡೆಯಂಥ ಮನಸ್ಸುಗಳು ಬದಲಾಗುವವರೆಗೆ...

ಬಂಡೆಯಂಥ ಮನಸ್ಸು ಬದಲಾಗುವುದೆಂದು?



ವಿಶ್ಲೇಷಣೆ

ಎಂ.ಎಸ್.ಆಶಾದೇವಿ

ಹಾಗಾದರೆ, ಇದು ಎಂದಿಗೂ ಬದಲಾಗುವುದೇ ಇಲ್ಲವೇ? ಹೆಣ್ಣಿನ ಕುರಿತಂತೆ ಗಂಡಿನ ಈ ನೋಟ, ನಿಲುವು, ನಡೆ ಎಲ್ಲವೂ ಬದಲಾಗದ ಬಂಡೆಯಷ್ಟು ಶಾಶ್ವತವೇ? ಒಂದೊಮ್ಮೆ ಬಂಡೆಯಾದರೂ ಬದಲಾದೀತು, ಗಂಡಿನ ಈ ನಡೆ– ನುಡಿ ಮಾತ್ರ ಬದಲಾಗದೇನೋ ಎನ್ನುವುದನ್ನು ಮಾತ್ರ ಇತ್ತೀಚಿನ ಪ್ರಕರಣಗಳು ಹೇಳುತ್ತಿಲ್ಲ, ಬದಲಾಗಬೇಕಾಗಿಲ್ಲ ಎನ್ನುವ ಗಂಡಿನ ಇರಾದೆಯನ್ನೇ ಇವು ಮರುಸ್ಥಾಪಿಸುತ್ತಿವೆ.

ಇತಿಹಾಸದಿಂದ ಎಳೆಗಳನ್ನು ಆಯ್ದು, ಹೆಣ್ಣಿನ ಇತಿಹಾಸದ, ಗೌರವದ, ಹೋರಾಟದ ಬಟ್ಟೆಯನ್ನು ನೇಯುತ್ತಿದ್ದೇವೆ ಎನ್ನುವ ಹೆಣ್ಣಿನ ನಂಬಿಕೆಯೇ ಹುಸಿ, ಹುಲು ಎನ್ನುವ ನಿರಾಸೆಗೆ, ಜುಗುಪ್ಸೆಗೆ ಇಂಥ ಪ್ರಕರಣಗಳು ನಮ್ಮನ್ನು ತಳ್ಳಿಬಿಡುತ್ತವೆ. ಬಿದ್ದ ವಿಶ್ವಾಸವನ್ನು ಮತ್ತೆ ಕೂಡಿಸಿಕೊಂಡು ನಮ್ಮ ಪ್ರಯತ್ನ ಮುಂದುವರಿಸುವುದು ನಮ್ಮ ಯಾವತ್ತಿನ ಪರಿಯೇ ಆಗಿಬಿಟ್ಟಿದೆ.

ಹೆಣ್ಣುಮಕ್ಕಳ ಏನೆಂಥ ಹೋರಾಟವನ್ನೂ ಈ ಗಂಡಾಳಿಕೆ ಅದೆಷ್ಟು ಸುಲಭವಾಗಿ, ನಾಚಿಕೆ ಎನ್ನುವುದರ ಧಾತುವೇ ಇಲ್ಲದಂತೆ ಹೊಸಕಿಹಾಕಿಬಿಡುತ್ತದೆ! ಕುಸ್ತಿಪಟುಗಳು ನಡೆಸಿದ ಅಸೀಮ ಹೋರಾಟವನ್ನೂ ತನ್ನ ಸೀಮೆಯ ಅಧಿಕಾರದಿಂದ ಬಗ್ಗಿಸಿಯೇ ಬಿಟ್ಟಿತಲ್ಲ, ಅದಕ್ಕೆ ಅಷ್ಟೇ ನಿರ್ಲಜ್ಜೆಯಿಂದ ಹೆಣ್ಣುಮಕ್ಕಳೂ ಕೈಜೋಡಿಸಿಬಿಟ್ಟದ್ದನ್ನು ನೋಡಿದ ಮೇಲಂತೂ ನಮ್ಮ ಅವಸ್ಥೆಗೆ ಯಾರನ್ನು ದೂರಬೇಕೆಂದೇ ತೋಚುವುದಿಲ್ಲ. ಪಿ.ಟಿ. ಉಷಾರಂಥ, ನಾವೆಲ್ಲರೂ ನಮ್ಮ ಎದೆಯ ಪದಕವೋ ಎಂಬಂತೆ ತಲೆಯ ಮೇಲೆ ಹೊತ್ತು ಮೆರೆದ ಹೆಣ್ಣುಮಗಳು ಆ ಕುಸ್ತಿಪಟುಗಳನ್ನೇ 'ಹೆಣ್ಣುಮಕ್ಕಳ ಮರ್ಯಾದೆ ಹರಾಜಿಗೆ ಹಾಕುತ್ತಿದ್ದಾರೆ' ಎಂದು ಹೇಳುವ ಮಟ್ಟಕ್ಕೆ ಹೋದರು (ಈಕೆಯನ್ನು ಕುರಿತ ಪುಸ್ತಕವೊಂದನ್ನು ನಾನು ಅನುವಾದ ಮಾಡಿದ್ದಕ್ಕಾಗಿ ನಾಚಿಕೆ ಮತ್ತು ವಿಷಾದವಾಗುತ್ತಿದೆ).

ಈಕೆಯನ್ನು ರೂಪಕವಾಗಿಸಿಕೊಂಡು 'ನಾವು ಹುಡುಗಿಯರೇ ಹೀಗೆ...' ಎಂದು ಪ್ರತಿಭಾ ನಂದಕುಮಾರ್ ಅವರು ಬರೆದ ಕವಿತೆ ಬಲು ಜನಪ್ರಿಯ. ತಾನೇ ಹೆಣೆದುಕೊಂಡ ತೆರಣಿಯ ಹುಳುವಿನ ಬಲೆಯಿಂದ ಹೊರಬರಲಾರದ ಹೆಣ್ಣಿನ ಮನಃಸ್ಥಿತಿಯನ್ನು ಹೇಳುವ ಈ ಕವಿತೆಯ ಇನ್ನೊಂದು ಆಯಾಮವನ್ನು ಉಷಾ ಅವರ ಈ ನಡೆ ಸೂಚಿಸುತ್ತಿದೆ. ಗಂಡಿನಲ್ಲಿ ಇರುವಷ್ಟೇ ದಂಡಿಯಾಗಿ ಹೆಣ್ಣಿನಲ್ಲೂ ಇರುವ ಸ್ವಾರ್ಥ, ದುರಾಸೆ, ಆತ್ಮವಂಚನೆ, ರಾಜಿ ಮನೋಭಾವ ಇಲ್ಲಿ ಕಾಣಿಸುತ್ತಿದೆ. ಆದರೆ, ಹೆಣ್ಣಾದ ಕಾರಣಕ್ಕೇ ಸ್ವತಃ ಎದುರಿಸಿದ ಸವಾಲುಗಳು, ಹಿಂಸೆಗಳನ್ನು ಮರೆಯುವುದು, ಪಕ್ಕಕ್ಕಿಡುವುದು ಅಷ್ಟು ಸುಲಭವಾಗಿಬಿಟ್ಟಿತೇ? ಅಲ್ಲಿಯತನಕ ಬಿಗಿಯಾಗಿದ್ದ ಕುಸ್ತಿಪಟುಗಳ ಹೋರಾಟ ನಿಧಾನವಾಗಿ ಸಡಿಲವಾಗಿದ್ದಕ್ಕೆ ಹೆಣ್ಣುಮಕ್ಕಳ ಇಂಥ ನಡೆ– ನುಡಿಗಳೂ ಕಾರಣ ಎನ್ನುವುದು ನಮಗೊಂದು ಕನ್ನಡಿಯಾಗಬೇಕು.

ಮದುವೆಯ ಆಚೆಗಿನ ಸಂಬಂಧಗಳ ಕುರಿತು ಮಹತ್ವದ ತೀರ್ಪು ಬಂದಾಗಲೂ ಅದನ್ನು ವಿರೋಧಿಸಿದ ಪ್ರಭಾವಶಾಲಿ ಹೆಣ್ಣುಮಕ್ಕಳ ಪ್ರತಿಕ್ರಿಯೆಗಳನ್ನೂ ನಾವು ಇದರೊಂದಿಗೆ ಇಟ್ಟುಕೊಳ್ಳಬೇಕು. ಚೌಕಟ್ಟಿನೊಳಗೆ ಇರುವುದರ ಅನುಕೂಲ ಮತ್ತು ಲಾಭಗಳನ್ನೇ ಯಾವಾಗಲೂ ಗುರಿಯಾಗಿ ಇಟ್ಟುಕೊಂಡರೆ, ಪಲ್ಲಟಗಳು ಎಂದು ನಾವು ತಿಳಿದುಕೊಂಡಿರುವ ಸಂಗತಿಗಳು ಬಲು ಬೇಗ ನೀರ ಮೇಲಿನ ಗುಳ್ಳೆಯಂತೆ ಕರಗಿ ನಮ್ಮನ್ನು ಇನ್ನೂ ಕಂಗಾಲುಗೊಳಿಸುವುದೇ ಸೈ.

ಮಣಿಪುರದಲ್ಲಿ ನಡೆಯುತ್ತಿರುವ ಹೆಣ್ಣುಗಳ ಮೇಲಿನ ಕ್ರೌರ್ಯವು ದಶಕದ ಹಿಂದೆ ಶರ್ಮಿಳಾ ಇರೋಮ್ ನಡೆಸಿದ ಐತಿಹಾಸಿಕ ಹೋರಾಟವನ್ನು ಅಣಕಿಸುವಂತೆ ಕಾಣಿಸುತ್ತಿದೆ. ಅಷ್ಟೇ ಅಲ್ಲ, ಹಗಲಿರುಳು ದುಡಿದರೂ, ಬಲುಕಾಲ ಕಳೆದರೂ ಹೆಣ್ಣನ್ನು ಹರಕೆಯ ಕುರಿಯಾಗಿಸುವ ಗಂಡಿನ ಪಶುತ್ವ ಬದಲಾಗುವುದಿಲ್ಲ ಎನ್ನುವುದನ್ನು ಹೇಳುತ್ತಿದೆ. ಗಂಡಿನ ಇಂತಹ ಪಶುತ್ವವನ್ನು ದುರ್ಬಲ ಪಶುತ್ವ ಎಂದೇ ಕರೆಯಬೇಕು. ಇನ್ನೊಂದು ಜೀವದ ಮೇಲೆ, ಅದರ ಒಪ್ಪಿಗೆ ಇಲ್ಲದೆ ನಡೆಸುವ ಆಕ್ರಮಣವು ಎಂದೂ 'ಶಕ್ತಿ' ಆಗಲಾರದು. ಗಂಡು ತನ್ನ ದೇಹ, ಮನಸ್ಸಿನ ಮೇಲೆ ಸಾಧಿಸಲಾಗದ ನಿಯಂತ್ರಣವನ್ನು 'ಪಶುತ್ವ' ಎಂದು ಮಾತ್ರ ಕರೆಯಬಹುದು. ಇದನ್ನು ತನ್ನ ಗೆಲುವಿನ ಪತಾಕೆಯಂತೆ, ಶಕ್ತಿ ಪ್ರದರ್ಶನದಂತೆ ತೋರಿಸುವ ಅನಾಗರಿಕತೆಯನ್ನು ನಿಯಂತ್ರಿಸುವ ಪ್ರಯತ್ನಗಳೆಲ್ಲ ಯಾಕೆ ಸೋಲುತ್ತಿವೆ?

ಇಷ್ಟೆಲ್ಲ ಆದಮೇಲೂ 'ಅವನು' ಮೀಸೆ ತಿರುವಿಕೊಂಡು ಮೆರೆಯುತ್ತಾನೆ, 'ಅವಳು' ಅಕಾರಣ ಪಾಪಪ್ರಜ್ಞೆಯಲ್ಲಿ ಮುದುಡಿ, ನರಳಿ ಸಾಯುತ್ತಾಳೆ. ನಾಯಕರು ಅವಳಿಗೆ 'ಪರಿಹಾರದ ಚೆಕ್' ಕೊಡುವ ಫೋಟೊ ಪತ್ರಿಕೆಯಲ್ಲಿ ಬರುತ್ತದೆ. ಅದರಲ್ಲೂ ಅವರು ಸಾಧಕರ ನಗೆಯನ್ನು ಬೀರುತ್ತಿರುತ್ತಾರೆ! ಎಸ್.ಮಾಲತಿ ಅವರ ಕವಿತೆಯೊಂದರ ನೆನಪಾಗುತ್ತದೆ, 'ಗಂಡಿಗೆ ಆತ್ಮವಿದೆಯೇ?'

ಈ ಪ್ರಶ್ನೆಯನ್ನು ತಿರುಗಿಸಿ ನಮಗೂ ಹಾಕಿಕೊಳ್ಳಬೇಕಾದ ತುರ್ತಿನಲ್ಲಿ ನಾವಿದ್ದೇವೆ. ನಮ್ಮ ಆತ್ಮಗಳನ್ನು ಎಚ್ಚರಿಸಿಕೊಂಡು ನಾವು ಅಖಂಡವಾಗಿ ಒಗ್ಗೂಡದ ವಿನಾ ನಮ್ಮ ಹೋರಾಟದಲ್ಲಿ ನಾವು ಗೆಲ್ಲುವುದಿರಲಿ, ಮುಂದುವರಿಯುವುದೂ ಕಷ್ಟ. ಹೆಣ್ಣುಮಕ್ಕಳ ಹೋರಾಟದ ಹಲವು ಮಾದರಿಗಳು, ಹಲವು ದಾರಿಗಳು ಸಂಗಮವಾಗುವುದು ಮಾತ್ರ ನಮ್ಮ ಹೋರಾಟದ ಹಾದಿಯನ್ನು ಬಲಪಡಿಸಬಲ್ಲದು. ಗಂಡಿನ ವಿಕಾರವನ್ನು ನಾವೂ ಕಾಣುತ್ತಲೇ ಅವರಿಗೂ ಕಾಣಿಸುತ್ತಿರುವ ನಮ್ಮ ಯತ್ನಗಳ ಹಿನ್ನಡೆಯನ್ನು ದಾಟಬೇಕಾದರೆ, ನಮ್ಮಲ್ಲಿರುವ ಅಸ್ಪಷ್ಟತೆಗಳನ್ನು, ಮಿತಿಗಳನ್ನು ನಾವು ದಾಟಿಕೊಳ್ಳಬೇಕು. ರಾಜಕೀಯದಲ್ಲಾಗಲೀ ನಮ್ಮ ಸಾಮಾಜಿಕ ಸಂಸ್ಥೆಗಳಲ್ಲಾಗಲೀ ಮೇಲ್ನೋಟಕ್ಕೆ ಎಲ್ಲವೂ ನಮ್ಮ ಪರವಾಗಿಯೇ ಇವೆ. ಆದರೂ ದಿನೇದಿನೇ ನಮ್ಮ ಸೋಲಿನ ಪ್ರಮಾಣವೂ ಹೆಚ್ಚಾಗುತ್ತಿದೆಯೆಂದರೆ, ಅದಕ್ಕೆ ನಮ್ಮಲ್ಲಿರುವ ಒಡಕುಗಳೂ ಕಾರಣ.

ಯಾವುದನ್ನು ಸಿಮೋನ್ ಬುವಾ 'ಸಂಘಟನೆಯ ಕೊರತೆ' ಎಂದು ಬಲು ಹಿಂದೆಯೇ ಕಂಡುಕೊಂಡು ನಮ್ಮನ್ನು ಎಚ್ಚರಿಸುವ ಪ್ರಯತ್ನ ಮಾಡಿದರೋ ಅದು ವಿರುದ್ಧ ಪರಿಣಾಮ ಬೀರಿತೇ ಎನ್ನುವ ಅನುಮಾನವೂ ಕೆಲವೊಮ್ಮೆ ನಮ್ಮನ್ನು ಕಾಡುತ್ತದೆ. ಅವಳ ಈ ಮಾತು ಗಂಡನ್ನೇ ಹೆಚ್ಚಾಗಿ ಎಚ್ಚರಿಸಿ, ಅವರು ತಮ್ಮ ಹತ್ಯಾರಗಳನ್ನು ಇನ್ನೂ ಚೂಪಾಗಿ ಮಸೆದಿಟ್ಟುಕೊಳ್ಳುವಂತೆ ಮಾಡಿಬಿಟ್ಟಿತೇನೋ ಎಂದು ಸಿನಿಕತನದ ಗಳಿಗೆಯಲ್ಲೇ ಇರಬಹುದು, ದಾರುಣ ಸತ್ಯದಂತೆ ನಮ್ಮೆದುರು ರಾಚುತ್ತದೆ.

ಹೆಣ್ಣುಕುಲದ ಒಗ್ಗಟ್ಟಿನ ಕೊರತೆಯೇ ಅವರಿಗೆ ಅನಾಯಾಸವಾಗಿ ಬೆಂಬಲದಂತೆ ಕೆಲಸ ಮಾಡುತ್ತಿದೆ. ಮಾತ್ರವಲ್ಲ, ಯಾವ 'ಸಹೋದರಿತ್ವ' (ಸಿಸ್ಟರ್‌ಹುಡ್) ತತ್ವವು ನಮ್ಮ ಮೂಲಮಂತ್ರವಾಗಿದ್ದರೆ, ಗಂಡಾಳಿಕೆಯ ಮೇಲೆ ಇನ್ನೂ ಹೆಚ್ಚಿನ ನೈತಿಕ ಹಕ್ಕೊತ್ತಾಯವನ್ನು ತರಬಹುದಿತ್ತೋ ಆ ನೈತಿಕ ಹಕ್ಕೊತ್ತಾಯವನ್ನು ಗಂಡಾಳಿಕೆ ಇನ್ನೂ ಎದುರಿಸುತ್ತಿಲ್ಲ, ಅವರ ವ್ಯಕ್ತಿತ್ವದ ಸಂವೇದನೆಯಲ್ಲಿ ಅದು ಇನ್ನೂ ಸೇರಿಲ್ಲ ಎನ್ನುವ ಕಟು ಸತ್ಯವನ್ನು ನಾವು ಅರ್ಥ ಮಾಡಿಕೊಳ್ಳಬೇಕು.

ಇದರ ಜೊತೆಗೇ ಕಾನೂನಿನ 'ಭಯ' ಇನ್ನೂ ಹೆಚ್ಚಾಗಬೇಕು, ಅದರ ಕುಣಿಕೆಗಳು ಮತ್ತೂ 'ಬಿಗಿ'ಯಾಗಬೇಕು. ಇದನ್ನು ಅಮಾನವೀಯ ಎಂದು ಯಾರೂ ತಿಳಿಯಬೇಕಾಗಿಲ್ಲ. ಗಂಡು ಮತ್ತು ಹೆಣ್ಣು ಇಬ್ಬರೂ ಸಮಾನ ಆದರೆ ಭಿನ್ನ ಎನ್ನುವ ಮೂಲ ಸತ್ಯ ಗಂಡಸರ ತಲೆಯಲ್ಲಿ ಮಾತ್ರವಲ್ಲ ಮನಸ್ಸಿನಲ್ಲೂ ಬೇರೂರುವ ತನಕ ಭಯವಾದರೂ ಅವರನ್ನು ಪಶುತ್ವದಿಂದ ಆಚೆಗೆ ತರಬೇಕು. ಚಾಪೆ ಮತ್ತು ರಂಗೋಲಿಯ ಕೆಳಗೆ ಅಪರಾಧಿಗಳು ಪಾರಾಗುವ ದಾರಿಗಳು ಬಂದ್ ಆಗಬೇಕು.

ಈ ಎಲ್ಲವುಗಳಷ್ಟೇ ಮುಖ್ಯವಾಗಿ ನಮ್ಮ ಶಿಕ್ಷಣವು 'ಲಿಂಗ ಸಂವೇದನೆ'ಯನ್ನು ಪಠ್ಯಗಳೊಳಗೆ, ಅದರಾಚೆಗೆ ಎಳವೆಯಿಂದಲೇ ಕಲಿಸುವುದನ್ನು ತನ್ನ ಮೂಲ ಆದ್ಯತೆಗಳಲ್ಲಿ ಒಂದಾಗಿಸಿಕೊಳ್ಳಬೇಕು. ಬಸವನು ಹೊಲಕ್ಕೆ ಹೋಗುವುದು, ಕಮಲಳು ತಾಯಿಗೆ ಅಡುಗೆ ಮನೆಯಲ್ಲಿ ಸಹಾಯ ಮಾಡುವುದೂ ಸಮ ಮಹತ್ವದ, ಶ್ರಮ ವಿಭಜನೆಯ ಸಂಗತಿಗಳು ಎನ್ನುವುದು ಬಾಲ್ಯದ ಹಸಿಮಣ್ಣಿನ ಬುದ್ಧಿ ಭಾವಗಳಲ್ಲಿ ಅಚ್ಚಳಿಯದೇ ಉಳಿದು ಅವರ ಆಲೋಚನಾ ಕ್ರಮವನ್ನು, ವ್ಯಕ್ತಿತ್ವವನ್ನು ರೂಪಿಸುವಂತೆ ಆಗಬೇಕು.

ಹಾಡಿದ್ದನ್ನೇ ಹಾಡುತ್ತಲೇ ಇರಬೇಕು, ಬಂಡೆಯಂಥ ಮನಸ್ಸುಗಳು ಬದಲಾಗುವವರೆಗೆ.



ಚುರುಮುರಿ



ಭೂತಬಾಧೆ

• ಲಿಂಗರಾಜು ಡಿ.ಎಸ್.

ಭೂತರಾಜ್ಯದ ಆತ್ಮಗಳೆಲ್ಲಾ ಭೂತಚೇಷ್ಟೆ ಬಿಟ್ಟು ಶಾಂತಿ, ಸಮಾಧಾನದಿಂದ ರೆಸ್ಟು ತಕ್ಕತಿದ್ದೋ. ಇಂತಹ ವಿರಾಜಕತೆಯನ್ನು ಕಂಡ ಮಹಾಮಂತ್ರಿಗಳು ರಾಜರಿಗೆ ರಿಕ್ವೆಸ್ಟು ಮಾಡಿದರು.

'ಮಾನ್ಯ ಭೂತರಾಜರೇ, ರಾಜಕಾರಣಿಗಳೇ ಜನರ ಹೆಗಲೇರಿ ಕುಚೇಷ್ಟೆ ಶುರು ಮಾಡಿದ ಮ್ಯಾಲೆ ಪೀಡೆ-ಪಿಶಾಚಿಗಳಿಗೆ ಕೆಲಸವಿಲ್ಲದೆ ರಾಜ್ಯದಲ್ಲಿ ಸ್ಮಶಾನ ಮೌನ ತುಂಬ್ಯದೆ. ಭೂತ-ಪ್ರೇತಗಳಿಗೆಲ್ಲಾ ನಿಶಾತೈಲ ಕೊಟ್ಟು ಸ್ಟಡಿ ಟೂರ್ ಕಳುಹಿಸಿ!' ಅಂದರು. ಭೂತರಾಜರ ಆದೇಶದಂತೆ ಭೂತಾತ್ಮಗಳು ಪ್ರವಾಸ ಕೈಗೊಂಡು ಎರಡೇ ದಿನಕ್ಕೆ ವಾಪಸಾದವು.

'ಇದ್ಯಾಕಿರ್ಲಾ, ಹೋದೋರು ಹೋದಂಗೇ ವಾಪಸ್ ಬಂದಿದ್ದೀರಿ?' ಅಂತ ಭೂತರಾಜರು ವಿಚಾರಿಸಿದರು.

'ಭೂತರಾಜರೇ, ಕರ್ನಾಟಕಕ್ಕೆ ಹೋಗಿದ್ದೋ. ಅಲ್ಲಿ ರಾಜಕಾರಣಿಗಳೇ ನಮ್ಮ ಕೆಲಸ ಮಾಡ್ತಾವರೆ. ವಿರೋಧಪಕ್ಷಕ್ಕೆ ನಾಯಕನೇ ಇಲ್ಲದೆ ಒಬ್ಬರನ್ನ ಗುತ್ತಿಗೆ ಮ್ಯಾಲೆ ನೇಮಕ ಮಾಡಿಕ್ಯಂಡೋರಂತೆ. ಕ್ಯಾಮೆ ಇಲ್ಲದ ರಾಜಕಾರಣಿಗಳು ಐಡಲ್ಲಾಗಿ ಮೈಂಡಿನ ಡೆವಿಲ್ಸ್ ವರ್ಕ್‌ಶಾಪಿನಲ್ಲಿ ಗೊಣ್ಣೆ ಸುರಿಸಿಗ್ಯಂಡು ಕಿತಾಪತಿ ಮಾಡ್ತಾವರೆ' ಅಂದರು ಸದಸ್ಯರು.

'ಗೊಣ್ಣೆವರಸೆ ಮಾಡ್ತಿರೋರ್ನೆಲ್ಲಾ ತಕ್ಕೋಗಿ ಜೈಲಿಗಾಕದಲ್ವಾ!' ಅಂದ್ರು ಭೂತರಾಜರು.

'ಮಹಾಸ್ವಾಮಿ, ಜೈಲು ಈಗ ರೆಸಾರ್ಟ್, ಟ್ರೈನಿಂಗ್ ಸೆಂಟರು ಆಗೋಗ್ಯದೆ. ಇಲ್ಲಿ ಕಾಸು ಕೊಟ್ರೋರಿಗೆ, ಉಗ್ರಗಾಮಿಗಳಿಗೂ ರಾಜೋಪಚಾರ ನಡೀತಾದೆ. ಯಾರಿಗೂ ಜೈಲು ಅಂದ್ರೆ ಭಯ ಭಕ್ತಿ ಇಲ್ಲ. ಮಣಿಪುರದಲ್ಲಂತೂ ದುಷ್ಟರೇ ಭೂತಗಳನ್ನ ತಲೆ ಒಳಗಿಟ್ಕೊಂಡು ಕೂತವ್ರೆ' ಅಂದ್ರು.

'ಸರ್ಕಾರ ಏನು ಕಡಿದು ಕಟ್ಟೆ ಹಾಕ್ತಾ ಅದೆ?' ಭೂತರಾಜರು ಕೇಳಿದರು.

'ಮಹಾಸ್ವಾಮಿ, ಸರ್ಕಾರ ತೆರಿಗೆಗಳನ್ನ ಏರಿಸಿಗ್ಯಂಡು ಜನರ ಬಾಯಿಗೆ ಕುಕ್ಕೆ ಹಾಕದ್ರಲ್ಲೇ ಬಿಜಿ ಅದೆ' ಸದಸ್ಯರು ಹೇಳಿದರು.

'ಅಲ್ಲ ಕನ್ರಯ್ಯಾ, ದೇಸದ ನಾಯಕರು ಏನು ಮಾಡ್ತಾವ್ರೆ?' ಭೂತರಾಜರ ಮಾತಿಗೆ 'ಸ್ವಾಮಿ, ಅವರು ವಿದೇಶ ಸುತ್ತದ್ರಲ್ಲೇ ಬಿಜಿ ಇದ್ರಲ್ಲ! ನೆನ್ನೆ ಬಂದೋರು ಬಲು ನೋವಾಗ್ಯದೆ ಅಂದವ್ರೆ!' ಭೂತರಾಜರು ಭೂತಬಾಧೆಯ ಕತೆ ಕೇಳಿ ತಲೆ ಮೇಲೆ ಕೈ ಹೊತ್ತು ಕೂತರು.

ಸಂಗತ

'ಲಿಂಕ್' ಲೋಪ: ನಿವಾರಣೆ ಎಂದು?

ಸೈಬರ್ ಕೇಂದ್ರಗಳ ಮುಂದೆ ಫಲಾನುಭವಿಗಳು ಕಾಯುವ ಬದಲು ಸೈಬರ್ ಸೇವೆಯೇ ಜನರ ಮನೆ ಬಾಗಿಲಿಗೆ ಬರುವಂತೆ ಸರ್ಕಾರ ಮಾಡಬೇಕಾಗಿದೆ

• ಪ. ರಾಮಕೃಷ್ಣ ಶಾಸ್ತ್ರಿ

ವಿಧಾನಸೌಧದಲ್ಲಿ ಕುಳಿತವರು ಒಂದು ಸಲ ಹಳ್ಳಿಗಳಿಗೆ ಹೋಗಿ ನೋಡುವುದು ಒಳ್ಳೆಯದು. ಅಲ್ಲಿ ವೃದ್ಧರನ್ನು, ದೀನ ದುರ್ಬಲರನ್ನು ಕಾಡುತ್ತಿದೆ 'ಲಿಂಕ್' ಎಂಬ ಸಮಸ್ಯೆ. ಅನಕ್ಷರಸ್ಥರು, ಕಚೇರಿಗಳಿಂದ ದೂರದ ಬೆಂಗಾಡಿನಲ್ಲಿ ನೆಲೆಸಿದವರು ನೆಲೆಗಾಣದ ಇದರ ಪರಿಹಾರಕ್ಕೆ ನಿತ್ಯವೂ ಒದ್ದಾಡುವಂತಾಗಿದೆ.

ಇದೇನೂ ಸಾಂಕ್ರಾಮಿಕ ರೋಗವಲ್ಲ, ಯಾವುದೋ ದೇಶದಿಂದ ಬಂದ ಪ್ರಳಯಕಾರಿ ವೈರಸ್ ಅಲ್ಲವೇ ಅಲ್ಲ. ಸರ್ಕಾರದ ಶೋಷಣೆಯ ಒಂದು ಮುಖವಾಗಿ ಗ್ರಾಮೀಣ ಜನರನ್ನು ಬಾಧಿಸುತ್ತಿರುವ ಆಧಾರ್ ಚೀಟಿಯ ಜೋಡಣೆ ಸಮಸ್ಯೆ. ನಿಮ್ಮ ಫೋನ್ ನಂಬರ್ ಜೋಡಿಸಿ, ಪ್ಯಾನ್‌ಕಾರ್ಡ್ ಜೋಡಿಸಿ, ಇದೆರಡನ್ನೂ ಬ್ಯಾಂಕ್ ಖಾತೆಗೆ ಜೋಡಿಸಿ, ಪಹಣಿ ಪತ್ರಕ್ಕೆ ಜೋಡಿಸಿ... ಹೀಗೆ ಪ್ರತಿದಿನ ಒಂದೊಂದಾಗಿ ಸಮಸ್ಯೆಗಳು ಹುಡುಕಿಕೊಂಡು ಬರುತ್ತಿವೆ. ಪ್ಯಾನ್‌ಕಾರ್ಡ್ ಮತ್ತು ಆಧಾರ್ ಜೋಡಣೆ ಮಾಡದವರಿಗೆ ಯಾವುದೇ ಸರ್ಕಾರಿ ಸೌಲಭ್ಯವೂ ಸಿಗುವುದಿಲ್ಲ, ಹತ್ತು ಸಾವಿರ ರೂಪಾಯಿ ದಂಡ ವಿಧಿಸುತ್ತೇವೆ ಎನ್ನುವ ಎಚ್ಚರಿಕೆ.


ಗುರುತಿನ ಚೀಟಿಯ ಬಳಕೆ ಅನುಚಿತವಲ್ಲ. ಆದರೆ ಅದನ್ನು ಮಾಡಿಕೊಡುವಾಗಲೇ ದೂರವಾಣಿ ಸಂಖ್ಯೆಯನ್ನೂ ಕಡ್ಡಾಯವಾಗಿ ಸೇರಿಸಿಕೊಳ್ಳಬೇಕಿತ್ತಲ್ಲವೆ? ಈಗ ಹತ್ತು ಸಲ ಬ್ಯಾಂಕಿಗೆ ಹೋಗಿ ಗುರುತಿನ ಪತ್ರದ ನೆರಳಚ್ಚು ಪ್ರತಿ ಕೊಟ್ಟುಬಂದವರಿಗೂ ಅಂಚೆ ಕಚೇರಿಗೆ ಹೋಗಿ ತಮ್ಮ ಬ್ಯಾಂಕ್ ಖಾತೆಯಿಂದ ಹಣ ತೆಗೆಯಲು ಯತ್ನಿಸಿದರೆ ನಿರಾಕರಣೆ. 'ನಿಮ್ಮ ಬ್ಯಾಂಕ್ ಖಾತೆಗೆ ಆಧಾರ್ ನಂಬರ್ ಲಿಂಕ್ ಆಗಿಲ್ಲ' ಎಂಬ ಸೂಚನೆ.

ತೀರಾ ಬಡವರಿಗೆ ಮಾತ್ರ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ ಸರ್ಕಾರದಿಂದ ಬರುತ್ತದೆ. ವಾರ್ಷಿಕ ₹ 1.20 ಲಕ್ಷಕ್ಕಿಂತ ಹೆಚ್ಚು ಆದಾಯ ಇರುವವರಿಗೆ ಈ ಹಣ ಸಿಗುವುದಿಲ್ಲ. ನಮ್ಮಲ್ಲಿ ಹಿರಿಯ ನಾಗರಿಕರಿಗೆ ಏಳು ಲಕ್ಷದ ತನಕ ಆದಾಯ ತೆರಿಗೆ ವಿನಾಯಿತಿ ಇದೆ. ಆದರೂ ಅವರು ಪ್ಯಾನ್‌ಕಾರ್ಡ್ ಮಾಡಿಸದಿದ್ದರೆ ಅವರಿಗೆ ಇಂತಹ ಸೌಲಭ್ಯಗಳು ಸಿಗುವುದಿಲ್ಲ. ಹಳ್ಳಿಯ ವೃದ್ಧರಲ್ಲಿ ಅನಕ್ಷರಸ್ಥರ ಪ್ರಮಾಣ ಹೆಚ್ಚು. ಇದನ್ನೆಲ್ಲ ಎಲ್ಲಿ ಮಾಡಿಸಬೇಕೆಂದು ಅವರಿಗೆ ಗೊತ್ತಿಲ್ಲ. ಸೈಬರ್ ಕೇಂದ್ರಗಳಲ್ಲಿ ಅವರಿಂದ ದುಬಾರಿ ಶುಲ್ಕ ಕೀಳಲಾಗುತ್ತದೆ.

ಇಂತಹ ಲಿಂಕ್ ಕಡ್ಡಾಯವಾದಾಗ ಸರ್ಕಾರವು ಗ್ರಾಮದಲ್ಲಿ ಒಂದೆರಡು ಕಡೆಯಲ್ಲಾದರೂ ಉಚಿತವಾಗಿ ಸೇವೆ ಸಲ್ಲಿಸುವ ಕೇಂದ್ರಗಳನ್ನು ತೆರೆಯಬೇಕು. ಕಡ್ಡಾಯ ಮಾಡುವ ಮೊದಲು ಅಂತರ್ಜಾಲದ ಪೂರೈಕೆ ಸಮರ್ಪಕವಾಗಿದೆಯೇ ಎಂದು ಪರಿಶೀಲಿಸಬೇಕು. ಯಾಕೆಂದರೆ ಎಲ್ಲ ಕೇಂದ್ರಗಳಲ್ಲೂ ಇಂತಹ ಲಿಂಕ್ ಮಾಡಿಸಲು ಮೈಲುದ್ದದ ಸಾಲಿರುತ್ತದೆ. 'ಸರ್ವರ್ ಎರರ್' ಎಂಬ ದಾರುಣ ಸಮಸ್ಯೆಯ ಫಲವಾಗಿ ಸಂಜೆಯತನಕ ನಿಂತರೂ ಲಿಂಕ್ ಆಗದೆ ಜನ ನಿರಾಶರಾಗಿ ಮರಳುವಂತಾಗಿದೆ.

ಕಾಂಗ್ರೆಸ್ ಘೋಷಿಸಿದ ಪಂಚಭಾಗ್ಯಗಳನ್ನು ಪಡೆಯುವವರಿಗೂ ಇದೇ ಬೃಹತ್ ಸಮಸ್ಯೆಯಾಗಿದೆ. ದೂರವಾಣಿ ಸಂಖ್ಯೆ ಗುರುತಿನ ಚೀಟಿಗೆ ಲಿಂಕ್ ಆಗದವರ ಖಾತೆಗೆ ಅನ್ನಭಾಗ್ಯದ ಹಣ ಬರುವುದಿಲ್ಲ. ಗೃಹಲಕ್ಷ್ಮಿ ಒಲಿಯುವುದಿಲ್ಲ. ಫಲಾನುಭವಿಗಳಿಗೆ ದೊರಕುವ ಪ್ರಯೋಜನ ಪಾರದರ್ಶಕವಾಗಿ ಇರಬೇಕು, ಮೋಸವಾಗಬಾರದು ಎಂಬ ಕಾರಣಕ್ಕೆ ಇಂತಹ ಕ್ರಮಗಳನ್ನು ಕೈಗೊಳ್ಳುವುದು ಪ್ರಶ್ನಾತೀತವೇ ಆಗಿದ್ದರೂ ಹತ್ತಾರು ಚೀಟಿಗಳನ್ನು ಮಾಡಿಸುವುದರಲ್ಲೇ ಅಶಕ್ತ ಜನರ ಬದುಕು ಹೈರಾಣಾಗುವಂತೆ ಮಾಡುವುದು ಮಾತ್ರ ಕ್ಷಮಾರ್ಹವಲ್ಲ. ಎಲ್ಲವನ್ನೂ ಒಳಗೊಂಡ ಒಂದೇ ಒಂದು ಚೀಟಿ ದೊರಕುತ್ತಿದ್ದರೆ ಈ ದೇಶದ ಜನ ಧನ್ಯರಾಗುತ್ತಿದ್ದರು.

ಹಳ್ಳಿಯ ಜನರ ದೈನಂದಿನ ಜೀವನದಲ್ಲಿ ದಿನವಿಡೀ ಲಿಂಕ್ ಮಾಡಿಸಲು ತಿರುಗಾಡುವ ಅವಕಾಶವಿಲ್ಲ. ಅವರಿಗೆ ಬದುಕಿನ ಅನಿವಾರ್ಯಗಳಿವೆ. ಮಳೆಗಾಲದಲ್ಲಿ ಪಟ್ಟಣದ ಕಡೆಗೆ ಬರಲು ಸಾರಿಗೆ ವ್ಯವಸ್ಥೆಯಿಲ್ಲ. ಹಳ್ಳ, ಕೊಳ್ಳಗಳನ್ನು ದಾಟಲು ಸೇತುವೆ, ರಸ್ತೆಗಳಿಲ್ಲದ ಹಳ್ಳಿಗಳು ಇನ್ನೂ ಉಳಿದುಕೊಂಡಿವೆ. ಭಾಗ್ಯದ ಹೆಸರಿನಲ್ಲಿ ಕೊಡುವ ಹಣ ಅವರ ಪಾಲಿಗೆ ಅಲೆದಾಟದ ತೊಡಕು ತಂದೊಡ್ಡುತ್ತಿದೆ.



ಸೈಬರ್ ಕೇಂದ್ರಗಳ ಮುಂದೆ ಫಲಾನುಭವಿಗಳು ಕಾಯುವ ಬದಲು ಸೈಬರ್ ಸೇವೆಯೇ ಜನರ ಮನೆ ಬಾಗಿಲಿಗೆ ಬರುವಂತೆ ಸರ್ಕಾರ ಮಾಡಬೇಕಾಗಿದೆ. ಇದರಿಂದ ವಿದ್ಯಾವಂತ ನಿರುದ್ಯೋಗಿ ಯುವಜನರಿಗೆ ಅನುಕೂಲವೂ ಆಗುತ್ತದೆ. ದಿನವಿಡೀ ಕಾದು ನಿಂತರೂ ಕೆಲಸವಾಗದೇ ಹೋಗುತ್ತದೆ, ಹತ್ತಾರು ಮೈಲು ದೂರದಿಂದ ಬಂದಿದ್ದಾಗ, ಮರಳಿ ನಾಳೆಯೂ ಬರಬೇಕು ಎಂದಾಗ ಜನ ಆಕ್ರೋಶ ವ್ಯಕ್ತಪಡಿಸುತ್ತಾರೆ.

ಡಿಜಿಟಲ್ ಯುಗದಲ್ಲಿ ಮಹಾಕ್ರಾಂತಿಯೇ ಆಗಿದೆ. 5ಜಿ ತರಂಗಾಂತರ ನೀಡುವ ಮೂಲಕ ಚೀನಾಕ್ಕೆ ಸಡ್ಡು ಹೊಡೆಯುತ್ತಿದ್ದೇವೆ ಎಂದು ದೇಶನಾಯಕರು ಬೀಗುತ್ತಿದ್ದಾರೆ. ಇಂಥವರು ಒಂದು ಸಲ ಭಾರತದ ಸಾವಿರಾರು ಹಳ್ಳಿಗಳಿಗೆ ಹೋಗಬೇಕು. ಮೊಬೈಲ್ ಟವರ್ ಕೆಳಗೆ ನಿಂತರೂ ಸಿಗ್ನಲ್ ಸಿಗದ ವಿಪರ್ಯಾಸವನ್ನು ಪರೀಕ್ಷಿಸಬೇಕು. ಆಗ ಆ ಲಿಂಕ್ ಈ ಲಿಂಕ್ ಎಂದು ತಾವು ಕೊಡುವ ಪುಡಿಗಾಸಿನ ನೆರವಿಗಾಗಿ ಜನರನ್ನು ಕಾಡುವ ಮನಃಸ್ಥಿತಿಯಲ್ಲಿ ಬದಲಾವಣೆ ಮಾಡಿಕೊಳ್ಳಬಹುದು. ಜೊತೆಗೆ, ಜನರ ಜವಾಬ್ದಾರಿಗಿಂತಲೂ ತಮ್ಮ ಕರ್ತವ್ಯಲೋಪದ ಪಾಲು ದೊಡ್ಡದಿದೆ ಎಂಬುದನ್ನು ಅರಿತುಕೊಂಡು, ಲಿಂಕ್ ಎಂಬ ವಜ್ರಮುಷ್ಟಿಯಿಂದ ಜನಸಾಮಾನ್ಯರಿಗೆ ಬಿಡುಗಡೆಯ ಭಾಗ್ಯ ಕಲ್ಪಿಸಬಹುದೇನೊ!

ವಾಚಕರ ವಾಣಿ

ಶಾಲಾ ಕಟ್ಟಡ: ಸುಸ್ಥಿತಿಯ ಪರಿಶೀಲನೆಯಾಗಲಿ

ಸರ್ಕಾರಿ ಶಾಲೆಗಳ ಎಷ್ಟೋ ಕಟ್ಟಡಗಳು ಸುಸ್ಥಿತಿಯಲ್ಲಿ ಇರುವುದಿಲ್ಲ. ಮಕ್ಕಳ ಜೀವಕ್ಕೆ ಅಪಾಯ ತರುವಂತೆ ಇರುತ್ತವೆ. ಸರ್ಕಾರವು ರಾಜ್ಯದ ಎಲ್ಲಾ ಶಾಲಾ ಕಟ್ಟಡಗಳ ಸುಸ್ಥಿತಿಯ ಬಗ್ಗೆ ಎಂಜಿನಿಯರ್‌ಗಳಿಂದ ಪರಿಶೀಲನೆ ನಡೆಸಿ, ಮಾಹಿತಿ ಪಡೆದು, ಅವುಗಳ ದುರಸ್ತಿ ಅಥವಾ ಪುನರ್‌ನಿರ್ಮಾಣ ಮಾಡುವುದು ಒಳ್ಳೆಯದು. ಈ ದಿಸೆಯಲ್ಲಿ ಸರ್ಕಾರ ಸೂಕ್ತ ಕ್ರಮ ವಹಿಸಬೇಕು. ಈಗ ಮಳೆಗಾಲ. ಹೆಚ್ಚು ಮಳೆಯಾಗುವ ಸಂದರ್ಭದಲ್ಲಿ ಅಂಥ ಊರುಗಳ ಶಾಲೆಗಳಿಗೆ ಮಕ್ಕಳ ಸುರಕ್ಷತೆ ದೃಷ್ಟಿಯಿಂದ ರಜೆ ನೀಡುವುದು ಒಳ್ಳೆಯದು.

ಸಿದ್ಧೇಶ್ ಎ.ಸಿ., ಹಿರೇಕೆರೂರು

ಹೋಟೆಲ್ ತಿನಿಸಿನ ದರ ಹೆಚ್ಚಳ ಸಲ್ಲ

'ವಿದ್ಯುತ್ ದರ ಸೇರಿ ದಿನಬಳಕೆ ವಸ್ತುಗಳ ಬೆಲೆ ಹೆಚ್ಚಳವಾಗಿದ್ದು, ಹೋಟೆಲ್‌ಗಳಲ್ಲಿನ ತಿಂಡಿ ತಿನಿಸಿನ ಬೆಲೆಯಲ್ಲಿ ಆಗಸ್ಟ್ ಒಂದರಿಂದ ಶೇಕಡ 10ರಷ್ಟು ಹೆಚ್ಚಿಸುವುದು ಅನಿವಾರ್ಯವಾಗಲಿದೆ' ಎಂಬ ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್ ಅವರ ಮಾತು ಒಪ್ಪತಕ್ಕದ್ದೇ. ಆದರೆ, ದಿನನಿತ್ಯ ಹೋಟೆಲ್ ಆಹಾರವನ್ನೇ ನೆಚ್ಚಿ ಬದುಕುತ್ತಿರುವ ಅನೇಕರು ಇದ್ದಾರೆ. ಈಗಾಗಲೇ ತಿಂಡಿ ತಿನಿಸಿನ ಬೆಲೆ ಕೊಳ್ಳಲಾಗದಂತೆ ಆಗಿದೆ. ಇಂದಲ್ಲ ನಾಳೆ ತರಕಾರಿ, ಧಾನ್ಯಗಳ ಬೆಲೆ ಇಳಿಯುತ್ತದೆ. ಆದರೆ ಒಮ್ಮೆ ಏರಿಸಿದ ಆಹಾರದ ಬೆಲೆ ಇಳಿಯದು ಅಥವಾ ಇಳಿಸಲಾರರು. ಹಾಗಾಗಿ ಯಥಾಸ್ಥಿತಿಯ ದರವನ್ನು ಮುಂದುವರಿಸಲಿ.

ಎಲ್ಲ ಪದಾರ್ಥಗಳ ಬೆಲೆ ಏರಿಕೆಯನ್ನು ನಿಯಂತ್ರಣದಲ್ಲಿಟ್ಟು ಜನರ ಬದುಕನ್ನು ಹಸನುಗೊಳಿಸಬೇಕಾದ ಸರ್ಕಾರವೇ ಮುಂದಾಗಿ ವಿದ್ಯುತ್, ಹಾಲು, ಮದ್ಯದಂತಹವುಗಳ ಬೆಲೆ ಏರಿಕೆ ಮಾಡಿರುವುದು ದುರಂತ. ವಿದ್ಯುತ್‌ನಂತಹ ಮೂಲ ವಸ್ತುವಿನ ಬೆಲೆ ಏರಿಸಿದರೆ ಅದರ ಹಿಂದೆಯೇ ಎಲ್ಲದರ ಬೆಲೆಗಳೂ ಏರುತ್ತವೆ ಎಂಬುದು ಸರ್ಕಾರಕ್ಕೆ ತಿಳಿದಿರಬೇಕಿತ್ತು. ಆದರೆ, ಸರ್ಕಾರಕ್ಕೆ ಜಾಣಕಿವುಡು. ಅದು ಈಗಲಾದರೂ ಎಚ್ಚೆತ್ತು ಬೆಲೆಗಳನ್ನು ಇಳಿಸುವ ಪ್ರಯತ್ನ ಮಾಡಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಬಸ್ ನವೀಕರಣ: ಮಾದರಿ ಕಾರ್ಯ

505 ಹಳೆಬಸ್ಸುಗಳನ್ನು ನವೀಕರಿಸಲು ಕ್ರಮ ಕೈಗೊಂಡಿರುವ (ಪ್ರ.ವಾ., ಜುಲೈ 24) ಕೆಎಸ್‌ಆರ್‌ಟಿಸಿಯ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಪ್ರಶಂಸಾರ್ಹರು. ಸರ್ಕಾರದ ಹಣವನ್ನು ವ್ಯರ್ಥವಾಗಿ ಖರ್ಚು ಮಾಡುವುದು ಇದರಿಂದ ತಪ್ಪಿದಂತಾಗಿದೆ. 500 ಹೊಸ ಬಸ್ಸುಗಳ ಖರೀದಿಗೆ ಅಗತ್ಯವಾದ ₹ 200 ಕೋಟಿಯನ್ನು ಸಾಲವಾಗಿ ಪಡೆದಿದ್ದರೆ ಅದರ ಬಡ್ಡಿಯೇ ₹ 18 ಕೋಟಿ ಆಗುತ್ತಿತ್ತು ಎಂದು ವರದಿಯಾಗಿದೆ. ಈಗ ಬಸ್‌ಗಳನ್ನು ನವೀಕರಿಸಿರುವುದರ ವೆಚ್ಚ ಬರೀ ₹ 15 ಕೋಟಿ ಆಗಿರುವುದು ಉತ್ತಮ ಬೆಳವಣಿಗೆಯಾಗಿದೆ. ಜೊತೆಗೆ ಇತರ ಇಲಾಖೆಗಳಿಗೂ ಈ ಕಾರ್ಯ ಮಾದರಿಯಾಗಿದೆ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಸಾಹಿತ್ಯ ಜಾತ್ರೆ: ವೃಥಾ ಖರ್ಚಿಗಿರಲಿ ಕಡಿವಾಣ

ಹಾವೇರಿಯಲ್ಲಿ ನಡೆದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ವೆಚ್ಚವಾಗಿರುವ ಹೆಚ್ಚುವರಿ ₹ 5 ಕೋಟಿ ನೀಡಬೇಕೆಂಬ ಪ್ರಸ್ತಾವವನ್ನು ಸರ್ಕಾರ ತಿರಸ್ಕರಿಸಿರುವ ವರದಿ (ಪ್ರ.ವಾ., ಜುಲೈ 24) ಓದಿ ಅಚ್ಚರಿಯೇನೂ ಆಗಲಿಲ್ಲ. ಸಮಗ್ರ ಕನ್ನಡಿಗರ ಹೆಮ್ಮೆಯ, ಪ್ರಾತಿನಿಧಿಕ ಸಂಸ್ಥೆಯಾದ ನಮ್ಮ ಕನ್ನಡ ಸಾಹಿತ್ಯ ಪರಿಷತ್ತು ವರ್ಷಕ್ಕೊಮ್ಮೆ ನಡೆಸುವ ಇಂಥ ಸಾಹಿತ್ಯ ಜಾತ್ರೆಗೆ ಇತ್ತೀಚಿನ ದಿನಗಳಲ್ಲಿ ಧಾರಾಳವಾಗಿ ಖರ್ಚು ಮಾಡುತ್ತಿದೆ. ಈ ಮೂಲಕ ಸಾರ್ವಜನಿಕರ ತೆರಿಗೆಯ ಹಣ ದುರ್ವಿನಿಯೋಗವಾಗದಂತೆ ನಿಗಾ ವಹಿಸಬೇಕಾದದ್ದು ಸರ್ಕಾರದ ಕರ್ತವ್ಯವಾಗಿದೆ.

ಬೆಂಗಳೂರಿನಲ್ಲಿನ ಪರಿಷತ್ತಿನ ಕೇಂದ್ರ ಕಚೇರಿಯಲ್ಲಿ ಒಂದು ತಿಂಗಳ ಮೊದಲೇ ಸಮ್ಮೇಳನ ಶುಲ್ಕ ಕಟ್ಟಿ, ಸದರಿ ಸಮ್ಮೇಳನದಲ್ಲಿ ಪಾಲ್ಗೊಂಡ ಅನುಭವದಿಂದ ಇದನ್ನು ಹೇಳುತ್ತಿದ್ದೇನೆ. 'ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ' ಎಂಬಂತೆ ಆಗಬಾರದಲ್ಲವೇ?

ಈರಪ್ಪ ಎಂ. ಕಂಬಳಿ, ಬೆಂಗಳೂರು

ಧನಾರ್ಜನೆಯ ಮೋಹದಲ್ಲಿ ಬಿದ್ದಾಗ...

'ವಿದ್ಯಾರ್ಥಿಗಳ ಚಿತ್ತ ವಿದೇಶಿ ವಿ.ವಿ.ಯತ್ತ' ಎಂಬ ಡಾ. ಎಚ್.ಆರ್.ಕೃಷ್ಣಮೂರ್ತಿ ಅವರ ಲೇಖನ (ಪ್ರ.ವಾ., ಜುಲೈ 24) ಗೊತ್ತಿಲ್ಲದ ಅನೇಕ ವಿವರಗಳನ್ನು ನಮ್ಮ ಮುಂದೆ ಇರಿಸಿದೆ. ಅಂತೆಯೇ ಸ್ವಾಭಿಮಾನವನ್ನೂ ಕೆರಳಿಸುತ್ತದೆ. ಹಲವು ದಶಕಗಳಿಂದ ವಿದೇಶಗಳಿಗೆ ವಿದ್ಯಾರ್ಜನೆಗೆಂದು ದಾಂಗುಡಿ ಇಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದೆ. ಇದಕ್ಕೆ ಕಾರಣಗಳು ಹಲವಾರು. ವಿದ್ಯಾರ್ಜನೆಗೆಂದು ವಿದೇಶಕ್ಕೆ ಹೋದವರು ಧನಾರ್ಜನೆಯ ಮೋಹದಲ್ಲಿ ಬಿದ್ದು, ವಿದೇಶಗಳಿಗೆ ಮತ್ತು ವಿದೇಶಿ ಸಂಸ್ಥೆಗಳಿಗೆ ಅಹರ್ನಿಶಿ ದುಡಿದು, ಅಲ್ಲಿನ ಸಾಮಾಜಿಕ, ಔದ್ಯಮಿಕ, ಆರ್ಥಿಕ ಬೆಳವಣಿಗೆಗೆ ಕಾರಣರಾಗುತ್ತಿದ್ದಾರೆ. ಇದರಿಂದ, ಇತ್ತ ಹೆತ್ತವರನ್ನೂ ಅತ್ತ ತಾಯ್ನಾಡನ್ನೂ ಮರೆಯಬೇಕಾದ ಸ್ಥಿತಿ. ವಿದೇಶದಲ್ಲಿ ವಿದ್ಯಾರ್ಜನೆ ಮಾಡಿ ಮರಳಿ ಬಂದು ತಾಯ್ನಾಡಿನ ಬೆಳವಣಿಗೆಗೆ ನೆರವಾಗುವಂತಹ ಮನೋಭಾವ ರೂಢಿಸಿಕೊಳ್ಳಬೇಕು.

ಈ ಮೂಲಕ ಇಲ್ಲಿನ ಸಾಮಾಜಿಕ, ಔದ್ಯಮಿಕ, ಆರ್ಥಿಕ ಸ್ಥಿತಿಗತಿಯ ವೃದ್ಧಿಗೆ ಕೈಜೋಡಿಸಬೇಕು. ಜೊತೆಗೆ, ತಮ್ಮನ್ನು ಈ ಮಟ್ಟಕ್ಕೆ ತಂದ ಪೋಷಕರನ್ನು ಇಳಿವಯಸ್ಸಿನಲ್ಲಿ ನೋಡಿಕೊಳ್ಳುವುದೂ ಒಂದು ಸ್ವಾಭಿಮಾನಯುಕ್ತ ಜವಾಬ್ದಾರಿಯಲ್ಲವೇ? ಆ ವೃದ್ಧರ ಸುಖಬಾಳ್ವೆಗೆ ಬೇಕಾದ ಹಣವನ್ನು ಕಳಿಸುತ್ತಿದ್ದೇವೆಂಬ ಸಬೂಬು ಹೇಳುವುದು ಸರಿಯಲ್ಲ.

ರಮೇಶ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಏಕರೂಪ ನಾಗರಿಕ ಸಂಹಿತೆಯು ಯಾರನ್ನು ಹೆಚ್ಚು ಬಾಧಿಸುತ್ತದೆ ಎಂಬುದರ ಬಗ್ಗೆಯೂ ಸಂವಿಧಾನ ರಚನಾ ಸಭೆಯಲ್ಲಿ ದೀರ್ಘವಾದ ಚರ್ಚೆ ನಡೆದಿದೆ. ಧಾರ್ಮಿಕ ಅಲ್ಪಸಂಖ್ಯಾತರಾದ ಮುಸ್ಲಿಮರನ್ನು ಮಾತ್ರ ಇವು ಬಾಧಿಸುವುದಲ್ಲ. ಹಿಂದೂಗಳನ್ನೂ ಇದು ಬಾಧಿಸುತ್ತದೆ. ಏಕರೂಪ ನಾಗರಿಕ ಸಂಹಿತೆಯ ಕಾರಣಕ್ಕೆ ಹಿಂದೂಗಳು ಅನುಸರಿಸುತ್ತಿರುವ ವೈಯಕ್ತಿಕ ಕಾನೂನುಗಳನ್ನೂ ರದ್ದುಪಡಿಸಬೇಕಾಗುತ್ತದೆ ಎಂಬ ಅಭಿಪ್ರಾಯ 1948ರ ನವೆಂಬರ್ 23ರಂದು ನಡೆದ ಚರ್ಚೆಯಲ್ಲಿ ವ್ಯಕ್ತವಾಗಿದೆ. ಏಕರೂಪ ನಾಗರಿಕ ಸಂಹಿತೆಯನ್ನು ವಿರೋಧಿಸುವವರು ಮತ್ತು ಆ ಸಂಹಿತೆ ಬೇಕು ಎನ್ನುವವರೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಜತೆಗೆ ಬಹುತ್ವವನ್ನು ಉಳಿಸಿಕೊಳ್ಳಬೇಕು ಎಂದೂ ಹಲವು ಸದಸ್ಯರು ಒತ್ತಾಯಿಸಿದ್ದರು

ಏಕರೂಪ ನಾಗರಿಕ ಸಂಹಿತೆ ಚರ್ಚೆ

ಏಕರೂಪ ಎಲ್ಲರಿಗೂ ಅನ್ವಯ

ಸಂವಿಧಾನ ರಚನಾ ಸಭೆಯಲ್ಲಿ ಪ್ರತಿಪಾದನೆ

● ಸುಕೃತ ಎಸ್.

ಯಾವುದೇ ಒಂದು ಸಮುದಾಯವು ಯಾವುದೇ ಒಂದು ರೀತಿಯಲ್ಲಿ ಧರ್ಮವನ್ನು ಆಚರಿಸುತ್ತಿದ್ದರೆ, ಬೇರೆ ಧರ್ಮದವರೂ ಅದೇ ರೀತಿಯಲ್ಲಿ ಧರ್ಮವನ್ನು ಆಚರಿಸಬೇಕು ಎನ್ನುವುದು ಸರಿಯಲ್ಲ

‘ಬಹುತ್ವ: ಜಾತ್ಯತೀತ ದೇಶದ ಲಕ್ಷಣ’

‘ನಾಗರಿಕ ಸಂಹಿತೆ’ ಎನ್ನುವ ಪರಿಕಲ್ಪನೆಯಲ್ಲಿ ವೈಯಕ್ತಿಕ ಕಾನೂನುಗಳೂ ಸೇರುತ್ತವೆ ಎಂದುಕೊಂಡವರಿಗೆ ಒಂದು ವಿಷಯವನ್ನು ಸ್ಪಷ್ಟಪಡಿಸಲು ಇಷ್ಟಪಡುತ್ತೇನೆ. ವೈಯಕ್ತಿಕ ಕಾನೂನುಗಳು ಒಂದು ಸಮುದಾಯಕ್ಕೆ ಭಾವನಾತ್ಮಕವಾಗಿ ಬಹಳ ಹತ್ತಿರವಾಗಿರುತ್ತವೆ. ಮುಸ್ಲಿಂ ಸಮುದಾಯದ ಕುರಿತು ಮಾತನಾಡುವುದಾದರೆ, ಉತ್ತರಾಧಿಕಾರ ಹಾಗೂ ವಾರಸುದಾರಿಕೆಯ ಕಾನೂನು, ಮದುವೆ, ವಿಚ್ಛೇದನ ಕುರಿತ ಕಾನೂನುಗಳಿಗೆ ಅವರು ಸಂಪೂರ್ಣವಾಗಿ ಧರ್ಮವನ್ನೇ ಅವಲಂಬಿಸಿದ್ದಾರೆ.

ಹಿಂದೂಗಳಿಗೆ ಮದುವೆ ಎನ್ನುವುದು ಸಂಸ್ಕಾರ. ಯುರೋಪಿನವರಿಗೆ ಅದು ಸ್ಥಾನಮಾನದ ವಿಷಯ. ಮುಸ್ಲಿಮರಿಗೆ ಇದು ಕುರಾನ್‌ಗೆ ಸಂಬಂಧಿಸಿದ್ದು. ಕುರಾನ್ ಅನುಸಾರವಾಗಿ ಮದುವೆ ನಡೆದಿಲ್ಲವಾದರೆ, ಅದು ಮದುವೆಯೇ ಅಲ್ಲ. ಈ ನಂಬಿಕೆಯನ್ನು ಮುಸ್ಲಿಮರು ಸುಮಾರು 1,350 ವರ್ಷಗಳಿಂದ ಅನುಸರಿಸಿಕೊಂಡು ಬರುತ್ತಿದ್ದಾರೆ. ಇಂಥ ಸಂದರ್ಭದಲ್ಲಿ, ಮದುವೆಯ ಸಿಂಧುತ್ವವನ್ನು ಏಕರೂಪವಾಗಿ ಪರಿಗಣಿಸಬೇಕು ಎಂದು ಹೇಳಿದರೆ, ಅದನ್ನು ಒಪ್ಪಲಾಗದು. ಮುಸ್ಲಿಮರಲ್ಲಿ ಮಾತ್ರವಲ್ಲ, ಮುಸ್ಲಿಮರಲ್ಲದ ಇತರೆ ಸಮುದಾಯಗಳಲ್ಲೂ ಇರುವ ವೈಯಕ್ತಿಕ ಕಾನೂನುಗಳು ಸಹ ಅವರವರ ಧರ್ಮದ ಮೇಲೆ ಆಧಾರಿತವಾಗಿವೆ.

ಯಾವುದೇ ಒಂದು ಸಮುದಾಯವು ಯಾವುದೇ ಒಂದು ರೀತಿಯಲ್ಲಿ ಧರ್ಮವನ್ನು ಆಚರಿಸುತ್ತಿದ್ದರೆ, ಬೇರೆ ಧರ್ಮದವರೂ ಅದೇ ರೀತಿಯಲ್ಲಿ ಧರ್ಮವನ್ನು ಆಚರಿಸಬೇಕು ಎನ್ನುವುದು ಸರಿಯಲ್ಲ. ಎಲ್ಲ ನಾಗರಿಕರೂ ಒಂದೇ ರೀತಿಯ ಕಾನೂನನ್ನು ಪಾಲಿಸಬೇಕು ಎನ್ನುವುದು ಜಾತ್ಯತೀತ ಪ್ರಭುತ್ವದ ಲಕ್ಷಣ ಎಂದು ಕೆಲವರು ಅಂದುಕೊಂಡಿದ್ದಾರೆ. ಜಾತ್ಯತೀತ ದೇಶವೊಂದು ಜನರ ದೈನಂದಿನ ಜೀವನ, ಅವರ ಭಾಷೆ, ಅವರ ಸಂಸ್ಕೃತಿ, ಅವರ ವೈಯಕ್ತಿಕ ಕಾನೂನುಗಳನ್ನು ಏಕರೂಪ ಮಾಡಬೇಕು ಎಂದುಕೊಂಡಿದ್ದಾರೆ. ಆದರೆ, ಇದು ತಪ್ಪು ಗ್ರಹಿಕೆ. ಎಲ್ಲಾ ಸಮುದಾಯದ ನಾಗರಿಕರಿಗೂ ಅವರದ್ದೇ ಧರ್ಮವನ್ನು ಪಾಲಿಸುವ, ಅವರದ್ದೇ ಜೀವನ ಶೈಲಿ ರೂಢಿಸಿಕೊಳ್ಳುವ, ಅವರದ್ದೇ ವೈಯಕ್ತಿಕ ಕಾನೂನನ್ನು ಪಾಲಿಸುವ ಸ್ವಾತಂತ್ರ್ಯ ಇರಬೇಕು. ಹಾಗಿದ್ದಾಗ ಮಾತ್ರ ಅದು ಜಾತ್ಯತೀತ ದೇಶ ಎನಿಸಿಕೊಳ್ಳುತ್ತದೆ.

ಮೆಹಬೂಬ್ ಅಲಿ ಬೇಗ್, ಸಂವಿಧಾನ ರಚನಾ ಸಭೆಯ ಮದ್ರಾಸ್ ಕ್ಷೇತ್ರದ ಪ್ರತಿನಿಧಿ



‘ಬಹುಸಂಖ್ಯಾತರೂ ವಿರೋಧಿಸುತ್ತಿದ್ದಾರೆ’

ಮುಸ್ಲಿಮರಿಗಾಗಿ ಮಾತ್ರವೇ ಈ ತಿದ್ದುಪಡಿಗಳನ್ನು ಹೇಳಲಾಗುತ್ತಿದೆ ಎನ್ನುವುದು ಸರಿಯಲ್ಲ. ದೇಶದ ಹಲವು ಸಮುದಾಯಗಳ ದೃಷ್ಟಿಕೋನದಿಂದಲೂ ಇದನ್ನು ಗಮನಿಸಬೇಕಿದೆ. ದೇಶದ ಎಲ್ಲಾ ಧರ್ಮ ಮತ್ತು ಸಮುದಾಯಗಳ ಜನರು ವಾರಸುದಾರಿಕೆ, ಉತ್ತರಾಧಿಕಾರ, ಮದುವೆ, ವಿಚ್ಛೇದನ ಸೇರಿದಂತೆ ಹಲವು ವಿಷಯಗಳಿಗೆ ವೈಯಕ್ತಿಕ ಕಾನೂನನ್ನು ಅನುಸರಿಸುತ್ತಿದ್ದಾರೆ.

ಏಕರೂಪ ನಾಗರಿಕ ಸಂಹಿತೆಯ ವಿರುದ್ಧ ಮುಸ್ಲಿಮೇತರ ಸಮುದಾಯಗಳ ಸಂಘ–ಸಂಸ್ಥೆಗಳಿಂದಲೂ ನನಗೆ ಹಲವು ಪತ್ರಗಳು ಬಂದಿವೆ. ಈ ಕಾನೂನು ದಬ್ಬಾಳಿಕೆಯ ಗುಣವನ್ನು ಹೊಂದಿದೆ ಎಂದೂ ಅದರಲ್ಲಿ ಅಭಿಪ್ರಾಯಪಡಲಾಗಿದೆ. ‘ನಮ್ಮ ಧಾರ್ಮಿಕ ಆಚರಣೆಗಳನ್ನು ಅಡ್ಡಿಪಡಿಸುವ ಇವರು ಯಾರು’ ಎಂದು ಅವರು ಸಂಸದರನ್ನು ಪ್ರಶ್ನಿಸುತ್ತಿದ್ದಾರೆ.

ವಾರಸುದಾರಿಕೆ ಕಾನೂನುಗಳು ಒಂದೊಂದು ಸಮುದಾಯದಲ್ಲಿ ಒಂದೊಂದು ರೀತಿಯಲ್ಲಿವೆ. ಈ ಎಲ್ಲಾ ವಿಧವಾದ ಕಾನೂನುಗಳನ್ನು ಅಳಿಸಿ, ಏಕರೂಪ ಮಾಡಲು ಬಯಸುತ್ತಿರುವಿರಾ? ಹಾಗಾದರೆ, ಯಾವ ಸಮುಯದಾಯದ ವಾರಸುದಾರಿಕೆ ಕಾನೂನನ್ನು ಮಾದರಿಯನ್ನಾಗಿ ಇಟ್ಟುಕೊಳ್ಳುತ್ತೀರಿ? ಮಿತಾಕ್ಷರ ಹಾಗೂ ದಾಯಭಾಗ್ ಎಂಬ ಪದ್ಧತಿಗಳಿವೆ. ಇವುಗಳನ್ನು ಹಲವು ಸಮುದಾಯಗಳು ಪಾಲಿಸಿಕೊಂಡು ಬರುತ್ತಿವೆ. ಹಾಗಾದರೆ, ನೀವು ರೂಪಿಸಿರುವ ಕಾನೂನಿಗೆ ಮಾದರಿ ಯಾವುದು? ಇಂಥ ಕಾನೂನು ರೂಪಿಸಿ ದೇಶದಲ್ಲಿ ಕ್ರಾಂತಿ ಮಾಡಲು ಬಯಸಿದ್ದೀರಿ. ಆದರೆ, ಇಂಥ ಕ್ರಮದ ಅಗತ್ಯ ಖಂಡಿತ ಇಲ್ಲ.

ಲೇಖನಿಯ ಒಂದು ರೇಖೆಯಿಂದ, ಬೇರೆ ಬೇರೆ ಸಮುದಾಯದವರ ವಿಭಿನ್ನ ಆಚರಣೆಗಳನ್ನು ಏಕರೂಪ ಮಾಡಲು ಹೊರಟಿದ್ದೀರಿ. ಇದರಿಂದಾಗುವ ಲಾಭವಾದರೂ ಏನು? ಜನರ ನಂಬುಗೆಗಳನ್ನು ಕೊಲ್ಲುವುದು ಬಿಟ್ಟರೆ, ಬೇರೆ ಯಾವ ಉದ್ದೇಶ ಈ ಕಾನೂನಿನಿಂದ ಪೂರ್ಣಗೊಳ್ಳಲಿದೆ? ಇಂಥ ದಬ್ಬಾಳಿಕೆಯ ಕಾನೂನುಗಳಿಗೆ ನಮ್ಮ ಸಂವಿಧಾನದಲ್ಲಿ ಜಾಗ ಇರಬಾರದು.

ವಾರಸುದಾರಿಕೆ ಕಾನೂನುಗಳು ಒಂದೊಂದು ಸಮುದಾಯದಲ್ಲಿ ಒಂದೊಂದು ರೀತಿಯಲ್ಲಿವೆ. ಈ ಎಲ್ಲಾ ವಿಧವಾದ ಕಾನೂನುಗಳನ್ನು ಅಳಿಸಿ, ಏಕರೂಪ ಮಾಡಲು ಬಯಸುತ್ತಿರುವಿರಾ? ಹಾಗಾದರೆ, ಯಾವ ಸಮುಯದಾಯದ ವಾರಸುದಾರಿಕೆ ಕಾನೂನನ್ನು ಮಾದರಿಯನ್ನಾಗಿ ಇಟ್ಟುಕೊಳ್ಳುತ್ತೀರಿ?

ದೇಶದ ಬಹುಸಂಖ್ಯಾತರು ಈ ಕಾನೂನನ್ನು ಒಪ್ಪಿಕೊಂಡಿದ್ದಾರೆ ಎಂದು ಯಾರಾದರು ಹೇಳಿದರೆ, ನಾನು ಅವರಿಗೆ ಸವಾಲೊಡ್ಡುತ್ತೇನೆ. ದೇಶದ ಬಹುಸಂಖ್ಯಾತರು ಕೂಡ ಈ ಕಾನೂನಿನ ವಿರುದ್ಧವಿದ್ದಾರೆ. ಒಂದು ವೇಳೆ ದೇಶದ ಬಹುಸಂಖ್ಯಾತರು ಈ ಕಾನೂನಿನ ಪರ ಇದ್ದಾರೆ ಎಂದು ಊಹಿಸಿಕೊಂಡರೂ ಅದನ್ನು ನಾವು ಖಂಡಿಸಬೇಕಿದೆ. ಯಾಕೆಂದರೆ, ಪ್ರಜಾಪ್ರಭುತ್ವದಲ್ಲಿ ಅಲ್ಪಸಂಖ್ಯಾತರ ಹಕ್ಕುಗಳನ್ನು ಕಾಪಾಡುವುದು ಬಹುಸಂಖ್ಯಾತರ ಕರ್ತವ್ಯವಾಗಿದೆ. ಹೀಗಾಗದಿದ್ದರೆ ದೇಶವನ್ನು ಪ್ರಜಾಪ್ರಭುತ್ವ ಎಂದು ಹೇಗೆ ಕರೆಯುವುದು? ಇದು ದಬ್ಬಾಳಿಕೆ ಮಾತ್ರ.

ಬಿ.ಪೋಕರ್, ಸಂವಿಧಾನ ರಚನಾ ಸಭೆಯ ಮದ್ರಾಸ್ ಕ್ಷೇತ್ರದ ಪ್ರತಿನಿಧಿ

ಹಿಂದೂ ಕಾನೂನುಗಳನ್ನೇ ನೋಡಿ, ಮಹಿಳೆಯರ ಕುರಿತಾದ ತಾರತಮ್ಯ ಹೇರಳವಾಗಿ ಸಿಗುತ್ತವೆ. ಹೀಗೆ ತಾರತಮ್ಯ ಎಸಗುವುದು ಹಿಂದೂ ಧರ್ಮದ ಭಾಗ ಹಾಗೂ ಹಿಂದೂ ಧರ್ಮದ ಆಚರಣೆ ಎನ್ನುವುದಾದರೆ, ಎಂದಿಗೂ ನಾವು ಮಹಿಳೆಯರಿಗೆ ಸಮಾನತೆಯನ್ನು ನೀಡುವ ಕಾನೂನು ರೂಪಿಸಲು ಸಾಧ್ಯವೇ ಇಲ್ಲ

‘ಬಹುಸಂಖ್ಯಾತರ ಮೇಲೆಯೇ ಹೆಚ್ಚು ದಬ್ಬಾಳಿಕೆ’

ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಇಲ್ಲವಾದರೆ, ಆಗುವ ದುಷ್ಪರಿಣಾಮಗಳ ಬಗ್ಗೆ ಚರ್ಚಿಸೋಣ. ಹಿಂದೂಗಳ ಉದಾಹರಣೆಯನ್ನೇ ನೋಡೋಣ. ಮಯೂಖಾ ಕಾನೂನು ದೇಶದ ಕೆಲವೆಡೆ ಜಾರಿಯಲ್ಲಿದೆ. ಇನ್ನು ಕೆಲವೆಡೆ ಮಿತಾಕ್ಷರ ಕಾನೂನು ಇದೆ. ಜೊತೆಗೆ ಬಂಗಾಳದಲ್ಲಿ ದಾಯಭಾಗ್ ಕಾನೂನನ್ನು ಪಾಲಿಸಲಾಗುತ್ತಿದೆ. ಹೀಗೆ ಹಿಂದೂಗಳಲ್ಲೇ ಬೇರೆ ಬೇರೆ ಕಾನೂನುಗಳಿವೆ. ನಮ್ಮ ಕೆಲವು ರಾಜ್ಯಗಳು ಹಾಗೂ ಪ್ರಾಂತ್ಯಗಳು ತಮ್ಮದೇ ಆದ ಹಿಂದೂ ಕಾನೂನನ್ನು ರೂಪಿಸಿಕೊಳ್ಳಲು ಪ್ರಾರಂಭಿಸಿವೆ. ದೇಶದ ವೈಯಕ್ತಿಕ ಕಾನೂನುಗಳಿಗೆ ಅಡ್ಡಿಯಾಗುತ್ತದೆ ಎನ್ನುವ ಕಾರಣಕ್ಕೆ, ಈ ರೀತಿಯ ಹೊಸ ಪ್ರತ್ಯೇಕ ಕಾನೂನುಗಳಿಗೆ ಅನುಮತಿ ನೀಡಲು ಸಾಧ್ಯವೆ? ಆದ್ದರಿಂದ ಈ ಕಾನೂನು ಅಲ್ಪಸಂಖ್ಯಾತರನ್ನು ಮಾತ್ರವಲ್ಲ ಬಹುಸಂಖ್ಯಾತರನ್ನೂ ಪ್ರಭಾವಿಸುತ್ತದೆ.

ಕೆಲವು ಹಿಂದೂಗಳಿಗೂ ಈ ಏಕರೂಪ ನಾಗರಿಕ ಕಾನೂನು ಇಷ್ಟವಿಲ್ಲ ಎಂದು ನನಗೆ ತಿಳಿದಿದೆ. ಯಾಕೆಂದರೆ, ಅವರು ಸಹ ನಮ್ಮ ಮುಸ್ಲಿಂ ಸದಸ್ಯರಂತೆಯೇ ಯೋಚಿಸುತ್ತಿದ್ದಾರೆ. ವಾರಸುದಾರಿಕೆ, ಉತ್ತರಾಧಿಕಾರದ ಕಾನೂನುಗಳು ಧಾರ್ಮಿಕತೆಯ ಭಾಗ ಎಂದು ಹಿಂದೂಗಳೂ ಅಂದುಕೊಂಡಿದ್ದಾರೆ. ಒಂದು ವೇಳೆ ವಾರಸುದಾರಿಕೆ, ಉತ್ತರಾಧಿಕಾರ ಮೊದಲಾದ ಕಾನೂನುಗಳು ಧರ್ಮದ ಭಾಗವೇ ಆಗಿದೆ ಎಂದಾದರೆ, ನೀವು ಎಂದಿಗೂ ಮಹಿಳೆಯರಿಗೆ ಸಮಾನ ಹಕ್ಕು ನೀಡಲಾರಿರಿ.

ಹಿಂದೂ ಕಾನೂನುಗಳನ್ನೇ ನೋಡಿ, ಮಹಿಳೆಯರ ಕುರಿತಾದ ತಾರತಮ್ಯ ಹೇರಳವಾಗಿ ಸಿಗುತ್ತವೆ. ಹೀಗೆ ತಾರತಮ್ಯ ಎಸಗುವುದು ಹಿಂದೂ ಧರ್ಮದ ಭಾಗ ಹಾಗೂ ಹಿಂದೂ ಧರ್ಮದ ಆಚರಣೆ ಎನ್ನುವುದಾದರೆ, ಎಂದಿಗೂ ನಾವು ಮಹಿಳೆಯರಿಗೆ ಸಮಾನತೆಯನ್ನು ನೀಡುವ ಕಾನೂನು ರೂಪಿಸಲು ಸಾಧ್ಯವೇ ಇಲ್ಲ.

ಒಂದು ಮುಖ್ಯವಾದ ವಿಷಯವನ್ನು ನಾವೆಲ್ಲರೂ ನಮ್ಮ ಮನಸ್ಸಿನಾಳಕ್ಕೆ ಇಳಿಸಿಕೊಳ್ಳಬೇಕು. ಮುಸ್ಲಿಂ ಸಮುದಾಯದವರೂ ಈ ಬಗ್ಗೆ ಅರಿತುಕೊಳ್ಳಬೇಕು. ಅದೇನೆಂದರೆ, ನಾವು ಸಮಾಜದಿಂದ ಪ್ರತ್ಯೇಕವಾಗಿ ಬದುಕುವ ಬಯಕೆಯನ್ನು, ಪ್ರವೃತ್ತಿಯನ್ನು ಬಿಡಬೇಕು. ಇದು ದೇಶದ ಹಿತದೃಷ್ಟಿಯಿಂದ ಒಳ್ಳೆಯದು.

ಧಾರ್ಮಿಕ ಆಚರಣೆಗಳು ಧರ್ಮಕ್ಕೆ ಸೀಮಿತವಾಗಿರಬೇಕು. ನಮ್ಮ ಜೀವನಕ್ರಮ, ಆಚರಣೆಗಳು ಎಲ್ಲಾ ಸಮುದಾಯಕ್ಕೂ ಒಂದೇ ಆಗಬೇಕು, ಒಗ್ಗೂಡಬೇಕು. ಹೀಗೆ ಒಂದಾಗುವ ಮೂಲಕ ಸಶಕ್ತ ದೇಶವನ್ನು ಕಟ್ಟಬೇಕಿದೆ. ದೇಶದಲ್ಲಿ ಏಕತೆಯನ್ನು ಮೂಡಿಸುವುದು ನಮ್ಮ ಆದ್ಯತೆ ಮತ್ತು ಅತ್ಯಂತ ತುರ್ತಿನ ಕೆಲಸವಾಗಿದೆ. ವೈಯಕ್ತಿಕ ಕಾನೂನುಗಳು ನಮ್ಮ ಐಕ್ಯತೆಗೆ ಒದಗಿದ ಅಪಾಯಗಳಾಗಿವೆ. ಏಕರೂಪ ನಾಗರಿಕ ಸಂಹಿತೆಯನ್ನು ಅಲ್ಪಸಂಖ್ಯಾತರ ಮೇಲಿನ ದಬ್ಬಾಳಿಕೆ ಎಂದು ನಮ್ಮ ಮುಸ್ಲಿಂ ಸ್ನೇಹಿತರು ಭಾವಿಸಬಾರದು. ನಿಜದಲ್ಲಿ ಇದು ಬಹುಸಂಖ್ಯಾತರ ಮೇಲೆಯೇ ಹೆಚ್ಚು ದಬ್ಬಾಳಿಕೆ ಮಾಡುವಂಥ ಕಾನೂನಾಗಿದೆ.

ಕನ್ಹಯ್ಯಾಲಾಲ್ ಮಾಣೆಕ್‌ಲಾಲ್ ಮುನ್ಷಿ
ಸಂವಿಧಾನ ರಚನಾ ಸಭೆಯಲ್ಲಿ ಬಾಂಬೆ ಕ್ಷೇತ್ರದ ಪ್ರತಿನಿಧಿ

ಆಧಾರ: ಲೋಕಸಭೆಯ ಡಿಜಿಟಲ್ ಗ್ರಂಥಾಲಯದ ‘ಸಂವಿಧಾನ ರಚನಾ ಸಭೆಯ ಸಂಸದೀಯ ಚರ್ಚೆಗಳು’

ಸಂವಿಧಾನ ರಚನಾ ಸಭೆಯಲ್ಲಿ ಚರ್ಚೆ: ಮುಂದುವರಿಯುತ್ತದೆ

ಸಿನಿ ಬಿಟ್ಸ್

‘ರಾಮ’ನಿಗೆ ಪ್ರಣೀತಾ ಜೋಡಿ


ಪ್ರಣೀತಾ

ನಟ ರಿಷಿ, ತನ್ನ ನಟನೆ ಹಾಗೂ ವಿಭಿನ್ನ ಸಿನಿಮಾಗಳ ಆಯ್ಕೆಗಳಿಂದಲೇ ಕನ್ನಡದ ಪ್ರೇಕ್ಷಕರನ್ನು ಸೆಳೆದಿರುವವರು. ಹಾಸ್ಯ ಪ್ರಧಾನ ಚಿತ್ರಗಳಷ್ಟೇ ಅಲ್ಲದೆ ಸಸ್ಪೆನ್ಸ್, ಥ್ರಿಲ್ಲರ್ ಕಥೆಗಳಲ್ಲೂ ತಮ್ಮ ನಟನೆಯ ಸಾಮರ್ಥ್ಯ ಪ್ರದರ್ಶಿಸಿರುವ ರಿಷಿ, ‘ಶೈತಾನ್’ ಎಂಬ ವೆಬ್‌ಸಿರೀಸ್‌ನಲ್ಲಿ ರಗಡ್ ಆಗಿಯೂ ಕಾಣಿಸಿಕೊಂಡವರು. ಇದೀಗ ಮತ್ತೆ ಸಿನಿಮಾದತ್ತ ಹೆಜ್ಜೆ ಹಾಕಿರುವ ರಿಷಿ, ‘ರಾಮನ ಅವತಾರ’ ಸಿನಿಮಾ ಮೂಲಕ ಲವರ್ ಬಾಯ್ ಆಗಿ ಪ್ರತ್ಯಕ್ಷರಾಗಿದ್ದಾರೆ.


ರಿಷಿ

ಇತ್ತೀಚೆಗಷ್ಟೇ ಸಿನಿಮಾದ ‘ರಾಮ ಈಸ್ ಜೆಂಟಲ್ ಮೆನ್’ ಎಂಬ ಹಾಡು ಬಿಡುಗಡೆಯಾಗಿತ್ತು. ಇದೀಗ ಎರಡನೇ ಹಾಡು ರಿಲೀಸ್ ಆಗಿದೆ. ‘ಮನಸು ಬೇರೆಯ ದಿಕ್ಕಲಿ ಸಾಗಲು’ ಎಂಬ ಹಾಡಿಗೆ ಸಂಚಿತ್ ಧ್ವನಿಯಾಗಿದ್ದಾರೆ. ಸಿಂಪಲ್ ಸುನಿ ಸಾಹಿತ್ಯದ ಈ ಹಾಡಿಗೆ ಜೂಡಾ ಸ್ಯಾಂಡಿ ಸಂಗೀತ ನೀಡಿದ್ದಾರೆ. ಉಡುಪಿಯ ಸಮುದ್ರ ತೀರದಲ್ಲಿ ಈ ಹಾಡಿನ ಚಿತ್ರೀಕರಣವಾಗಿದೆ. ಈ ಪ್ರೇಮಗೀತೆಯಲ್ಲಿ ರಿಷಿ ಹಾಗೂ ಪ್ರಣೀತಾ ಜೋಡಿ ಕಾಣಿಸಿಕೊಂಡಿದೆ.

‘ರಾಮನ ಅವತಾರ’ ಸಿನಿಮಾದಲ್ಲಿ ಪ್ರಣೀತಾ ಸುಭಾಷ್ ಹಾಗೂ ಶುಭ್ರ ಅಯ್ಯಪ್ಪ ನಾಯಕಿಯರಾಗಿ ನಟಿಸಿದ್ದು, ಅರುಣ್ ಸಾಗರ್ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ. ‘ನಾಟಿ ಫ್ಯಾಕ್ಟರಿ’ ಖ್ಯಾತಿಯ ವಿಕಾಸ್ ಪಂಪಾಪತಿ ಈ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಿದ್ದು, ಇದು ಇವರ ನಿರ್ದೇಶನದ ಚೊಚ್ಚಲ ಸಿನಿಮಾ.


ಸ್ಟಾರ್ ಫ್ಯಾಬ್ ಪ್ರೊಡಕ್ಷನ್‌ನಡಿ ‘ಆಪರೇಷನ್ ಅಲಮೇಲಮ್ಮ’ ಸಿನಿಮಾ ನಿರ್ಮಾಣ ಮಾಡಿದ್ದ ಅಮರೇಜ್ ಸೂರ್ಯವಂಶಿ ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ಶೀಘ್ರದಲ್ಲೇ ಸಿನಿಮಾ ತೆರೆಕಾಣಲಿದೆ.

‘ನನಗೂ ಹೆಂಡ್ತಿ ಬೇಕು’ ಎಂದ ತಬಲ ನಾಣಿ!

ಸರಿಯಾಗಿ ಕಣ್ಣು ಕಾಣಿಸುವ ಹುಡುಗರಿಗೇ ಇಂದು ಹುಡುಗಿ ಸಿಗುವುದು ಕಷ್ಟ. ಇಂತಹ ಸ್ಥಿತಿಯಲ್ಲಿ ದೃಷ್ಟಿಶಕ್ತಿ ಕಳೆದುಕೊಂಡ ಒಬ್ಬನಿಗೆ ಮದುವೆ ಮಾಡಿಸುವ ಪ್ರಯತ್ನಕ್ಕೆ ಕೈಹಾಕಿದ್ದಾರೆ ನಿರ್ದೇಶಕ ಕೆ.ಶಂಕರ್!

‘ಆ್ಯಕ್ಟ್ 370’ ಎಂಬ ಚಿತ್ರ ನಿರ್ದೇಶಿಸಿದ್ದ ಶಂಕರ್ ಅವರೀಗ ಹಾಸ್ಯಪ್ರಧಾನ ಚಿತ್ರಕ್ಕೆ ಕೈಹಾಕಿದ್ದಾರೆ. ಲೈರಾ ಎಂಟರ್‌ಟೇನ್ಮೆಂಟ್ ಆ್ಯಂಡ್ ಮೀಡಿಯಾ ಮೂಲಕ ಭರತ್ ಗೌಡ ಮತ್ತು ಸಿ.ರಮೇಶ್ ಜೊತೆಯಾಗಿ ನಿರ್ಮಿಸುತ್ತಿರುವ, ಶಂಕರ್ ನಿರ್ದೇಶನವಿರುವ ಈ ಚಿತ್ರದ ಹೆಸರು ‘ನನಗೂ ಹೆಂಡ್ತಿ ಬೇಕು’. ಅಂಧನೊಬ್ಬ ಮದುವೆಯಾಗಲು ಹೊರಟಾಗ ನಡೆಯುವ ಪ್ರಸಂಗಗಗಳನ್ನು ಹಾಸ್ಯಮಯವಾಗಿ ಹೇಳುವ ಕಥಾಹಂದರ ಹೊತ್ತ ಸಿನಿಮಾ ಇದಾಗಿದೆ. ಸದ್ಯ ಚಿತ್ರದ ಕ್ಲೈಮ್ಯಾಕ್ಸ್ ದೃಶ್ಯಗಳ ಚಿತ್ರೀಕರಣ ನಡೆಯುತ್ತಿದ್ದು, ಶಂಕರ್ ಅವರೇ ಕಥೆ, ಚಿತ್ರಕಥೆ ಬರೆದು ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ.

ಮದುವೆಯಾಗಲು ಹೊರಟು ಹೆಣ್ಣು ಸಿಗದೇ ಪರಿತಪಿಸುವ ಅಂಧನ ಪಾತ್ರದಲ್ಲಿ ನಟ ತಬಲ ನಾಣಿ ಅವರು ಕಾಣಿಸಿಕೊಂಡಿದ್ದಾರೆ. ನಾಣಿಗೆ ಜೊತೆಯಾಗಿ ಬ್ಯಾಂಕ್ ಜನಾರ್ದನ್ ಮತ್ತು ಬಾಲು ನಟಿಸಿದ್ದಾರೆ. ಬಿಗ್‌ಬಾಸ್ ಖ್ಯಾತಿಯ ಚೈತ್ರಾ ಕೋಟೂರ್ ಮೂಕಿಯಾಗಿ ನಟಿಸಿದ್ದಾರೆ ಎಂದಿದೆ ಚಿತ್ರತಂಡ. ಕೆ. ಎಂ.ಇಂದ್ರ ಅವರ ಸಂಗೀತ ಸಂಯೋಜನೆ ಚಿತ್ರಕ್ಕಿದೆ.


ತಬಲ ನಾಣಿ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ರಾಜಸ್ಥಾನದ ಜೈಪುರದ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ದರ್ಗಾವೊಂದನ್ನು ನಿರ್ಮಿಸಲಾಗಿದೆ. ಅಲ್ಲಿ ಮುಸ್ಲಿಮರು ನಮಾಜ್ ಮಾಡುತ್ತಿದ್ದಾರೆ. ಇದಕ್ಕೆ ಪೊಲೀಸರ ಭದ್ರತೆ ನೀಡಲಾಗಿದೆ. ಕಾಂಗ್ರೆಸ್ ಸರ್ಕಾರದ ಈ ಕ್ರಮವನ್ನು ನಾವೆಲ್ಲರೂ ತೀವ್ರವಾಗಿ ವಿರೋಧಿಸಬೇಕಿದೆ. ಸಾಧ್ಯವಾದಷ್ಟು ಈ ವಿಡಿಯೊವನ್ನು ಶೇರ್ ಮಾಡಿ. ಕಾಂಗ್ರೆಸ್ ಅಥವಾ ಇತರ ವಿರೋಧ ಪಕ್ಷಗಳಿಗೆ ಮತ ಹಾಕುವಾಗ ಜಾತ್ಯತೀತ ಹಿಂದೂಗಳ ಕಣ್ಣು ತೆರೆಯಬಹುದು’ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಲಾಗಿದೆ. ದರ್ಗಾ ನಿರ್ಮಿಸಲಾಗಿದೆ ಎನ್ನುವುದರ ಬಗ್ಗೆ ಪೊಲೀಸರಿಗೆ ದೂರನ್ನೂ ನೀಡಲಾಗಿದೆ. ಆದರೆ, ಇದು ತಿರುಚಲಾದ ಸುದ್ದಿಯಾಗಿದೆ.



ಈ ದೇವಸ್ಥಾನದಲ್ಲಿ ‘ಅಖಂಡ ಜ್ಯೋತಿ’ ಎನ್ನುವ ಸಂಪ್ರದಾಯವಿದೆ. ಇದನ್ನು 40–50 ವರ್ಷಗಳಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಇದು ಹಿಂದೂ, ಮುಸ್ಲಿಂ ಸೌಹಾರ್ದದ ಕೇಂದ್ರವಾಗಿದೆ. ಎರಡೂ ಧರ್ಮದವರು ಇಲ್ಲಿಗೆ ನಡೆದುಕೊಳ್ಳುತ್ತಾರೆ. ಈ ಕುರಿತು ಆ ದೇವಸ್ಥಾನದ ಅರ್ಚಕರೇ ಖಚಿತಪಡಿಸಿದ್ದಾರೆ. ‘ಇದೊಂದು ಸುಳ್ಳು ಸುದ್ದಿಯಾಗಿದೆ’ ಎಂದು ರಾಜಸ್ಥಾನ ಪೊಲೀಸರು ಟ್ವೀಟ್ ಮಾಡಿದ್ದಾರೆ. ಸುಳ್ಳು ಸುದ್ದಿ ಹಂಚಿದ 9 ಮಂದಿಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಆದ್ದರಿಂದ ದೇವಸ್ಥಾನದ ಆವರಣದಲ್ಲಿ ದರ್ಗಾ ನಿರ್ಮಿಸಲಾಗಿದೆ ಎಂಬುದು ಸುಳ್ಳು ಸುದ್ದಿ ಎಂದು ನ್ಯೂಸ್‌ಚೆಕರ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಬೇರೆ ಮತಿ ಬೇರೆ ಮತ

ನೂರಾರು ಮತವಿಹುದು ಲೋಕದುಗ್ರಾಣದಲಿ |
ಆರಿಸಿಕೊ ನಿನ್ನ ರುಚಿಗೊಪ್ಪುವುದನದರೊಳ್ ||
ಸಾರದಡುಗೆಯನೊಳವಿಚಾರದೊಲೆಯಲಿ ಮಾಡು
ಬೇರೆ ಮತಿ ಬೇರೆ ಮತ – ಮಂಕುತಿಮ್ಮ || 934 ||

ಪದ-ಅರ್ಥ: ಮತವಿಹುದು = ಮತವು + ಇಹುದು, ಲೋಕದುಗ್ರಾಣದಲಿ = ಲೋಕದ + ಉಗ್ರಾಣದಲಿ, ರುಚಿಗೊಪ್ಪುವುದನದರೊಳ್ = ರುಚಿಗೆ + ಒಪ್ಪುವುದನು + ಅದರೊಳ್ (ಅದರಲ್ಲಿ), ಸಾರದಡುಗೆಯನೊಳವಿಚಾರದೊಲೆಯಲಿ = ಸಾರದ + ಅಡುಗೆಯನು- + ಒಳ + ವಿಚಾರದ + ಒಲೆಯಲಿ.

ವಾಚ್ಯಾರ್ಥ: ಲೋಕವೆಂಬ ಉಗ್ರಾಣದಲ್ಲಿ ನೂರಾರು ಮತಗಳಿವೆ. ನಿನ್ನ ರುಚಿಗೆ ಯಾವುದು ತಕ್ಕುದೋ ಅದನ್ನು ಆರಿಸಿಕೊ. ಅದರ ಸಾರದ ಅಡುಗೆಯನ್ನು ಚಿಂತನೆಯೆಂಬ ಒಲೆಯಲ್ಲಿ ಮಾಡು. ಬೇರೆ ಬುದ್ಧಿ, ಬೇರೆ ಮತ.

ವಿವರಣೆ: ಈ ಪ್ರಪಂಚವೊಂದು ಬಹುದೊಡ್ಡದಾದ ಮಾರಾಟದ ಅಂಗಡಿ. ಅಲ್ಲಿ ಸಿಗದೆ ಇರುವ ಪದಾರ್ಥವೇ ಇಲ್ಲ. ಕಲ್ಪನಾತೀತವಾದ ವಸ್ತುಗಳು, ಚಿಂತನೆಗಳು, ಅಲ್ಲಿವೆ. ಪ್ರತಿಯೊಬ್ಬರ ರುಚಿಗೆ, ಅವರ ಸಾಮರ್ಥ್ಯಕ್ಕೆ ತಕ್ಕಂತಹ ಸಾಮಗ್ರಿ ಅಲ್ಲಿ ಶೇಖರವಾಗಿವೆ. ನಿಮಗೆ ಬೇಕಾದ್ದನ್ನು ಆರಿಸಿಕೊಳ್ಳಬಹುದು. ತೆಗೆದುಕೊಳ್ಳುವುದು ನಿಮ್ಮ ಆಯ್ಕೆ ಮತ್ತು ಅದನ್ನು ಸರಿಯಾಗಿ ಬಳಸಿಕೊಳ್ಳುವುದು ನಿಮ್ಮ ಜವಾಬ್ದಾರಿ. ಇಲ್ಲಿ ನೂರಾರು ಋಷಿಮುನಿಗಳು, ಸಂತರು, ಜ್ಞಾನಿಗಳು, ತತ್ವಜ್ಞರು, ಸಮಾಜ ಸುಧಾರಕರು, ರಾಜಕಾರಣಿಗಳು, ಸರ್ವಾಧಿಕಾರಿಗಳು ಹೇಳಿದ ಮಾತುಗಳು, ಅವರು ಪ್ರಚಾರ ಮಾಡಿದ ಮತಗಳೂ ಇವೆ. ಕೆಲವು ಒಂದಕ್ಕೊಂದು ವಿರೋಧವೂ ಆಗಿವೆ. ಅವುಗಳನ್ನೆಲ್ಲ ಗಮನಿಸು. ಅವನ್ನೆಲ್ಲ ನಿನ್ನ ಚಿಂತನೆಯ ಒಲೆಯಲ್ಲಿ ಚೆನ್ನಾಗಿ ಬೇಯಿಸು. ನಂತರ ನಿನಗೆ, ನಿನ್ನ ಪರಿಸ್ಥಿತಿಗೆ, ಮನೋಧರ್ಮಕ್ಕೆ ಯಾವುದು ಸರಿಯೋ ಅದನ್ನು ಆರಿಸಿ ಬಳಸು. ನನ್ನಜ್ಜ ನನಗೊಬ್ಬ ಸರ್ವಜ್ಞ. ಆತ ನನಗೆ ತಿಳಿಹೇಳಿದ ರೀತಿ ಅನನ್ಯವಾದದ್ದು. ಒಂದು ಸಲ ನನಗೆ ಹೇಳಿದ, “ನೋಡೋ, ನೀನು ತರಕಾರಿ ತರಲು ಅಂಗಡಿಗೆ ಹೋಗುತ್ತೀ. ಅಲ್ಲಿ ಐವತ್ತು ತರಹದ ತರಕಾರಿಯನ್ನು ಜೋಡಿಸಿ ಇಟ್ಟಿರುತ್ತಾರೆ. ಅದರಲ್ಲಿ ನಿನಗೆ ಯಾವ, ಯಾವ ತರಕಾರಿ ಬೇಕೋ ಆರಿಸಿ ತೆಗೆದುಕೊಂಡು ಬಾ. ಆ ಇನ್ನೊಂದು ತರಕಾರಿ ಏಕೆ ಇಟ್ಟಿದ್ದೀರಿ ಎಂದು ಅಂಗಡಿಯವನೊಡನೆ ಜಗಳವಾಡುತ್ತ ನಿಲ್ಲಬೇಡ. ಯಾಕೆಂದರೆ ಆ ತರಕಾರಿಯನ್ನು ಅಪೇಕ್ಷಿಸುವ ನಾಲ್ಕು ಜನರಿದ್ದಾರೆ. ಅದು ಅವರ ಆಯ್ಕೆ”. ಇದು ನನಗೆ ಅತ್ಯಂತ ಪ್ರಯೋಜನಕಾರಿಯಾದ ಸಲಹೆಯಾಗಿದೆ. ಹೌದಲ್ಲವೇ? ಎಲ್ಲರೂ ತಮಗೆ ಬೇಕಾದುದನ್ನು ತೆಗೆದುಕೊಂಡರೆ ಯಾವ ತಕರಾರೂ ಇಲ್ಲ. ತಕರಾರು ಬರುವುದು, ನನಗೆ ಇಷ್ಟವಿಲ್ಲದ್ದನ್ನು ಮತ್ತೊಬ್ಬರು ಅಪೇಕ್ಷಿಸಿದಾಗ, ನಾನು ಜಗಳಕ್ಕೆ ನಿಂತಾಗ. ಕಗ್ಗ ಆ ಮಾತನ್ನು ಹೇಳುತ್ತದೆ. ಈ ಜಗತ್ತೆಂಬ ಉಗ್ರಾಣದಲ್ಲಿರುವ ನೂರಾರು ಮತಗಳಲ್ಲಿ ನಿನಗೆ ಬೇಕಾದುದನ್ನು ಆರಿಸಿಕೋ. ಅದು ಸರಿಯೇ ಎಂಬುದನ್ನು ನಿನ್ನ ವಿವೇಕದ ಬೆಳಕಿನಲ್ಲಿ ಪರೀಕ್ಷಿಸಿ ನೋಡು. ಸರಿ ಎನ್ನಿಸಿದರೆ ಬಳಸು. ಬೇರೆ ಬೇರೆ ಮನಸ್ಸುಗಳಿಗೆ ಬೇರೆ ಬೇರೆ ಆಯ್ಕೆಗಳು. ಅದಕ್ಕೇ ಕೃಷ್ಣ ಭಗವದ್ಗೀತೆಯಲ್ಲಿ ಕೊನೆಗೆ ಹೇಳುತ್ತಾನೆ. “ಯಥೇಚ್ಛಸಿ ತಥಾ ಕುರು”. ಎಲ್ಲವನ್ನು ವಿಮರ್ಶೆ ಮಾಡಿ ಕೊನೆಗೆ ನಿನಗೆ ಯಾವುದು ಸರಿಯೆನ್ನಿಸುತ್ತದೆಯೋ ಹಾಗೆಯೇ ಮಾಡು. ಬೇರೆ ಮತಿ, ಬೇರೆ ಮತ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜುಲೈ 25, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಶುದ್ಧಸಪ್ತಮಿ ಗಂ. 15-09 ನಕ್ಷತ್ರ: ಚಿತ್ತಾ ಗಂ. 24-03 ಯೋಗ: ಸಿದ್ಧ ಗಂ. 15-01 ಕರಣ: ವಣಿಜ ಗಂ. 15-09, ಕರ್ಕಾಟಕ ಮಾಸದ 08 ನೇ ದಿನ,
ಮಳೆನಕ್ಷತ್ರ: ಪುಷ್ಯ 2. ರಾಹುಕಾಲ : ಸಾಯಂಕಾಲ 03-00 - 04-30
ಸೂರ್ಯೋದಯ : 06-18 ಸೂರ್ಯಾಸ್ತ : 06-56 ಮುಸ್ಲಿಂ ದಿನಾಂಕ : 06 ಮೊಹರಮ್
ಅದೃಷ್ಟ ಸಂಖ್ಯೆ : 6, 2

ಮೇಷ: ದಾಯಾದಿಗಳು ಕಲಹಗಳನ್ನು ಬಿಟ್ಟು ರಾಜಿ ಮಾಡಿಕೊಳ್ಳುವ ಮನೋಭಾವಕ್ಕೆ ಬಂದಾರು. ಷೇರು ಮಾರಾಟಗಳಿಂದ ಲಾಭ ಹೊಂದುವಿರಿ. ಈ ದಿನ ಮೂರನೇ ದರ್ಜೆಯ ನೌಕರರಿಗೆ ಆರ್ಥಿಕವಾಗಿ ಅನುಕೂಲವಾಗುವುದು.

ವೃಷಭ: ವೈದ್ಯರಿಗೆ ಬಿಡುವಿಲ್ಲದ ಅಭ್ಯಾಸದ ಜತೆಗೆ ಉನ್ನತ ಜವಾಬ್ದಾರಿ ಸ್ಥಾನಕ್ಕೆ ವರ್ಗಾವಣೆಯಾಗುವುದು. ಯಾರಿಗೂ ಸಾಲ ಕೊಡದಿರಲು ನಿಶ್ಚಯಿಸುವುದು ಉತ್ತಮ. ಅರಳಿಮರದ ಪ್ರದಕ್ಷಿಣೆ ಬರುವುದರಿಂದ ಪಾಪ ಪರಿಹಾರ.

ಮಿಥುನ: ಗೃಹ ಉಪಯೋಗಿ ವಸ್ತುಗಳನ್ನು ಕೊಳ್ಳುವ ಬಗ್ಗೆ ಪತ್ನಿ ಮತ್ತು ಮಕ್ಕಳೊಂದಿಗೆ ಚರ್ಚಿಸುವಿರಿ. ಬಟ್ಟೆ ವ್ಯಾಪಾರಿಗಳು ರಿಯಾಯಿತಿ ಮಾರಾಟಗಳಿಂದ ಲಾಭ ಹೊಂದುವಿರಿ. ಆಫೀಸಿನ ಜನರ ಬಗ್ಗೆ ಗಮನವಿಟ್ಟುಕೊಳ್ಳಿ.

ಕರ್ಕಾಟಕ: ಮಗನಿಗೆ ಪರಿಶ್ರಮವಿಲ್ಲದೇ ಕೆಲಸ ದೊರೆತಿದ್ದಕ್ಕೆ ಕುಟುಂಬ ಸಂತಸದಲ್ಲಿರುವುದು. ವ್ಯಾಪಾರದ ಬಂಡವಾಳ ಹೆಚ್ಚಿಸಿಕೊಳ್ಳುವ ಬಗ್ಗೆ ಯೋಚಿಸಬಹುದು. ಹಿರಿಯರ ಆರೋಗ್ಯದ ವಿಷಯದಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ.

ಸಿಂಹ: ಕುಶಲಕರ್ಮಿಗಳಿಗೆ ಪ್ರದರ್ಶನ ಮಾರಾಟಗಳಿಂದ ಅಧಿಕ ಆದಾಯ ಎದುರು ನೋಡಬಹುದು. ದಂಪತಿಗಳಿಗೆ ಸಂತಾನದ ಶುಭ ಸಮಾಚಾರಗಳಿರುವುದು. ಗುತ್ತಿಗೆ ಕೆಲಸದ ಬಾಕಿ ಹಣ ಸಂದಾಯವಾಗುವಂತಾಗಲಿದೆ.

ಕನ್ಯಾ: ಬಹುಕಾಲ ನೆನಪಿನಲ್ಲಿ ಉಳಿಯುವಂತಹ ಒಂದು ಮಧುರ ಘಟನೆ ಈ ದಿನ ನಿಮ್ಮ ಮನೆಯಲ್ಲಿ ನಡೆಯಲಿದೆ. ದೇಹದಲ್ಲಿ ವಾತದ ಬಾಧೆಯು ಉಪಶಮನವಾಗುವುದು. ಸಹಾಯ ನಿರೀಕ್ಷಿಸಿದ ಕಡೆಯಿಂದ ದೊರಕಲಿದೆ.

ತುಲಾ: ವ್ಯವಹಾರದಲ್ಲಿ ಅಡ್ಡಿ ಆತಂಕ ಎದುರಾದರೂ ದುರ್ಗಾದೇವಿಯ ಆರಾಧನೆಯಿಂದ ಸಹಜವಾಗಿ ಮುಂದುವರೆಯುವುದು. ಅತಿಯಾದ ಪರಿಶ್ರಮದ ದುಡಿಮೆಯು ಜನರ ದೃಷ್ಟಿ ದೋಷಕ್ಕೆ ಗುರಿಯಾಗುವುದು.

ವೃಶ್ಚಿಕ: ಹತ್ತಾರು ಜನರಿಗೆ ಮಾರ್ಗದರ್ಶಕ ವ್ಯಕ್ತಿಯಾಗಿ ನೇಮಕಗೊಳ್ಳುವ ಯೋಗವಿದೆ. ಅಪರಿಚಿತರ ಹತ್ತಿರ ಯಾವುದೇ ಗೌಪ್ಯತೆ ಹಂಚಿಕೊಳ್ಳಬೇಡಿ. ಪಾಲುದಾರಿಕೆ ವ್ಯವಹಾರಗಳು ಸರಾಗವಾಗಿ ನಡೆದು ಲಾಭವಿರುವುದು.

ಧನು: ಉದ್ಯೋಗಕ್ಕಾಗಿ ಹೆಚ್ಚಿನ ಪರಿಶ್ರಮ ಮತ್ತು ದೇವರ ಕೃಪಾ ಕಟಾಕ್ಷ ಪಡೆಯಬೇಕಾಗುವುದು. ಆಲೋಚನೆಯಂತೆ ನೂತನ ಮನೆ ಕೊಳ್ಳಲು ಹಣದ ವ್ಯವಸ್ಥೆಯಾಗುವುದು. ಹಾಲು ಮಾರಾಟಗಾರರಿಗೆ ಲಾಭ ಇರುವುದು.

ಮಕರ: ಸಮಯವನ್ನು ಅರಿತು ಎಚ್ಚರಿಕೆಯಿಂದ ವರ್ತಿಸುವುದರಿಂದ ಯಶಸ್ಸು ಹಾಗೂ ಅಭಿವೃದ್ಧಿಗೆ ಕಾರಣವಾಗುತ್ತದೆ. ಜೀವನದ ಹಾದಿ ಬದಲಾಗುವುದನ್ನು ಕಾಣುವಿರಿ. ವ್ಯಾಪಾರದಲ್ಲಿ ಸಾಧಾರಣ ಲಾಭ ಕಾಣಲಿದ್ದೀರಿ.

ಕುಂಭ: ಸತ್ಯ ಮಾರ್ಗದಿಂದ ಕಾರ್ಯ ಪ್ರವೃತ್ತರಾದಲ್ಲಿ ಹೆಚ್ಚಿನ ಅಭಿವೃದ್ಧಿ ಅನುಭವಕ್ಕೆ ಬರಲಿದೆ. ಶೀತ ಜ್ವರದಂತಹ ಅನಾರೋಗ್ಯ ಸಂಭವಿಸಬಹುದು. ಯಂತ್ರೋಪಕರಣಗಳ ಮಾರಾಟಗಾರರಿಗೆ ಲಾಭವುಂಟಾಗುವುದು.


ಮೀನ: ಮನೆಯ ಹಿರಿಯರ ಮಧ್ಯಸ್ಥಿಕೆಯಿಂದ ವಿವಾದಗಳು ಬಗೆಹರಿಯುವುದು ಪುನಃ ಮೊದಲಿನಂತೆ ಸಂಬಂಧ ಗಟ್ಟಿಯಾಗಲಿದೆ. ಹತ್ತು ಬಾರಿ ಯೋಚಿಸಿ ನಂತರದಲ್ಲಿ ದೂರ ದೃಷ್ಟಿ ಇಟ್ಟುಕೊಂಡು ಕಾರ್ಯ ಪ್ರವೃತ್ತರಾಗುವಿರಿ.

ಪದಬಂಧ 5390

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಹೊಸ ಬಗೆಯಲ್ಲಿ ಬಂದಿರುವ ಸಂತೋಷ (3)
4.ಸತ್ತವರನ್ನು ಹೂಳುವ ಜಾಗ (3)
5.ಒಪ್ಪಂದ ಪತ್ರವಿದು (4)
6.ಭ್ರಮೆ ಹೀಗೆ ಬಂದಿದೆ (4)
8.ಬಾರಿಸುವ ಸಾಧನವಿಲ್ಲಿ ಉಲ್ಟಾ ಕಾಣುತಿದೆ (2)
10.ಟಪಾಲು ಪಡೆದವನ ಹಿಸ್ಸೆ ತಿರುವುಮುರುವಾಗಿದೆ (2)
13.ಮೂಲ ಆಧಾರ ಅಥವಾ ಬುನಾದಿ (4)
14.ಕೊನೆಗೆ ಹಾರವನ್ನಿಟ್ಟು ಹೋಗಲಾಡಿಸುವುದು (4)
15.ಹಳ್ಳಿಯವನ ಬಾಯಲ್ಲಿ ಗ್ರಹಚಾರ (3)
16.ಮರದ ಬಳಿ ನಡೆದ ಯುದ್ಧ (3)

ಮೇಲಿಂದ ಕೆಳಕ್ಕೆ
1.ಹಳ್ಳಿಗಳಲ್ಲಿ ಕೈಗೊಳ್ಳುವ ಉದ್ಯಮ (6)
2.ಕೆಲಸಕ್ಕೆ ಬಾರದ ಮಾತು (5)
3.ಬಹುಮಾನ ಇಲ್ಲಿದೆ (3)
5.ಗುಡಿಸಲಿರುವ ಜಲಪಾತ (4)
7.ಹೊಟ್ಟೆ ಹೊರೆಯುವಿಕೆ (6)
9.ದೊಡ್ಡ ವಿಪತ್ತು (4)
11.ಸಣ್ಣ ಪ್ರಾಂತ್ಯದ ಮುಖಂಡ (5)
12.ತಿಳುವಳಿಕೆ ಇಲ್ಲಿದೆ (3)



5389ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿದ್ರೋಹ 4.ರಕ್ಷಾಪತ್ರ
6.ಮಿತವ್ಯಯ 8.ಳಪಾಕ
11.ಕನಸು 13.ಪುರಸ್ಕಾರ
17.ಪುಡಿಗಾಸು 18.ರಜನಿ

ಮೇಲಿಂದ ಕೆಳಕ್ಕೆ:
1.ವಿಧ್ಯುಕ್ತ 2.ಹರತಾಳ
3.ನಸವ್ಯ 5.ತ್ರಮಿ
7.ಯಥೇಚ್ಛ 9.ಕನಕ
10.ಹೊಳಪು 12.ಸುರಾಸುರ
14.ರತ್ತೂಡಿ 15.ರಪು
16.ರದನಿ

ಸುಡೊಕು 5776

				2		3		5
3		6	5		8		1	
	4			7	3	2		6
	6						7	9
9		1		8			6	
						1		8
		2	3		7		5	
7	1					6		
		3	4		2		9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5775 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19745
ಇಂದಿನ ಅಂತ್ಯ	19672
▼	72
ದಿನದ ಗರಿಷ್ಠ	19782

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹445

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1840(1840)
ಸೋಯಾ (ರಿಫೈಂಡ್)	₹975(960)
ಸೂರ್ಯಕಾಂತಿ (ರಿಫೈಂಡ್)	₹975(965)
ಪಾಮೋಲಿನ್	₹890(880)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹149.50
ಆರ್‌ಎಸ್‌ಎಸ್-5	₹145
ಗುಡ್ ಲಾಟ್	₹128

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹185;459
ದ್ವಿತಳಿ (ಬಿ.ವಿ)	₹258;580

ಕೊಬ್ಬರಿ ಧಾರಣೆ

ಕೆ.ಆರ್. ಪೇಟೆ (ಇತರ)	₹7750-7750
ತುರುವೇಕೆರೆ	₹9000-9000

ಮುಂಬೈ ಧಾರಣೆ

ಶೇಂಗಾ

24-7-2023

ಜಾವಾ 70/80(ಹೊಸ)	12600-12700
ಜಾವಾ 80/90(ಹೊಸ)	12100-12200
ದಪ್ಪ ಮಧ್ಯಪ್ರದೇಶ(ಹೊಸ)	12100-12200
ದಪ್ಪ ಗುಜರಾತ್(ಹೊಸ)	12900-13000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1850(1850)
ಒಂದು ವಾರದ ಡೆಲಿವರಿ	1845(1845)
ಸೋಯಾ ಕಚ್ಚಾ	935(920)
ಪಾಮ್ ವಾರದ ಡೆಲಿವರಿ	888(878)
ಸೂರ್ಯಕಾಂತಿ ಎಣ್ಣೆ ಕಚ್ಚಾ	930(910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59150(59150)
ಬೆಳ್ಳಿ ಕೆ.ಜಿ 74100(74150)

ಆವರಣದಲ್ಲಿ ಶನಿವಾರದ ಧಾರಣೆ

ಐಟಿಸಿ ಲಿಮಿಟೆಡ್ ಕಂಪನಿಯ ಆಡಳಿತ ಮಂಡಳಿಯಿಂದ ತಾತ್ವಿಕ ಒಪ್ಪಿಗೆ

ಹೋಟೆಲ್ ವಹಿವಾಟು ಪ್ರತ್ಯೇಕ

ನವದೆಹಲಿ/ಕೋಲ್ಕತ್ತ (ಪಿಟಿಐ): ಐಟಿಸಿ ಲಿಮಿಟೆಡ್ ಕಂಪನಿಯು ತನ್ನ ಹೋಟೆಲ್ ವಹಿವಾಟುಗಳನ್ನು ಪ್ರತ್ಯೇಕಿಸಿ, 'ಐಟಿಸಿ ಹೋಟೆಲ್ಸ್ ಲಿಮಿಟೆಡ್' ಹೆಸರಿನ ಕಂಪನಿಯ ಅಧೀನಕ್ಕೆ ತರಲಿದೆ. ಹೋಟೆಲ್ ವಹಿವಾಟುಗಳನ್ನು ಪ್ರತ್ಯೇಕಗೊಳಿಸುವ ಪ್ರಸ್ತಾವಕ್ಕೆ ಐಟಿಸಿ ಲಿಮಿಟೆಡ್‌ನ ಆಡಳಿತ ಮಂಡಳಿಯು ಸೋಮವಾರ ತಾತ್ವಿಕ ಒಪ್ಪಿಗೆ ನೀಡಿದೆ.

ಹೋಟೆಲ್ ವಹಿವಾಟು ಈಚಿನ ವರ್ಷಗಳಲ್ಲಿ ಬೆಳವಣಿಗೆ ಕಂಡಿದೆ. ಹೀಗಾಗಿ ಅದು ತನ್ನದೇ ಆದ ಹಾದಿಯನ್ನು ಕಂಡುಕೊಳ್ಳಲು ಸಿದ್ಧವಾಗಿದೆ ಎಂದು ಐಟಿಸಿ ಹೇಳಿದೆ.

ಐಟಿಸಿ ಹೋಟೆಲ್ಸ್ ಲಿಮಿಟೆಡ್ ಕಂಪನಿಯಲ್ಲಿ ಐಟಿಸಿ ಲಿಮಿಟೆಡ್ ಶೇಕಡ 40ರಷ್ಟು ಷೇರುಗಳನ್ನು ಹೊಂದಿರಲಿದೆ. ಇನ್ನುಳಿದ ಷೇರುಗಳು, ಐಟಿಸಿಯ ಷೇರುದಾರರ ಪಾಲಿಗೆ ಬರಲಿವೆ. 1975ರಲ್ಲಿ ಆರಂಭವಾದ ಐಟಿಸಿ ಹೋಟೆಲ್ಸ್, ಈಗ 120 ಹೋಟೆಲ್‌ಗಳನ್ನು ಹೊಂದಿದೆ.

'ಹೋಟೆಲ್ ವಹಿವಾಟು ಪ್ರತ್ಯೇಕಗೊಳ್ಳುತ್ತಿರುವುದು ಬಹಳ ಮಹತ್ವದ್ದು. ಇದರಿಂದಾಗಿ ಐಟಿಸಿಯ ಬಂಡವಾಳದ ಮೇಲಿನ ವರಮಾನವು ಹೆಚ್ಚಾಗಲಿದೆ' ಎಂದು ಐಐಎಫ್‌ಎಲ್ ಸಂಸ್ಥೆಯ ವಿಶ್ಲೇಷಕ ನೇಮಕುಮಾರ್ ಹೇಳಿದ್ದಾರೆ. ವಹಿವಾಟು ಪ್ರತ್ಯೇಕಿಸುವ ಪ್ರಕ್ರಿಯೆಯು ಒಂಬತ್ತರಿಂದ ಹನ್ನೆರಡು ತಿಂಗಳಲ್ಲಿ ಪೂರ್ಣವಾಗಬಹುದು. ಐಟಿಸಿಯಲ್ಲಿ 100 ಷೇರು ಹೊಂದಿದ್ದರೆ, ಐಟಿಸಿ ಹೋಟೆಲ್ಸ್‌ನ 60 ಷೇರುಗಳು ಸಿಗಬಹುದು ಎಂದು ಅವರು ಅಂದಾಜಿಸಿದರು.

'ಐಟಿಸಿ ಲಿಮಿಟೆಡ್‌ನ ಹೋಟೆಲ್ ವಹಿವಾಟಿಗೆ ಹೆಚ್ಚಿನ ಬಂಡವಾಳದ ಅಗತ್ಯವಿದೆ. ಆದರೆ, ಆ ವಹಿವಾಟಿನಿಂದ ಕಂಪನಿಯ ಒಟ್ಟು ವರಮಾನಕ್ಕೆ ಸಿಗುವ ಪಾಲು ಶೇ 5ಕ್ಕಿಂತ ಕಡಿಮೆ. ಹೋಟೆಲ್ ವಹಿವಾಟನ್ನು ಪ್ರತ್ಯೇಕ ಮಾಡುವುದು ಸ್ವಾಗತಾರ್ಹ ನಡೆ. ಇದು ಕಂಪನಿಯ ಷೇರುದಾರರಿಗೆ ಒಳ್ಳೆಯದನ್ನು ಮಾಡಲಿದೆ' ಎಂದು ಸ್ಯಾಮ್ಕೊ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥೆ ಅಪೂರ್ವಾ ಶೇತ್ ಹೇಳಿದ್ದಾರೆ.

ಕಾಫಿ ಡೇ ಗ್ಲೋಬಲ್ ವಿರುದ್ಧದ ಅರ್ಜಿ ಸ್ವೀಕಾರ

ನವದೆಹಲಿ (ಪಿಟಿಐ): ಜನಪ್ರಿಯ 'ಕೆಫೆ ಕಾಫಿ ಡೇ' ಮಳಿಗೆಗಳನ್ನು ಮುನ್ನಡೆಸುತ್ತಿರುವ ಕಾಫಿ ಡೇ ಗ್ಲೋಬಲ್ ಲಿಮಿಟೆಡ್ (ಸಿಡಿಜಿಎಲ್) ವಿರುದ್ಧ ದಿವಾಳಿ ಸಂಹಿತೆಯ ಪ್ರಕಾರ ಕ್ರಮ ಜರುಗಿಸಬೇಕು ಎಂದು ಕೋರಿ ಸಲ್ಲಿಕೆಯಾಗಿರುವ ಅರ್ಜಿಯನ್ನು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ಬೆಂಗಳೂರು ಪೀಠವು ವಿಚಾರಣೆಗೆ ಸ್ವೀಕರಿಸಿದೆ.

ಸಿಡಿಜಿಎಲ್‌ಗೆ ಸಾಲ ನೀಡಿರುವ ಕಂಪನಿಯೊಂದು, ತನಗೆ ₹94 ಕೋಟಿ ಬರಬೇಕಿದೆ ಎಂದು ಸಲ್ಲಿಸಿರುವ ಅರ್ಜಿಯನ್ನು ಎನ್‌ಸಿಎಲ್‌ಟಿ ವಿಚಾರಣೆಗೆ ಸ್ವೀಕರಿಸಿದೆ ಎಂದು ಸಿಡಿಜಿಎಲ್‌ನ ಮಾತೃಸಂಸ್ಥೆ ಕಾಫಿ ಡೇ ಎಂಟರ್‌ಪ್ರೈಸಸ್ ಲಿಮಿಟೆಡ್ (ಸಿಡಿಇಎಲ್) ಷೇರುಪೇಟೆಗೆ ತಿಳಿಸಿದೆ. ಸಿಡಿಜಿಎಲ್ ಕಂಪನಿಯು ಈ ಅರ್ಜಿಗೆ ಪ್ರತಿಯಾಗಿ ಅಗತ್ಯ ಕಾನೂನು ಕ್ರಮ ಕೈಗೊಳ್ಳಲಿದೆ ಎಂದು ಕೂಡ ಷೇರುಪೇಟೆಗೆ ನೀಡಿರುವ ವಿವರಣೆಯಲ್ಲಿ ತಿಳಿಸಲಾಗಿದೆ. ಸಿಡಿಜಿಎಲ್ ಕಂಪನಿಯು ದೇಶದ 158 ನಗರಗಳಲ್ಲಿ 495 ಕೆಫೆಗಳನ್ನು ಹೊಂದಿದೆ.

ಕೆನರಾ ಬ್ಯಾಂಕ್ ಲಾಭ ಶೇ 75ರಷ್ಟು ಏರಿಕೆ


ಕೆ. ಸತ್ಯನಾರಾಯಣ ರಾಜು

ನವದೆಹಲಿ (ಪಿಟಿಐ): ಕೆನರಾ ಬ್ಯಾಂಕ್‌ನ ಜೂನ್ ತ್ರೈಮಾಸಿಕದ ನಿವ್ವಳ ಲಾಭದಲ್ಲಿ ಶೇಕಡ 75ರಷ್ಟು ಏರಿಕೆ ದಾಖಲಾಗಿದೆ. ಜೂನ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ಲಾಭವು ₹3,535 ಕೋಟಿ ಆಗಿದೆ. ಅಲ್ಲದೆ, ಬ್ಯಾಂಕ್‌ನ ಎನ್‌ಪಿಎ ಪ್ರಮಾಣ ಕಡಿಮೆ ಆಗಿದೆ, ಬಡ್ಡಿ ವರಮಾನವು ಹೆಚ್ಚಾಗಿದೆ.

ಕೆನರಾ ಬ್ಯಾಂಕ್ ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ₹2,022 ಕೋಟಿ ಲಾಭ ಗಳಿಸಿತ್ತು. ಈ ವರ್ಷದ ಜೂನ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ಒಟ್ಟು ವರಮಾನವು ₹29,828 ಕೋಟಿಗೆ ಏರಿಕೆ ಆಗಿದೆ.

ಬ್ಯಾಂಕ್‌ನ ನಿವ್ವಳ ಎನ್‌ಪಿಎ ಪ್ರಮಾಣವು ಶೇ 1.57ಕ್ಕೆ ಇಳಿಕೆಯಾಗಿದೆ. ಇದು ಹಿಂದಿನ ವರ್ಷದ ಜೂನ್ ತ್ರೈಮಾಸಿಕದಲ್ಲಿ ಶೇ 2.48ರಷ್ಟು ಇತ್ತು. ಎನ್‌ಪಿಎ ಕಡಿಮೆ ಆಗಿರುವ ಕಾರಣದಿಂದಾಗಿ, ವಸೂಲಾಗದ ಸಾಲಗಳಿಗಾಗಿ ತೆಗೆದಿರಿಸಬೇಕಿರುವ ಮೊತ್ತವು ಕೂಡ ತಗ್ಗಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಸಾಲ ನೀಡಿಕೆ ಪ್ರಮಾಣವು ಶೇ 10.5ರಷ್ಟು ಹಾಗೂ ಠೇವಣಿಗಳ ಪ್ರಮಾಣವು ಶೇ 8.5ರಷ್ಟು ಹೆಚ್ಚಾಗುವ ನಿರೀಕ್ಷೆ ಇದೆ ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಕೆ. ಸತ್ಯನಾರಾಯಣ ರಾಜು ಅವರು ಹೇಳಿದ್ದಾರೆ.

ಟ್ವಿಟರ್: ಹಕ್ಕಿಯ ಬದಲು 'ಎಕ್ಸ್'

ಸ್ಯಾನ್‌ಫ್ರಾನ್ಸಿಸ್ಕೊ (ಎಎಫ್‌ಪಿ): ಟ್ವಿಟರ್ ಕಂಪನಿಯು ತನ್ನ ಲೋಗೊ ಬದಲಾಯಿಸಿದ್ದು, ನೀಲಿ ಬಣ್ಣದ ಹಕ್ಕಿಯ ಸ್ಥಾನದಲ್ಲಿ ಬಿಳಿ ಬಣ್ಣದ X (ಎಕ್ಸ್) ಬಳಸಲು ಆರಂಭಿಸಿದೆ.

ಟ್ವಿಟರ್ ಕಂಪನಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ನಂತರ, ಇಲಾನ್ ಮಸ್ಕ್ ಅವರು ಕೈಗೊಂಡಿರುವ ಮಹತ್ವದ ತೀರ್ಮಾನಗಳಲ್ಲಿ ಇದು ಕೂಡ ಒಂದು. ಈಗ ಟ್ವಿಟರ್‌ನಲ್ಲಿ ಮಾಡುವ ಪೋಸ್ಟ್‌ಗಳನ್ನು 'X.' ಎಂದು ಕರೆಯಲಾಗುತ್ತದೆ ಎಂದು ಕೂಡ ಮಸ್ಕ್ ಅವರು ತಿಳಿಸಿದ್ದಾರೆ.

ಕಾಳುಮೆಣಸು: ಕಳಸ ಮಾರುಕಟ್ಟೆಯಲ್ಲಿ ಗರಿಷ್ಠ ಧಾರಣೆ


ಕ್ವಿಂಟಲ್‌ಗೆ ₹65 ಸಾವಿರಕ್ಕೆ ಏರಿಕೆ

• ರವಿ ಕೆಳಂಗಡಿ

ಕಳಸ (ಚಿಕ್ಕಮಗಳೂರು): ಕೆಲ ದಿನಗಳ ಹಿಂದೆ ಕೆ.ಜಿ.ಗೆ ₹480ರಿಂದ ₹500 ಇದ್ದ ಕಾಳುಮೆಣಸು ದರ, ದಿಢೀರ್ ಆಗಿ ₹650ಕ್ಕೆ ಏರಿಕೆ ಕಂಡಿದೆ.

ಕಾಳುಮೆಣಸಿನ ಧಾರಣೆ ಕೇರಳದ ಕೊಚ್ಚಿ ಮಾರುಕಟ್ಟೆಯಲ್ಲಿ ಸತತವಾಗಿ ಏರುತ್ತಿದೆ. ಗುಣಮಟ್ಟದ ಕಾಳುಮೆಣಸಿಗೆ ಕೊಚ್ಚಿಯಲ್ಲಿ ಶನಿವಾರ ಗರಿಷ್ಠ ₹540 ಇದ್ದರೆ ಸೋಮವಾರ ಕೆ.ಜಿ.ಯೊಂದಕ್ಕೆ ಗರಿಷ್ಠ ₹570 ಧಾರಣೆ ದೊರೆತಿದೆ. ಆದರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಸೋಮವಾರ ಕೆ.ಜಿ. ಕಾಳುಮೆಣಸಿನ ದರ ಗರಿಷ್ಠ ₹650ಕ್ಕೆ ತಲುಪಿತ್ತು ಎನ್ನುತ್ತಾರೆ ವ್ಯಾಪಾರಸ್ಥರು.

'ಕಳೆದ ವಾರದವರೆಗೂ ತೇವಾಂಶ ಪರೀಕ್ಷಿಸಿ ವ್ಯಾಪಾರ ನಡೆಯುತ್ತಿತ್ತು. ಆದರೆ, ಬೇಡಿಕೆ ಹೆಚ್ಚಿದ್ದರಿಂದ ಈಗ ಎಲ್ಲ ಮಾನದಂಡಗಳನ್ನು ಬಿಟ್ಟು ಖರೀದಿಸಲಾಗುತ್ತಿದೆ. ನಾಲ್ಕು ದಿನಗಳಲ್ಲಿ ಕಳಸ ಒಂದರಿಂದಲೇ 30 ಟನ್‌ಗೂ ಹೆಚ್ಚು ಕಾಳುಮೆಣಸು ಖರೀದಿ ಆಗಿ ಹೊರಗಡೆ ಹೋಗಿದೆ' ಎಂದು ಸ್ಥಳೀಯ ವ್ಯಾಪಾರಿಗಳು ಹೇಳುತ್ತಾರೆ.


ಕಳಸದ ಕಾಫಿ ತೋಟದಲ್ಲಿ ಬೆಳೆದಿರುವ ಕಾಳುಮೆಣಸಿನ ಬಳ್ಳಿ

ಕಾಳುಮೆಣಸಿನ ಆಮದು ಬೆಲೆ ಹೆಚ್ಚಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸುತ್ತಿದೆ ಎಂಬ ವದಂತಿ ಇದೆ. ಇದನ್ನು ತಿಳಿದ ವ್ಯಾಪಾರಿಗಳು ಸಂಗ್ರಹ ಮಾಡುತ್ತಿದ್ದಾರೆ. ದೇಶೀಯವಾಗಿ ಬಹಳಷ್ಟು ಬೇಡಿಕೆ ಇರುವ ಕಾರಣ ವ್ಯಾಪಾರಿಗಳು ಹೆಚ್ಚಿನ ಬೆಲೆ ತೆತ್ತು ಖರೀದಿ ಮಾಡುತ್ತಿದ್ದಾರೆ ಎನ್ನುವುದು ಮಾರುಕಟ್ಟೆ ವಿಶ್ಲೇಷಕರ ಅಭಿಪ್ರಾಯ.

'ಜಾಗತಿಕವಾಗಿ ಕಾಳುಮೆಣಸಿನ ರಫ್ತಿನಲ್ಲಿ ಅಗ್ರಸ್ಥಾನದಲ್ಲಿ ಇರುವ ವಿಯೆಟ್ನಾಂ ದೇಶದಲ್ಲಿ ಸದ್ಯ ಸುಮಾರು 40 ಸಾವಿರ ಟನ್ ಕಾಳುಮೆಣಸಿನ ಸಂಗ್ರಹ ಇದೆ. ಮೂರು ತಿಂಗಳುಗಳಿಂದ ಆಮದು ನಿಲ್ಲಿಸಿದ್ದ ಚೀನಾ ಕೂಡ ಈಗ ಆಮದು ಶುರು ಮಾಡಿದೆ. ಇದರಿಂದ ವಿಯೆಟ್ನಾಂನಲ್ಲಿ ಜೊತೆಗೆ ವಿಶ್ವ ಮಾರುಕಟ್ಟೆಯಲ್ಲಿ ಕಾಳುಮೆಣಸು ಕೊರತೆ ಉಂಟಾಗಿದೆ. ಹೀಗಾಗಿ ಧಾರಣೆ ಒಂದೇ ಸಮನೆ ಏರುತ್ತಿದೆ' ಎಂದು ಮಾರುಕಟ್ಟೆ ಅಧ್ಯಯನ ಮಾಡುವ ಯುವ ಬೆಳೆಗಾರ ಗೌತಹಳ್ಳಿ ಕರಣ್ ಅಭಿಪ್ರಾಯ ಪಡುತ್ತಾರೆ.

ಫೇಸ್‌ಬುಕ್ ಗೆಳೆಯನ ಭೇಟಿಗೆ ತೆರಳಿರುವ ಮಹಿಳೆ

'ಅಂಜು ಭಾರತಕ್ಕೆ ಮರಳುವುದು ನಿಶ್ಚಿತ'

ಪೆಶಾವರ (ಪಿಟಿಐ): ಫೇಸ್‌ಬುಕ್ ಗೆಳೆಯನ ಭೇಟಿಗಾಗಿ ಪಾಕಿಸ್ತಾನಕ್ಕೆ ಬಂದಿರುವ ಭಾರತದ ವಿವಾಹಿತ ಮಹಿಳೆ ವೀಸಾ ಅವಧಿ ಮುಗಿದ ಬಳಿಕ ಆಗಸ್ಟ್ 20ರಂದು ತನ್ನ ದೇಶಕ್ಕೆ ಮರಳಲಿದ್ದಾರೆ ಎಂದು ಅವರ ಸ್ನೇಹಿತ ನಸ್ರುಲ್ಲಾ ಸೋಮವಾರ ತಿಳಿಸಿದ್ದಾರೆ.

ರಾಜಸ್ಥಾನದ ಅಲ್ವಾರ್ ಜಿಲ್ಲೆಯ 34 ವರ್ಷದ ಅಂಜು ಎಂಬುವವರು ಫೇಸ್‌ಬುಕ್ ಗೆಳೆಯ 29 ವರ್ಷದ ನಸ್ರುಲ್ಲಾ ಅವರನ್ನು ಭೇಟಿಯಾಗಲು ಖೈಬರ್ ಪಖ್ತುಂಕ್ವಾ ಪ್ರಾಂತ್ಯದ ಅಪ್ಪರ್ ದಿರ್ ಜಿಲ್ಲೆಗೆ ಪಾಕಿಸ್ತಾನದ ವೀಸಾ ಪಡೆದು ತೆರಳಿದ್ದರು.

'ನಮ್ಮ ಗೆಳೆತನವನ್ನು ಪ್ರೇಮದ ದೃಷ್ಟಿಕೋನದಿಂದ ನೋಡಬೇಡಿ. ನನಗೆ ಅಂಜು ಅವರನ್ನು ಮದುವೆಯಾಗುವ ಉದ್ದೇಶವಿಲ್ಲ. ವೀಸಾ ಅವಧಿ ಮುಗಿದ ಮೇಲೆ ಅಂಜು ಅವರು ಭಾರತಕ್ಕೆ ಮರಳಲಿದ್ದಾರೆ. ಅವರಿಗೆ ಉಳಿದುಕೊಳ್ಳಲು ಮನೆಯಲ್ಲಿ ಪ್ರತ್ಯೇಕ ಕೊಠಡಿ ನೀಡಲಾಗಿದೆ ಮತ್ತು ಜಿಲ್ಲಾಡಳಿತದಿಂದ ಸೂಕ್ತ ಭದ್ರತೆ ಒದಗಿಸಲಾಗಿದೆ' ಎಂದು ನಸ್ರುಲ್ಲಾ ಸುದ್ದಿಸಂಸ್ಥೆಗೆ ಸ್ಪಷ್ಟಪಡಿಸಿದ್ದಾರೆ.

ಜೈಪುರಕ್ಕೆ ತೆರಳುವುದಾಗಿ ಹೇಳಿ ಅಂಜು ಅವರು ಗುರುವಾರ ಮನೆಯಿಂದ ಹೊರಟಿದ್ದರು. ಬಳಿಕ ತಾನು ಲಾಹೋರ್‌ನಲ್ಲಿರುವುದಾಗಿ ಸಹೋದರಿಗೆ ಕರೆ ಮಾಡಿ ತಿಳಿಸಿದ್ದರು ಎಂದು ಕುಟುಂಬದ ಮೂಲಗಳು ತಿಳಿಸಿವೆ. 2019ರಲ್ಲಿ ಅಂಜು ಅವರಿಗೆ ಫೇಸ್‌ಬುಕ್‌ನಲ್ಲಿ ನಸ್ರುಲ್ಲಾ ಅವರ ಪರಿಚಯವಾಗಿತ್ತು. ಅಂಜು ಆಗಮನದ ನಿರೀಕ್ಷೆಯಲ್ಲಿ ಪತಿ ಅರವಿಂದ್, 15 ವರ್ಷದ ಮಗಳು ಹಾಗೂ ಆರು ವರ್ಷದ ಮಗ ಇದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-43200
ಹಳತು	46000-48000
ಕಾರ್ಕಳ	
ಹೊಸತು	30000-43200
ಹಳತು	40000-48000
ಕುಮಟಾ	
ಚಿಪ್ಪು	31569-34169
ಕೋಕ	22509-33999
ಫ್ಯಾಕ್ಟರಿ	14509-22829
ಹಳೆಚಾಲಿ	38699-41229
ಹೊಸಚಾಲಿ	38269-41009
ಸಾಗರ	
ಬಿಳಿಗೋಟು	25119-33949
ಚಾಲಿ	36599-39699
ಕೋಕ	28419-36001
ಕೆಂಪುಗೋಟು	30699-40399
ರಾಶಿ	45569-54509
ಸಿಪ್ಪೆಗೋಟು	17010-22466
ಶಿವಮೊಗ್ಗ	
ಬೆಟ್ಟೆ	50619-53599
ಗೊರಬಲು	23991-43599
ರಾಶಿ	39711-56212
ಸರಕು	51699-76009
ಸಿದ್ದಾಪುರ	
ಬಿಳಿಗೋಟು	31899-34219
ಚಾಲಿ	37809-40600
ಕೋಕ	28899-34399
ಕೆಂಪುಗೋಟು	33812-36099
ರಾಶಿ	51739-52839
ತಟ್ಟಿಬೆಟ್ಟೆ	41569-45099
ಶಿರಸಿ	
ಬೆಟ್ಟೆ	43099-48408
ಬಿಳಿಗೋಟು	30699-35399
ಚಾಲಿ	36011-41211
ಕೆಂಪುಗೋಟು	32629-37369
ರಾಶಿ	45639-51199

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ

	ಮುದ್ರಮನೆ
ಎಪಿ	13,900
ಎಸಿ	7,140
ಆರ್‌ಪಿ	10,100
ಆರ್‌ಸಿ	6,090

ಪಿ.ಎಫ್: ಶೇ 8.15 ಬಡ್ಡಿಗೆ ಸಮ್ಮತಿ

ನವದೆಹಲಿ (ಪಿಟಿಐ): 2022–23ನೆಯ ಹಣಕಾಸು ವರ್ಷಕ್ಕೆ ಪಿ.ಎಫ್. ಚಂದಾದಾರರಿಗೆ ಶೇಕಡ 8.15ರಷ್ಟು ಬಡ್ಡಿ ನೀಡುವ ಶಿಫಾರಸಿಗೆ ಕೇಂದ್ರ ಹಣಕಾಸು ಸಚಿವಾಲಯವು ಅನುಮೋದನೆ ನೀಡಿದೆ.

ನೌಕರರ ಭವಿಷ್ಯ ನಿಧಿ ಸಂಘಟನೆಯು ಈ ವರ್ಷದ ಮಾರ್ಚ್ 28ರಂದು ನಡೆದ ಸಭೆಯಲ್ಲಿ, ಬಡ್ಡಿ ದರವನ್ನು ಶೇ 8.15ಕ್ಕೆ ನಿಗದಿ ಮಾಡಿತ್ತು.

ಸೋಮವಾರ ಆದೇಶವೊಂದನ್ನು ಹೊರಡಿಸಿರುವ ಸಂಘಟನೆಯು, ಕ್ಷೇತ್ರ ಅಧಿಕಾರಿಗಳು ಶೇ 8.15ರಷ್ಟು ಬಡ್ಡಿಯನ್ನು ಪಿ.ಎಫ್. ಚಂದಾದಾರರಿಗೆ ಪಾವತಿಸಬೇಕು ಎಂದು ಸೂಚಿಸಿದೆ.

ಸಾಲಗಾರರ ವಿರುದ್ಧ ಕಠಿಣ ಕ್ರಮ ಬೇಡ: ನಿರ್ಮಲಾ

ನವದೆಹಲಿ (ಪಿಟಿಐ): ಸಾಲ ಮರುಪಾವತಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬಾರದು ಎಂದು ಖಾಸಗಿ ಹಾಗೂ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಗೆ ಸೂಚನೆ ನೀಡಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹೇಳಿದ್ದಾರೆ.

ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ ಈ ವಿಚಾರ ತಿಳಿಸಿದ್ದಾರೆ. 'ಕೆಲವು ಬ್ಯಾಂಕ್‌ಗಳು ಸಾಲದ ಮರುಪಾವತಿಯ ವಿಚಾರದಲ್ಲಿ ಅದೆಷ್ಟು ನಿರ್ದಾಕ್ಷಿಣ್ಯವಾಗಿ ವರ್ತಿಸಿವೆ ಎಂಬ ಬಗ್ಗೆ ನಾನು ದೂರುಗಳನ್ನು ಕೇಳಿದ್ದೇನೆ. ಸಾಲ ಮರುಪಾವತಿಗೆ ಸಂಬಂಧಿಸಿದ ವಿಚಾರದಲ್ಲಿ ಬ್ಯಾಂಕ್‌ಗಳು ಮಾನವೀಯವಾಗಿ, ಸ್ಪಂದನಶೀಲವಾಗಿ ವರ್ತಿಸಬೇಕು ಎಂದು ಸೂಚನೆ ನೀಡಲಾಗಿದೆ' ಎಂದು ನಿರ್ಮಲಾ ಸೀತಾರಾಮನ್ ಅವರು ಹೇಳಿದ್ದಾರೆ.

ಪಾಕ್– ಅಮೆರಿಕ ಒಪ್ಪಂದ

ಇಸ್ಲಾಮಾಬಾದ್ (ಪಿಟಿಐ): ರಕ್ಷಣಾ ಕ್ಷೇತ್ರ ಸೇರಿದಂತೆ ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟು ವೃದ್ಧಿಸುವ ನಿಟ್ಟಿನಲ್ಲಿ ಪಾಕಿಸ್ತಾನ ಮತ್ತು ಅಮೆರಿಕ ನಡುವೆ ಸೋಮವಾರ ಒಪ್ಪಂದ ಏರ್ಪಟ್ಟಿದೆ.

ಯುಎಸ್ ಸೆಂಟ್ರಲ್ ಕಮಾಂಡ್ ಮುಖ್ಯಸ್ಥ ಜನರಲ್ ಮಿಷೆಲ್ ಎರಿಕ್ ಕುರಿಲ್ಲ ಅವರು ಪಾಕಿಸ್ತಾನದ ಸೇನಾ ಮುಖ್ಯಸ್ಥ ಜನರಲ್ ಮುನೀರ್ ಜೊತೆ ಸಭೆ ನಡೆಸಿ ಒಪ್ಪಂದ ಮಾಡಿಕೊಂಡರು.

ಬೆಂಗಳೂರು–ಆಸ್ಟ್ರೇಲಿಯಾ: ಅಕ್ಟೋಬರ್‌ನಿಂದ 26 ನೇರ ವಿಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ನಂತರದಲ್ಲಿ ಭಾರತದಿಂದ ಆಸ್ಟ್ರೇಲಿಯಾಕ್ಕೆ ಭೇಟಿ ನೀಡುವವರ ಪ್ರಮಾಣ ಶೇ 2.3ರಷ್ಟು ಹೆಚ್ಚಾಗಿದ್ದು, ಅಕ್ಟೋಬರ್‌ನಿಂದ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ವಾರಕ್ಕೆ 26 ವಿಮಾನಗಳು ನೇರ ಹಾರಾಟ ನಡೆಸಲಿವೆ' ಎಂದು ಆಸ್ಟ್ರೇಲಿಯಾ ಪ್ರವಾಸೋದ್ಯಮದ ಭಾರತ ಮತ್ತು ಕೊಲ್ಲಿ ರಾಷ್ಟ್ರಗಳ ವ್ಯವಸ್ಥಾಪಕ ನಿಶಾಂತ್ ಕಾಶಿಕರ್ ತಿಳಿಸಿದರು.

ಆಸ್ಟ್ರೇಲಿಯಾ ಪ್ರವಾಸೋದ್ಯಮ ಇಲಾಖೆ ಆಯೋಜಿಸಿರುವ 'ಆಸ್ಟ್ರೇಲಿಯಾ ಮಾರ್ಕೆಟ್ ಪ್ಲಸ್ ಇಂಡಿಯಾ'ದ 18ನೇ ಆವೃತ್ತಿ ಕುರಿತು ಅವರು ಮಾಹಿತಿ ನೀಡಿದರು.

'ಸರಾಸರಿ 2 ವಾರಗಳ ಭೇಟಿಗೆ ಈ ಹಿಂದೆ 2 ಸಾವಿರ ಆಸ್ಟ್ರೇಲಿಯಾ ಡಾಲರ್ ಖರ್ಚು ಮಾಡುತ್ತಿದ್ದ ಭಾರತೀಯರು ಈಗ 4ರಿಂದ 5 ಸಾವಿರ ಖರ್ಚು ಮಾಡುತ್ತಿದ್ದಾರೆ. 2020ಕ್ಕೂ ಮೊದಲು ವಾರಕ್ಕೆ ಏಳು ವಿಮಾನಗಳು ಬೆಂಗಳೂರಿನಿಂದ ಆಸ್ಟ್ರೇಲಿಯಾಕ್ಕೆ ನೇರ ಸಂಪರ್ಕ ಕಲ್ಪಿಸುತ್ತಿದ್ದವು. ಅವುಗಳ ಸಂಖ್ಯೆ ಈಗ 22ಕ್ಕೆ ಏರಿಕೆಯಾಗಿದೆ' ಎಂದು ವಿವರಿಸಿದರು.

'ಆಸ್ಟ್ರೇಲಿಯಾಕ್ಕೆ ಭೇಟಿ ನೀಡುವವರಿಗೆ ಅಲ್ಲಿನ ನೈಸರ್ಗಿಕ ಸೌಂದರ್ಯ, ಸಾಗರದ ಪ್ರವಾಸೋದ್ಯಮ, ಆಹಾರದ ವೈವಿಧ್ಯತೆ, ಕ್ರಿಕೆಟ್ ಪ್ರವಾಸೋದ್ಯದ ಜತೆಗೆ ಸುರಕ್ಷತೆಯನ್ನೂ ಖಾತ್ರಿಪಡಿಸಲಾಗುತ್ತಿದೆ. ಮಧುಚಂದ್ರಕ್ಕಾಗಿ ಭಾರತದ ಯುವ ದಂಪತಿಗಳು ಆಸ್ಟ್ರೇಲಿಯಾವನ್ನು ಹೆಚ್ಚಾಗಿ ಆಯ್ಕೆ ಮಾಡುತ್ತಿರುವುದೂ ಪ್ರವಾಸಿಗರ ಸಂಖ್ಯೆ ಹೆಚ್ಚಳಕ್ಕೆ ಕಾರಣವಾಗಿದೆ. ಪ್ರವಾಸಿಗರಿಗೆ ಸೌಲಭ್ಯಗಳನ್ನು ವಿವರಿಸಲು ಆಸ್ಟ್ರೇಲಿಯಾದಿಂದ ವಿವಿಧ ಪ್ರವಾಸೋದ್ಯಮ ತಾಣಗಳ 110 ಪ್ರತಿನಿಧಿಗಳು ಆಸ್ಟ್ರೇಲಿಯಾ ಮಾರ್ಕೆಟ್ ಪ್ಲಸ್ ಇಂಡಿಯಾದಲ್ಲಿ ಪಾಲ್ಗೊಂಡಿದ್ದಾರೆ. ಆಸ್ಟ್ರೇಲಿಯಾದ ಎಂಟು ಪ್ರಾಂತ್ಯಗಳಲ್ಲಿರುವ ಪ್ರವಾಸಿ ತಾಣಗಳು ಹಾಗೂ ಸೌಲಭ್ಯಗಳ ಕುರಿತು ಭಾರತದಲ್ಲಿರುವ ಪ್ರವಾಸಿ ಏಜೆಂಟರಿಗೆ ಮಾಹಿತಿ ನೀಡುವ ಅಭಿಯಾನ ಇದಾಗಿದೆ' ಎಂದು ನಿಶಾಂತ್ ತಿಳಿಸಿದರು.

ಮೇಘಾಲಯ ಸಿ.ಎಂ ಕಚೇರಿ ಮೇಲೆ ಕಲ್ಲು ತೂರಾಟ: ಪೊಲೀಸರಿಗೆ ಗಾಯ

ಶಿಲ್ಲಾಂಗ್ (ಪಿಟಿಐ): ಪಶ್ಚಿಮ ಮೇಘಾಲಯದ ತುರ ಪಟ್ಟಣದಲ್ಲಿ ಇರುವ ಮುಖ್ಯಮಂತ್ರಿ ಕಾನ್ರಾಡ್ ಕೆ. ಸಂಗ್ಮಾ ಅವರ ಕಚೇರಿಯ ಮೇಲೆ ಗುಂಪೊಂದು ಕಲ್ಲು ತೂರಾಟ ನಡೆಸಿದ್ದು, ಮಾಡಿದ್ದು, ಕಲ್ಲೇಟಿನಿಂದ ಐವರು ಪೊಲೀಸರು ಗಾಯಗೊಂಡಿದ್ದಾರೆ.

ತುರ ಅನ್ನು ರಾಜ್ಯದ ಚಳಿಗಾಲದ ರಾಜಧಾನಿ ಮಾಡಬೇಕು ಎಂದು ಪ್ರತಿಭಟಿಸುತ್ತಿದ್ದ ಗರೊ ಹಿಲ್ಸ್ ರಾಜ್ಯ ಜನಾಂದೋಲನ ಸಮಿತಿ (ಜಿಎಚ್‌ಎಸ್‌ಎಂಸಿ) ಮತ್ತು ಎಸಿಎಚ್‌ಐಕೆ ಪ್ರತಿನಿಧಿಗಳ ಜೊತೆಗೆ ಮುಖ್ಯಮಂತ್ರಿ ಚರ್ಚಿಸುವಾಗಲೇ ದಾಂದಲೆ ನಡೆದಿದೆ.

ಸಂಗ್ಮಾ ಅವರಿಗೆ ಯಾವುದೇ ಪೆಟ್ಟಾಗಿಲ್ಲ. ಕಚೇರಿಯನ್ನು ನೂರಕ್ಕೂ ಅಧಿಕ ಸಂಖ್ಯೆಯ ಪ್ರತಿಭಟನಕಾರರು ಸುತ್ತುವರಿದಿದ್ದಾರೆ. ತಕ್ಷಣದಿಂದ ಜಾರಿಗೆ ಬರುವಂತೆ ಪಟ್ಟಣದಲ್ಲಿ ರಾತ್ರಿ ಕರ್ಫ್ಯೂ ಜಾರಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಾಯಗೊಂಡಿರುವ ಭದ್ರತಾ ಸಿಬ್ಬಂದಿಗೆ ಮುಖ್ಯಮಂತ್ರಿ ಅವರು ತಲಾ ₹ 50 ಸಾವಿರ ಪರಿಹಾರ ಘೋಷಿಸಿದ್ದು, ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಲಿದೆ ಎಂದು ಭರವಸೆ ನೀಡಿದ್ದಾರೆ.

ಗುಂಪು ಪ್ರತಿಭಟನೆಗೆ ಮುಂದಾದಾಗ ಸ್ಥಳದಲ್ಲಿದ್ದ ಪೊಲೀಸರು ಪರಿಸ್ಥಿತಿ ನಿಯಂತ್ರಿಸಲು ಅಶ್ರುವಾಯು ಪ್ರಯೋಗಿಸಿದರು ಎಂದು ಸಿ.ಎಂ ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದರು.

ರಷ್ಯಾ ಮೇಲೆ ಉಕ್ರೇನ್ ಡ್ರೋನ್ ದಾಳಿ

ಕೀವ್ (ಎಪಿ): ರಷ್ಯಾ ರಾಜಧಾನಿ ಮಾಸ್ಕೊ ಮೇಲೆ ಉಕ್ರೇನ್ ಸೋಮವಾರ ಮುಂಜಾನೆ ಡ್ರೋನ್ ದಾಳಿ ನಡೆಸಿದೆ. ಇದಕ್ಕೆ ಪ್ರತಿಯಾಗಿ ರಷ್ಯಾ ದಕ್ಷಿಣ ಉಕ್ರೇನ್‌ನ ಬಂದರುಗಳ ಮೂಲಸೌಕರ್ಯಗಳ ಮೇಲೆ ವೈಮಾನಿಕ ದಾಳಿ ನಡೆಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಡ್ರೋನ್ ಎರಡು ವಸತಿ ರಹಿತ ಕಟ್ಟಡಗಳ ಮೇಲೆ ದಾಳಿ ನಡೆಸಿದ್ದು, ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ಮಾಸ್ಕೊ ಮೇಯರ್ ಸೊಬ್ಯಾನಿನ್ ತಿಳಿಸಿದ್ದಾರೆ.

ಒಂದು ಡ್ರೋನ್ ಕೊಮ್‌ಸೊಮೊಲ್‌ಸ್ಕೈ ಹೆದ್ದಾರಿ ಸಮೀಪ ಬಿದ್ದಿದೆ. ಅಂಗಡಿಯ ಕಿಟಕಿಗಳು ಮತ್ತು ಮನೆಯೊಂದರ ಚಾವಣಿಗೆ ಹಾನಿಯಾಗಿದೆ ಎಂದು ರಷ್ಯಾ ಮಾಧ್ಯಮವೊಂದು ವರದಿ ಮಾಡಿದೆ. ರಕ್ಷಣಾ ಸಚಿವಾಲಯದ ಕೇಂದ್ರ ಕಚೇರಿಯನ್ನೇ ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿತ್ತೇ ಎಂದು ತಕ್ಷಣಕ್ಕೆ ಸ್ಪಷ್ಟವಾಗಿಲ್ಲ.

ಮತ್ತೊಂದು ಡ್ರೋನ್, ದಕ್ಷಿಣ ಮಾಸ್ಕೊ ಕಚೇರಿಯೊಂದರ ಮೇಲೆ ದಾಳಿ ನಡೆಸಿದೆ. ಹಲವು ಮಹಡಿಗಳಿಗೆ ಹಾನಿಯಾಗಿದೆ. ತುರ್ತು ರಕ್ಷಣಾ ಪಡೆಯು ಸ್ಥಳದಲ್ಲಿ ಪರಿಶೀಲನೆ ನಡೆಸುತ್ತಿದೆ. ತಕ್ಷಣಕ್ಕೆ ಉಕ್ರೇನ್ ಅಧಿಕಾರಿಗಳು ದಾಳಿಯ ಹೊಣೆ ಹೊತ್ತಿಲ್ಲ.

ಇಮ್ರಾನ್ ಬಂಧನಕ್ಕೆ 'ಸುಪ್ರೀಂ' ತಡೆ

ಇಸ್ಲಾಮಾಬಾದ್ (ಪಿಟಿಐ): ಬಲೂಚಿಸ್ತಾನದ ಹಿರಿಯ ವಕೀಲ ರಜಾಖ್ ಶಾರ್ ಅವರ ಹತ್ಯೆ ಪ್ರಕರಣದಲ್ಲಿ ಆರೋಪಿಯಾಗಿರುವ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಆಗಸ್ಟ್ 9ರ ವರೆಗೆ ಬಂಧಿಸದಂತೆ ತನಿಖಾ ಸಂಸ್ಥೆಗಳಿಗೆ ಸುಪ್ರೀಂ ಕೋರ್ಟ್ ಸೋಮವಾರ ತಡೆ ವಿಧಿಸಿದೆ.

ತಮ್ಮ ವಿರುದ್ಧ ದಾಖಲಾಗಿರುವ ಕೊಲೆ ಪ್ರಕರಣದ ರದ್ದತಿ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿರುವ ಇಮ್ರಾನ್, ವಿಚಾರಣೆಗೆಂದು ಸೋಮವಾರ ಹಾಜರಾಗಿದ್ದರು. ಖಾನ್ ಅವರನ್ನು ಬಂಧಿಸದಂತೆ ನ್ಯಾಯಮೂರ್ತಿ ಯಹ್ಯ ಅಫ್ರಿದಿ ಅವರ ನೇತೃತ್ವದ ತ್ರಿಸದಸ್ಯ ಪೀಠವು ವಿಚಾರಣೆ ವೇಳೆ ತನಿಖಾ ಸಂಸ್ಥೆಗಳಿಗೆ ನಿರ್ದೇಶನ ನೀಡಿತು.

ಬಲೂಚಿಸ್ತಾನ ಹೈಕೋರ್ಟ್‌ನಲ್ಲಿ ನಿಗದಿಯಾಗಿದ್ದ ಪ್ರಮುಖ ಪ್ರಕರಣವೊಂದರಲ್ಲಿ ವಾದ ಮಂಡಿಸಲು ತೆರಳುತ್ತಿದ್ದ ವಕೀಲ ರಜಾಖ್ ಶಾರ್ ಅವರನ್ನು ಹತ್ಯೆ ಮಾಡಲಾಗಿತ್ತು.





ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಪ್ರಧಾನಿ ಮೋದಿ ಅವರು ಹೇಳಿಕೆ ನೀಡಬೇಕು ಎಂದು ಆಗ್ರಹಿಸಿ ಸಂಸತ್ ಆವರಣದ ಗಾಂಧೀಜಿ ಪ್ರತಿಮೆ ಮುಂಭಾಗ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಪ್ರತಿಪಕ್ಷಗಳ ನಾಯಕರು ಪ್ರತಿಭಟನೆ ನಡೆಸಿದರು (ಎಡಚಿತ್ರ). ರಾಜಸ್ಥಾನದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಟ್ಟುವಲ್ಲಿ ಮುಖ್ಯಮಂತ್ರಿ ಅಶೋಕ ಗೆಹಲೋತ್ ನೇತೃತ್ವದ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ ಬಿಜೆಪಿ ಸಂಸದರು ಹಾಗೂ ಪಕ್ಷದ ನಾಯಕರು ಪ್ರತಿಭಟಿಸಿದರುರ —ಪಿಟಿಐ ಚಿತ್ರ

ಮಣಿಪುರ ಹಿಂಸಾಚಾರ: ಪ್ರಧಾನಿ ಹೇಳಿಕೆಗೆ 'ಇಂಡಿಯಾ' ಬಿಗಿಪಟ್ಟು • ಫಲಪ್ರದವಾಗದ ರಾಜನಾಥ್ ಸಿಂಗ್ ಮಾತುಕತೆ

ಸಂಸತ್ ಕಲಾಪ ನುಂಗಿದ ಸಂಘರ್ಷ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಣಿಪುರ ಹಿಂಸಾಚಾರದ ಬಗ್ಗೆ ಸಂಸತ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿಕೆ ನೀಡಬೇಕೆಂಬ ನಿಲುವಿಗೆ ಪ್ರತಿಪಕ್ಷಗಳ ಮೈತ್ರಿಕೂಟವಾದ 'ಇಂಡಿಯಾ' ಪಟ್ಟುಹಿಡಿದಿದ್ದರಿಂದ ಸೋಮವಾರವೂ ಉಭಯ ಸದನಗಳ ಕಲಾಪಕ್ಕೆ ಅಡ್ಡಿಯಾಯಿತು.

ಮುಂಗಾರು ಅಧಿವೇಶನದ ಮೂರನೇ ದಿನವೂ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ 'ಇಂಡಿಯಾ' ಮತ್ತು ಆಡಳಿತಾರೂಢ ಬಿಜೆಪಿ ನಡುವೆ ಮಣಿಪುರ ಸಂಘರ್ಷವು ವಾಗ್ವಾದಕ್ಕೆ ಕಾರಣವಾಯಿತು. ಪ್ರತಿಪಕ್ಷಗಳು ಬಿಗಿಪಟ್ಟು ಸಡಿಲಿಸಲಿಲ್ಲ. ಮತ್ತೊಂದೆಡೆ ಬಿಜೆಪಿಯೂ ಬೇಡಿಕೆಗೆ ಮಣಿಯಲಿಲ್ಲ. ಗದ್ದಲ ಮುಂದುವರಿದ ಕಾರಣ ಕಲಾಪವನ್ನು ಮಂಗಳವಾರಕ್ಕೆ ಮುಂದೂಡಲಾಯಿತು.

ಸಂಸತ್‌ನ ಒಳಗೆ ನಡೆದ ಹೋರಾಟವು ಬಳಿಕ ಹೊರಗೆ ಪ್ರತಿಧ್ವನಿಸಿತು. ಪ್ರಧಾನಿ ಹೇಳಿಕೆಗೆ ಆಗ್ರಹಿಸಿ ಗಾಂಧೀಜಿ ಪ್ರತಿಮೆ ಮುಂಭಾಗ 'ಇಂಡಿಯಾ' ಪ್ರತಿಭಟನೆ ನಡೆಸಿತು. ಇದಕ್ಕೆ ಪ್ರತಿಯಾಗಿ ಪಶ್ಚಿಮ ಬಂಗಾಳ ಮತ್ತು ರಾಜಸ್ಥಾನದಲ್ಲಿ ನಡೆದಿರುವ ಮಹಿಳಾ ದೌರ್ಜನ್ಯ ವಿಷಯವನ್ನು ಮುಂದಿಟ್ಟುಕೊಂಡು ಬಿಜೆಪಿಯೂ ಪ್ರತಿಭಟನೆ ನಡೆಸಿತು.

ಅಮಿತ್ ಶಾ ಮನವಿ: ಗೃಹ ಸಚಿವ ಅಮಿತ್ ಶಾ ಅವರು, 'ಸಂಸತ್‌ನಲ್ಲಿ ಕಣಿವೆ ರಾಜ್ಯದ ಸಂಘರ್ಷ ಕುರಿತ ಚರ್ಚೆಗೆ ಕೇಂದ್ರ ಸರ್ಕಾರ ಸಿದ್ಧವಿದೆ. ಹಾಗಾಗಿ, ಅನಗತ್ಯ ಗದ್ದಲ ಸೃಷ್ಟಿಸುವುದು ಸರಿಯಲ್ಲ' ಎಂದು ಲೋಕಸಭೆಯಲ್ಲಿ ಪ್ರಕಟಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ವಿರೋಧ ಪಕ್ಷಗಳ ನಾಯಕರು, 'ಚರ್ಚೆಗೂ ಮೊದಲು ಮೋದಿ ಅವರು ಹೇಳಿಕೆ ನೀಡಬೇಕು' ಎಂದು ಬೇಡಿಕೆ ಮುಂದಿಟ್ಟರು.

'ಸರ್ಕಾರ ಚರ್ಚೆಗೆ ಬದ್ಧವಿದ್ದರೂ ವಿರೋಧ ಪಕ್ಷಗಳು ಸಿದ್ಧವಿಲ್ಲದಿರುವುದು ನನಗೆ ಅಚ್ಚರಿ ಮೂಡಿಸಿದೆ' ಎಂದ ಶಾ ಅವರು, 'ಮಣಿಪುರಕ್ಕೆ ಸಂಬಂಧಿಸಿದಂತೆ ದೇಶದ ಜನರಿಗೆ ಸತ್ಯ ತಿಳಿಯಬೇಕಿದೆ. ಇದಕ್ಕೆ ಅವಕಾಶ ನೀಡಬೇಕು' ಎಂದು ಕೋರಿದರು.

ಫಲಪ್ರದವಾಗದ ಮಾತುಕತೆ: ಎರಡು ದಿನಗಳ ಕಾಲ ಕಲಾಪವು ಗದ್ದಲ, ಕೋಲಾಹಲದಲ್ಲಿ ಕೊಚ್ಚಿಹೋಗಿದ್ದರಿಂದ ಪ್ರತಿಪಕ್ಷಗಳ ನಾಯಕರ ಜೊತೆಗೆ ಮಾತುಕತೆ ನಡೆಸಲು ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರಿಗೆ ಸರ್ಕಾರ ಜವಾಬ್ದಾರಿ ನೀಡಿತ್ತು. ಆದರೆ, ಈ ಮಾತುಕತೆಯೂ ಫಲಪ್ರದವಾಗಿಲ್ಲ.

'ಭಾನುವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಜೊತೆಗೆ ರಾಜನಾಥ ಸಿಂಗ್ ಅವರು ಚರ್ಚಿಸಿದ್ದರು. ಮೋದಿ ಹೇಳಿಕೆ ನೀಡದ ಹೊರತು ನಾವು ಚರ್ಚೆಗೆ ಸಿದ್ಧವಿಲ್ಲವೆಂದು ಖರ್ಗೆ ಬಿಗಿಪಟ್ಟು ಹಿಡಿದಿದ್ದಾರೆ. ತೃಣಮೂಲ ಕಾಂಗ್ರೆಸ್ ಮತ್ತು ಡಿಎಂಕೆ ನಾಯಕರು ಇದೇ ಉತ್ತರ ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಸರ್ಕಾರಕ್ಕೆ ಸಂವೇದನೆ ಇಲ್ಲ: ಸುದ್ದಿಗಾರರೊಂದಿಗೆ ಮಾತನಾಡಿದ ಮಲ್ಲಿಕಾರ್ಜುನ ಖರ್ಗೆ ಅವರು, 'ಕೇಂದ್ರ ಸರ್ಕಾರವು ಸಂವೇದನಾ ರಹಿತವಾಗಿ ವರ್ತಿಸುತ್ತಿದೆ' ಎಂದು ಆಪಾದಿಸಿದರು.

'ಸದನದಲ್ಲಿ ಚರ್ಚೆಗೆ ನಾವು ಸಿದ್ಧರಿದ್ದೇವೆ. ಆದರೆ, ಇದಕ್ಕೂ ಮೊದಲು ಪ್ರಧಾನಿ ಅವರ ಹೇಳಿಕೆ ಬಯಸಿದ್ದೇವೆ. ಮೋದಿ ಅವರು ಹೊರಗಡೆ ಈ ವಿಷಯದ ಬಗ್ಗೆ ಮಾತನಾಡಿದ್ದಾರೆ. ಸದನದಲ್ಲಿ ಮಾತನಾಡಲು ಹಿಂಜರಿಕೆ ತೋರುತ್ತಿದ್ದಾರೆ. ಇದು ಸಂಸದೀಯ ವ್ಯವಸ್ಥೆಗೆ ಮಾಡುವ ಅಪಮಾನವಾಗಿದೆ' ಎಂದು ಟೀಕಿಸಿದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್, 'ಸಂಸತ್‌ನಲ್ಲಿ ಹೇಳಿಕೆ ನೀಡಲು ಮೋದಿ ಅವರಿಗೆ ಹಿಂಜರಿಕೆ ಏಕೆ' ಎಂದು ಪ್ರಶ್ನಿಸಿದ್ದಾರೆ.

ಮಸೂದೆ ಮಂಡನೆ: 1948ರ ದಂತವೈದ್ಯ ಕಾಯ್ದೆ ರದ್ದುಪಡಿಸಿ ರಾಷ್ಟ್ರೀಯ ದಂತ ಆಯೋಗ (ಎನ್‌ಡಿಸಿ) ರಚನೆಗೆ ಅವಕಾಶ ನೀಡುವ ರಾಷ್ಟ್ರೀಯ ದಂತ ಆಯೋಗ ಮಸೂದೆ–2023 ಅನ್ನು ಸರ್ಕಾರ ಲೋಕಸಭೆಯಲ್ಲಿ ಮಂಡಿಸಿತು. ಜೊತೆಗೆ, ರಾಷ್ಟ್ರೀಯ ನರ್ಸಿಂಗ್ ಮತ್ತು ಪ್ರಸೂತಿ ಆಯೋಗ ಮಸೂದೆ–2023 ಮಂಡಿಸಿತು.

ಮಸೂದೆ ವಾಪಸ್: ಡಿಎನ್‌ಎ ತಂತ್ರಜ್ಞಾನ (ಬಳಕೆ ಮತ್ತು ಅಪ್ಲಿಕೇಶನ್) ನಿಯಂತ್ರಣ ಮಸೂದೆ- 2019 ಅನ್ನು ಕೇಂದ್ರ ಸರ್ಕಾರ ಹಿಂಪಡೆದಿದೆ.

ಸಂತ್ರಸ್ತರು, ಅಪರಾಧಿಗಳು, ಶಂಕಿತರು, ವಿಚಾರಣಾಧೀನ ಕೈದಿಗಳು, ನಾಪತ್ತೆಯಾದವರು ಮತ್ತು ಅಪರಿಚಿತ ಮೃತದೇಹಗಳ ಗುರುತು ಪತ್ತೆಗಾಗಿ ಡಿಎನ್‌ಎ ತಂತ್ರಜ್ಞಾನ ಬಳಕೆ ಮಾಡುವುದನ್ನು ನಿಯಂತ್ರಿಸುವುದು ಈ ಮಸೂದೆಯ ಉದ್ದೇಶವಾಗಿತ್ತು.

ಈ ಮಸೂದೆಯನ್ನು 2019 ಜುಲೈ 8ರಂದು ಪರಿಚಯಿಸಲಾಗಿತ್ತು.

ಎಎಪಿ ಸಂಸದ ಸಂಜಯ್ ಸಿಂಗ್ ಅಮಾನತು

ನವದೆಹಲಿ (ಪಿಟಿಐ): ಅಶಿಸ್ತಿನ ವರ್ತನೆ ತೋರಿದ ಆರೋಪದ ಮೇಲೆ ಮುಂಗಾರು ಅಧಿವೇಶನ ಮುಗಿಯುವವರೆಗೂ ರಾಜ್ಯಸಭೆಯ ಕಲಾಪದಿಂದ ಎಎಪಿ ಸಂಸದ ಸಂಜಯ್ ಸಿಂಗ್ ಅವರನ್ನು ಸೋಮವಾರ ಅಮಾನತುಗೊಳಿಸಲಾಗಿದೆ.

ಮಧ್ಯಾಹ್ನ 12 ಗಂಟೆಗೆ ಮೇಲ್ಮನೆಯ ಕಲಾಪ ಆರಂಭಗೊಂಡಿತು. ಮಣಿಪುರ ಸಂಘರ್ಷಕ್ಕೆ ಸಂಬಂಧಿಸಿದಂತೆ ಪ್ರತಿಪಕ್ಷಗಳ ಸದಸ್ಯರು ಧರಣಿ ನಡೆಸಿದರು. ಪ್ರಶ್ನೋತ್ತರ ಅವಧಿ ಮುಗಿದ ಬಳಿಕ ಚರ್ಚೆಗೆ ಅವಕಾಶ ನೀಡುವುದಾಗಿ ಧನಕರ್ ಪ್ರಕಟಿಸಿದರು. ಆದರೆ, ಮೋದಿ ಅವರು ಹೇಳಿಕೆ ನೀಡಬೇಕು ಎಂದು ಆಗ್ರಹಿಸಿದರು.

ಕೆಲವು ನಿಮಿಷಗಳ ಕಾಲ ಪ್ರಶ್ನೋತ್ತರ ಕಲಾಪ ನಡೆಯಿತು. ಈ ವೇಳೆ ಸಭಾಪತಿ ಪೀಠದತ್ತ ಧಾವಿಸಿದ ಸಂಜಯ್ ಸಿಂಗ್ ಅವರು, ಧನಕರ್ ಹೇಳಿಕೆಯನ್ನು ಗುರಿಯಾಗಿಸಿಕೊಂಡು ಧರಣಿಗೆ ಮುಂದಾದರು. ತಮ್ಮ ಆಸನಕ್ಕೆ ತೆರಳುವಂತೆ ಧನಕರ್ ಸೂಚಿಸಿದರು. ಆದರೆ, ಇದಕ್ಕೆ ಅವರು ಒಪ್ಪಿಗೆ ಸೂಚಿಸಲಿಲ್ಲ.

ಬಳಿಕ ಸಭಾ ನಾಯಕ ಪೀಯೂಷ್ ಗೋಯಲ್, ಸಿಂಗ್ ಅವರನ್ನು ಅಮಾನತುಗೊಳಿಸುವಂತೆ ನಿರ್ಣಯ ಮಂಡಿಸಿದರು. ಇದಕ್ಕೆ ಧ್ವನಿ ಮತದ ಮೂಲಕ ಸದನವೂ ಒಪ್ಪಿಗೆ ಸೂಚಿಸಿತು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ 'ಇಂಡಿಯಾ' ಪ್ರತಿಭಟನೆಗೆ ಮುಂದಾಯಿತು. ಅಮಾನತು ಆದೇಶ ಪ್ರಕಟಿಸಿದ ಅಧ್ಯಕ್ಷರು, ಮಧ್ಯಾಹ್ನ 2 ಗಂಟೆಗೆ ಕಲಾಪ ಮುಂದೂಡಿದರು. ಮತ್ತೆ ಕಲಾಪ ಆರಂಭವಾದಾಗ ಸಂಜಯ್ ಸಿಂಗ್ ಕಲಾಪದಿಂದ ಹೊರಹೋಗಲು ನಿರಾಕರಿಸಿದರು. ಬಳಿಕ 3ಕ್ಕೆ ಮುಂದೂಡಲಾಯಿತು. ಮತ್ತೆ ಆರಂಭಗೊಂಡಾಗ ಗದ್ದಲ ಮುಂದುವರಿದಿದ್ದರಿಂದ ಕಲಾಪವನ್ನು ಮುಂದೂಡಲಾಯಿತು.

ಸರ್ವಪಕ್ಷಗಳ ಸಹಕಾರ ಕೋರಿದ ಧನಕರ್

ನವದೆಹಲಿ (ಪಿಟಿಐ): ಸುಗಮ ಕಲಾಪ ನಡೆಸುವುದಕ್ಕೆ ಸಂಬಂಧಿಸಿದಂತೆ ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಅವರು ಸರ್ವಪಕ್ಷಗಳ ಬೆಂಬಲ ಕೋರಿದ್ದಾರೆ.

ಕಲಾಪ ಮುಂದೂಡಿದ ಬಳಿಕ ಈ ಸಂಬಂಧ ಅವರು ಸಭೆ ನಡೆಸಿದರು. ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್, ಬಿಆರ್‌ಎಸ್‌ನ ಕೆ. ಕೇಶವರಾವ್, ಬಿಜೆಡಿಯ ಸಸ್ಮಿತ್ ಪಾತ್ರ, ಎಎಪಿಯ ರಾಘವ ಚಂದ್ರ, ರಾಜ್ಯಸಭೆ ನಾಯಕ ಪೀಯೂಷ್ ಗೋಯಲ್ ಹಾಗೂ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಪಾಲ್ಗೊಂಡಿದ್ದರು.

'ಹೇಳಿಕೆಗೆ ಒತ್ತಾಯಿಸುವ ಅಧಿಕಾರವಿಲ್ಲ'

ನವದೆಹಲಿ (ಪಿಟಿಐ): ಲೋಕಸಭೆಯಲ್ಲಿ ಬೆಳಿಗ್ಗೆ 11ಗಂಟೆಗೆ ಕಲಾಪ ಆರಂಭಗೊಂಡಿತು. ಕಾಂಗ್ರೆಸ್ ಸದಸ್ಯ ಅಧೀರ್ ರಂಜನ್ ಚೌದರಿ ಅವರಿಗೆ ಮಾತನಾಡಲು ಸ್ಪೀಕರ್ ಓಂ ಬಿರ್ಲಾ ಅನುಮತಿ ನೀಡಿದರು. ಪ್ರಧಾನಿ ಹೇಳಿಕೆ ನೀಡುವಂತೆ ಚೌದರಿ ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಬಿರ್ಲಾ, 'ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಯಾರು ಹೇಳಿಕೆ ನೀಡಬೇಕು ಎಂಬುದನ್ನು ನಿರ್ಧರಿಸುವ ಅಧಿಕಾರ ನಿಮಗೆ (ಪ್ರತಿಪಕ್ಷಗಳು) ಇಲ್ಲ' ಎಂದರು.

> **ಈಗಾಗಲೇ, ಮಣಿಪುರ ವಿಷಯದ ಬಗ್ಗೆ ಮೋದಿ ಮಾತನಾಡಿದ್ದಾರೆ. ಹಾಗಾಗಿ, ಉಭಯ ಸದನಗಳಲ್ಲಿ ಈ ಬಗ್ಗೆ ಚರ್ಚೆ ನಡೆಸದಿದ್ದರೆ ತಪ್ಪಾಗಲಿದೆ**
> **ಪ್ರಲ್ಹಾದ ಜೋಶಿ,** ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ

> **ಸಂಸತ್ ಮೂಲಕ ದೇಶದ ಜನರಿಗೆ ಉತ್ತರ ನೀಡಲು ಮೋದಿ ಸಿದ್ಧರಿಲ್ಲ. ಹಿಂಸಾಚಾರ ನಿಯಂತ್ರಿಸಲು ಗೃಹ ಸಚಿವರಿಗೂ ಸಾಧ್ಯವಾಗಿಲ್ಲ**
> **ಪ್ರಿಯಾಂಕಾ ಚತುರ್ವೇದಿ,** ಸಂಸದೆ, ಶಿವಸೇನಾ

> **ಜನತಂತ್ರದ ದೇಗುಲದಲ್ಲಿ ಶಿಸ್ತು ಪಾಲನೆ ಅಗತ್ಯ. ಇದನ್ನು ಕಾಪಾಡಲು ಕೆಲವೊಮ್ಮೆ ಕಠಿಣ ನಿರ್ಧಾರ ತಳೆಯುವುದು ಅನಿವಾರ್ಯ**
> **ಜಗದೀಪ್ ಧನಕರ್,** ರಾಜ್ಯಸಭಾ ಸಭಾಪತಿ

ಬಾಲಕಿಯರ ಮುಟ್ಟಿನ ಶುಚಿತ್ವ ರಾಜ್ಯಗಳಿಗೆ 'ಸುಪ್ರೀಂ' ಚಾಟಿ

ನವದೆಹಲಿ(ಪಿಟಿಐ): ಶಾಲಾ ವಿದ್ಯಾರ್ಥಿನಿಯರಿಗೆ ಮುಟ್ಟಿನ ವೇಳೆ ಶುಚಿತ್ವಕ್ಕಾಗಿ ರಾಷ್ಟ್ರೀಯ ಏಕರೂಪ ನೀತಿ ರೂಪಿಸುವ ಸಂಬಂಧ ಇದುವರೆಗೆ ಕೇಂದ್ರ ಸರ್ಕಾರಕ್ಕೆ ಅಭಿಪ್ರಾಯ ತಿಳಿಸದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ವಿರುದ್ಧ ಸುಪ್ರೀಂ ಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಅಲ್ಲದೆ ಆಗಸ್ಟ್ 31ರ ಒಳಗೆ ಅಭಿಪ್ರಾಯ ತಿಳಿಸದಿದ್ದರೆ ಕಾನೂನಿನ ಬಲ ಪ್ರಯೋಗಿಸುವ ಎಚ್ಚರಿಕೆಯನ್ನೂ ನೀಡಿದೆ.



ಶಾಲೆಗಳಲ್ಲಿ 6 ರಿಂದ 12 ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಹೆಣ್ಣುಮಕ್ಕಳಿಗೆ ಉಚಿತ ಸ್ಯಾನಿಟರಿ ಪ್ಯಾಡ್ ಮತ್ತು ಪ್ರತ್ಯೇಕ ಶೌಚಾಲಯದ ವ್ಯವಸ್ಥೆ ಮಾಡಲು ಕೇಂದ್ರ ಸರ್ಕಾರ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚನೆ ನೀಡಬೇಕು ಎಂದು ಕೋರಿ ಸಾಮಾಜಿಕ ಕಾರ್ಯಕರ್ತೆ ಜಯಾ ಠಾಕೂರ್ ಅರ್ಜಿ ಸಲ್ಲಿಸಿದ್ದರು.

ಇದರ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಮುಟ್ಟಿನ ಶುಚಿತ್ವಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಏಕರೂಪ ನೀತಿ ರೂಪಿಸಲು, ಪ್ರಮಾಣಿತ ಕಾರ್ಯವಿಧಾನ (ಎಸ್‌ಒಪಿ) ಸಿದ್ಧಪಡಿಸುವಂತೆ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಅಳವಡಿಸಿಕೊಳ್ಳಬೇಕಾದ ರಾಷ್ಟ್ರೀಯ ಮಾದರಿಯೊಂದನ್ನು ರೂಪಿಸುವಂತೆ ಕೇಂದ್ರ ಸರ್ಕಾರಕ್ಕೆ ಏಪ್ರಿಲ್ 10ರಂದು ಸೂಚಿಸಿತ್ತು. ಈ ವಿಚಾರದಲ್ಲಿ ರಾಜ್ಯಗಳು ಕೇಂದ್ರಕ್ಕೆ ಅಭಿಪ್ರಾಯ ನೀಡಬೇಕು ಎಂದೂ ಹೇಳಿತ್ತು.

ಆದರೆ, ಹರಿಯಾಣ, ದೆಹಲಿ, ಪಶ್ಚಿಮ ಬಂಗಾಳ ಮತ್ತು ಉತ್ತರ ಪ್ರದೇಶ ಹೊರತುಪಡಿಸಿ ಬೇರೆ ಯಾವುದೇ ರಾಜ್ಯಗಳು ತಮ್ಮ ಅಭಿಪ್ರಾಯ ತಿಳಿಸಿಲ್ಲ ಎಂದು ಕೇಂದ್ರದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಅವರು ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠಕ್ಕೆ ಸೋಮವಾರ ತಿಳಿಸಿದರು. ಇದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಪೀಠ, ರಾಜ್ಯಗಳಿಗೆ ಎಚ್ಚರಿಕೆ ರವಾನಿಸಿದೆ.

ಆಗಸ್ಟ್ 31ರ ಒಳಗಾಗಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಕೇಂದ್ರ ಸರ್ಕಾರಕ್ಕೆ ಅಭಿಪ್ರಾಯ ತಿಳಿಸಬೇಕು. ಇದರ ನಂತರವೂ ಅಭಿಪ್ರಾಯ ದಾಖಲಿಸುವಲ್ಲಿ ವಿಫಲವಾದರೆ ನ್ಯಾಯಾಲಯವು ಕಾನೂನಿನ ಬಲ ಪ್ರಯೋಗಕ್ಕೆ ಮುಂದಾಗಲಿದೆ' ಎಂದು ಪೀಠವು ಹೇಳಿದೆ. ಅರ್ಜಿಯ ಮುಂದಿನ ವಿಚಾರಣೆಯನ್ನು ನವೆಂಬರ್ ಎರಡನೇ ವಾರಕ್ಕೆ ಕೋರ್ಟ್ ನಿಗದಿ ಮಾಡಿದೆ.

ಅಸ್ಸಾಂ ಕ್ಷೇತ್ರ ಮರುವಿಂಗಡಣೆಗೆ ತಡೆ ನೀಡಲು ಕೋರ್ಟ್ ನಕಾರ

ನವದೆಹಲಿ (ಪಿಟಿಐ): ಚುನಾವಣಾ ಆಯೋಗವು (ಇ.ಸಿ) ಅಸ್ಸಾಂನ ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆ ಕಾರ್ಯದಲ್ಲಿ ತೊಡಗಿದ್ದು, ಈ ಪ್ರಕ್ರಿಯೆಗೆ ತಡೆ ನೀಡಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿತು. ಜೊತೆಗೆ, ಈ ಕುರಿತು ಸಲ್ಲಿಕೆಯಾಗಿರುವ ಅರ್ಜಿಗಳ ಬಗ್ಗೆ ಪ್ರತಿಕ್ರಿಯೆ ನೀಡಲು ಕೇಂದ್ರ ಸರ್ಕಾರ ಮತ್ತು ಇ.ಸಿಗೆ ಸೂಚಿಸಿತು.

ಇದೇ ವೇಳೆ, ಕ್ಷೇತ್ರ ಮರುವಿಂಗಡಣೆಯನ್ನು ಕೈಗೊಳ್ಳಲು ಚುನಾವಣಾ ಆಯೋಗಕ್ಕೆ ಅಧಿಕಾರ ನೀಡುವ 'ಜನತಾ ಪ್ರಾತಿನಿಧ್ಯ ಕಾಯ್ದೆ– 1950'ರ ಸೆಕ್ಷನ್ 8ರ ಸಾಂವಿಧಾನಿಕ ಮಾನ್ಯತೆ ಕುರಿತು ಪರಿಶೀಲನೆ ನಡೆಸಲು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲ ಮತ್ತು ಮನೋಜ್ ಮಿಸ್ರಾ ಅವರಿದ್ದ ನ್ಯಾಯಪೀಠವು ಒಪ್ಪಿಗೆ ನೀಡಿತು. ಪ್ರತಿಕ್ರಿಯೆ ನೀಡಲು ಕೇಂದ್ರ ಮತ್ತು ಇ.ಸಿಗೆ ಮೂರು ವಾರಗಳ ಗಡುವು ನೀಡಿದ ನ್ಯಾಯಪೀಠ, ಪ್ರತಿಕ್ರಿಯೆ ಸಲ್ಲಿಕೆಯಾದ ಎರಡು ವಾರಗಳ ಒಳಗೆ ಅದನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಲು ಅರ್ಜಿದಾರರಿಗೆ ಅವಕಾಶ ನೀಡಿತು. ಕಾಂಗ್ರೆಸ್, ಸಿಪಿಐ ಸೇರಿ ಅಸ್ಸಾಂನ ಒಂಬತ್ತು ವಿರೋಧ ಪಕ್ಷಗಳ ನಾಯಕರು ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆ ವಿರೋಧಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಮರುವಿಂಗಡಣೆ ಕೈಗೊಳ್ಳಲು ಇ.ಸಿ ಅನುಸರಿಸುತ್ತಿರುವ ಕ್ರಮ ಮತ್ತು 2023ರ ಜೂನ್ 20ರಂದು ಇ.ಸಿ ಹೊರಬಿಟ್ಟಿರುವ ಪ್ರಸ್ತಾವನೆಯನ್ನು ಅರ್ಜಿಗಳಲ್ಲಿ ವಿರೋಧ ಪಕ್ಷಗಳು ಪ್ರಮುಖವಾಗಿ ಪ್ರಶ್ನಿಸಿವೆ.

ಚೀತಾಗಳ ರೇಡಿಯೊ ಕಾಲರ್ ತೆರವು

ಭೋಪಾಲ್ (ಪಿಟಿಐ): ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದ ಆರು ಚೀತಾಗಳಿಗೆ ಅಳವಡಿಸಿದ್ದ ರೇಡಿಯೊ ಕಾಲರ್ ಅನ್ನು ಅವುಗಳ ಆರೋಗ್ಯ ತಪಾಸಣೆಗಾಗಿ ತೆಗೆಯಲಾಗಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಉದ್ಯಾನದ ಪಶುವೈದ್ಯರು ಹಾಗೂ ದಕ್ಷಿಣ ಆಫ್ರಿಕಾದ ತಜ್ಞರು ಚೀತಾಗಳ ಆರೋಗ್ಯ ತಪಾಸಣೆ ನಡೆಸಲಿದ್ದಾರೆ ಎಂದೂ ಮಾಹಿತಿ ನೀಡಿದ್ದಾರೆ.

'ಗೌರವ್, ಶೌರ್ಯ, ಪವನ್, ಪಾವಕ್, ಆಶಾ ಮತ್ತು ಧೀರಾ ಹೆಸರಿನ ಚೀತಾಗಳ ರೇಡಿಯೊ ಕಾಲರ್ ಅನ್ನು ತೆರವುಗೊಳಿಸಲಾಗಿದೆ ಮತ್ತು ಅವುಗಳು ಆರೋಗ್ಯದಿಂದಿವೆ' ಎಂದಿದ್ದಾರೆ. ಚೀತಾಗಳ ಆರೋಗ್ಯ ತಪಾಸಣೆಯ ಕಾರಣವನ್ನು ಮಧ್ಯಪ್ರದೇಶದ ಮುಖ್ಯ ವನ್ಯಜೀವಿ ವಾರ್ಡನ್ ಅಸೀಮ್ ಶ್ರೀವಾಸ್ತವ ಅವರು ಬಹಿರಂಗಪಡಿಸಿಲ್ಲ.

ರಾಜಸ್ಥಾನ: 'ಕೆಂಪು ಡೈರಿ' ಕೋಲಾಹಲ

ವಜಾಗೊಂಡಿದ್ದ ಸಚಿವ ರಾಜೇಂದ್ರ ಗುಢಾ, ಬಿಜೆಪಿ ಶಾಸಕ ದಿಲಾವರ್ ಅಮಾನತು

ಜೈಪುರ(ಪಿಟಿಐ): ರಾಜಸ್ಥಾನ ವಿಧಾನಸಭೆಯಲ್ಲಿ 'ಕೆಂಪು ಡೈರಿ' ವಿಚಾರವಾಗಿ ಸೋಮವಾರ ತೀವ್ರ ಗದ್ದಲ ಉಂಟಾಗಿ ಕೋಲಾಹಲ ಸೃಷ್ಟಿಯಾಯಿತು.

ಹಣ ವರ್ಗಾವಣೆ ಅವ್ಯವಹಾರದ 'ರಹಸ್ಯ'ವನ್ನು ಒಳಗೊಂಡ ಕೆಂಪು ಡೈರಿಯ (ರೆಡ್ ಡೈರಿ) ಮಾಹಿತಿ ಬಹಿರಂಗ ಮಾಡಲು ಅನುಮತಿ ನೀಡುವಂತೆ ಸಚಿವ ಸ್ಥಾನದಿಂದ ವಜಾಗೊಂಡಿರುವ ರಾಜೇಂದ್ರ ಗುಢಾ ಒತ್ತಾಯಿಸಿದರು. ಇದಕ್ಕೆ ವಿರೋಧ ಪಕ್ಷದ ಬಿಜೆಪಿ ಶಾಸಕರೂ ದನಿಗೂಡಿಸಿದರು. ಅಲ್ಲದೆ ಈ ವಿಚಾರವಾಗಿ ಗದ್ದಲ ಉಂಟಾದಾಗ ಸಭಾಧ್ಯಕ್ಷರ ಪೀಠದ ಮುಂಭಾಗಕ್ಕೆ ತೆರಳಿ ಪ್ರತಿಭಟನೆ ನಡೆಸಿದರು.

ಗುಢಾ ಅವರು ತಮ್ಮ ಮೇಲೆ ಹಲ್ಲೆ ಮಾಡಲು ಮುಂದಾಗಿದ್ದರು. ಮಾರ್ಷಲ್‌ಗಳು ತಡೆಯದಿದ್ದರೆ ದೊಡ್ಡ ಅನಾಹುತವೇ ನಡೆಯುತ್ತಿತ್ತು. ಗುಢಾ ಅವರ ವರ್ತನೆ ನಾಚಿಕೆಗೇಡು ಮತ್ತು ಅಸಂಸದೀಯ. ಬಿಜೆಪಿ ಶಾಸಕ ಮದನ್ ದಿಲಾವರ್ ಸಹ ಹಲ್ಲೆಗೆ ಮುಂದಾಗಿದ್ದರು. ಹೀಗಾಗಿ ಗುಢಾ ಮತ್ತು ದಿಲಾವರ್ ಅವರನ್ನು ಅಮಾನತು ಮಾಡಬೇಕು ಎಂದು ಸಂಸದೀಯ ಖಾತೆ ಸಚಿವ ಶಾಂತಿ ಧರಿವಾಲ್ ಅವರು ಸ್ಪೀಕರ್‌ಗೆ ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿದ ಸ್ಪೀಕರ್ ಅವರು, ಅಶಿಸ್ತಿನಿಂದ ವರ್ತಿಸಿದ ಆರೋಪದ ಮೇಲೆ ಗುಢಾ ಮತ್ತು ದಿಲಾವರ್ ಅವರನ್ನು ಕಲಾಪದ ಮುಂದಿನ ಅವಧಿವರೆಗೆ ಅಮಾನತು ಮಾಡಿದರು.

ಬೆಳಿಗ್ಗೆ ಕಲಾಪಕ್ಕೆ ಹಾಜರಾದ ಗುಢಾ ಅವರು ಸ್ಪೀಕರ್ ಸಿ.ಪಿ.ಜೋಶಿ ಕುರ್ಚಿಯ ಸಮೀಪ ತೆರಳಿ ಕೆಂಪು ಬಣ್ಣದ ಡೈರಿಯನ್ನು ಬೀಸುತ್ತಾ, ಓದಿ ಹೇಳಲು ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು. ಗುಢಾ ವರ್ತನೆಗೆ ಆಕ್ಷೇಪ ವ್ಯಕ್ತಪಡಿಸಿದ ಸ್ಪೀಕರ್ ತಮ್ಮ ಚೇಂಬರ್‌ನಲ್ಲಿ ಭೇಟಿಯಾಗುವಂತೆ ಪದೇ ಪದೇ ಹೇಳಿದರು. ಈ ಮಧ್ಯೆ ಬಿಜೆಪಿ ಶಾಸಕರು ಸಾಂಕೇತಿಕವಾದ 'ಕೆಂಪು ಡೈರಿ' ಎತ್ತಿ ತೋರಿಸುತ್ತಾ ಗದ್ದಲ ಎಬ್ಬಿಸಿದರು. ಸಂಸದೀಯ ಖಾತೆ ಸಚಿವ ಧರಿವಾಲ್ ಅವರು ಎದ್ದು ನಿಂತು ಮಾತನಾಡುತ್ತಿದ್ದಾಗ ಗುಢಾ ಅವರು ಆಕ್ರಮಣಕಾರಿಯಾಗಿ ಅವರತ್ತ ಧಾವಿಸಿ ಮೈಕ್ರೊಫೋನ್ ಒಡೆದು ಹಾಕಿದರು. ಕಾಂಗ್ರೆಸ್ ಶಾಸಕ ರಫೀಕ್ ಖಾನ್ ತಕ್ಷಣವೇ ಗುಢಾ ಅವರನ್ನು ಪಕ್ಕಕ್ಕೆ ದೂಡಿದರು. ಇದರಿಂದ ಗದ್ದಲ ತಾರಕಕ್ಕೆ ಏರಿತು. ಬಳಿಕ ಗುಢಾ ಅವರನ್ನು ಸದನದಿಂದ ಹೊರಗೆ ಹಾಕುವಂತೆ ಸ್ಪೀಕರ್ ಮಾರ್ಷಲ್‌ಗಳಿಗೆ ಆದೇಶಿಸಿದರು. ಬಳಿಕ ಕಲಾಪವನ್ನು ಮಧ್ಯಾಹ್ನಕ್ಕೆ ಮುಂದೂಡಿದರು. ಮಧ್ಯಾಹ್ನದ ನಂತರವೂ ವಿರೋಧ ಪಕ್ಷಗಳ ಸದಸ್ಯರು ಗದ್ದಲ ಮುಂದುವರಿಸಿದರು.

> **ಮಂಗಳವಾರ ಜನರ ಬಳಿಯೇ ತೆರಳಿ ಡೈರಿಯಲ್ಲಿರುವ 'ರಹಸ್ಯ' ಬಹಿರಂಗ ಮಾಡುತ್ತೇನೆ**
> **ರಾಜೇಂದ್ರ ಗುಢಾ,** ಕಾಂಗ್ರೆಸ್ ಶಾಸಕ

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಗುಢಾ, 'ಶಾಂತಿ ಧರಿವಾಲ್ ಮಾತನಾಡಲು ಎದ್ದು ನಿಂತಿದ್ದರು. ಅವರ ಬಳಿ ತೆರಳಿ ನಾನು ಮಾತನಾಡಬೇಕು ಎಂದು ಹೇಳಿದೆ. ಕಾಂಗ್ರೆಸ್ ಶಾಸಕರು ನನ್ನನ್ನು ಪಕ್ಕಕ್ಕೆ ದೂಡಿದರು. ಡೈರಿಯನ್ನು ಕಸಿದುಕೊಳ್ಳಲು ಯತ್ನಿಸಿದರು. ಆದರೂ ಡೈರಿಯ ಕೆಲವು ಹಾಳೆಗಳು ನನ್ನ ಬಳಿಯೇ ಇವೆ' ಎಂದು ತಿಳಿಸಿದರು.

'ರಾಜಸ್ಥಾನ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ (ಆರ್‌ಟಿಡಿಸಿ) ಅಧ್ಯಕ್ಷ ಧರ್ಮೇಂದ್ರ ರಾಥೋಡ್ ಅವರ ನಿವಾಸದಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶೋಧ ನಡೆಸುತ್ತಿದ್ದ ಸಂದರ್ಭದಲ್ಲಿ ಈ ಡೈರಿಯನ್ನು ಜೋಪಾನ ಮಾಡಲಾಗಿತ್ತು. ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರೇ ರಾಥೋಡ್ ಅವರ ನಿವಾಸದಿಂದ ಈ ಡೈರಿ ತರುವಂತೆ ನನ್ನನ್ನು ಕಳುಹಿಸಿದ್ದರು. ಇದರಲ್ಲಿ ಶಾಸಕರಿಗೆ ನೀಡಿದ ಹಣದ ಬಗ್ಗೆ ಮಾಹಿತಿ ಇದೆ. ಅಶೋಕ್ ಗೆಹಲೋತ್ ಮತ್ತು ಅವರ ಪುತ್ರ ವೈಭವ್ ಗೆಹಲೋತ್ ಅವರ ಹೆಸರೂ ಇದೆ' ಎಂದು ಗುಢಾ ತಿಳಿಸಿದ್ದಾರೆ.

ಮಹಿಳೆಯರ ಸುರಕ್ಷತೆ ವಿಚಾರವಾಗಿ ವಿಧಾನಸಭೆಯಲ್ಲಿ ತಮ್ಮದೇ ಸರ್ಕಾರವನ್ನು ಟೀಕಿಸಿದ್ದರು. ಹೀಗಾಗಿ ಗುಢಾ ಅವರನ್ನು ಈಚೆಗೆ ಸಚಿವ ಸ್ಥಾನದಿಂದ ವಜಾಗೊಳಿಸಲಾಗಿತ್ತು.

ಶಾಂತಿ ಸ್ಥಾಪನೆಗೆ ಆಗ್ರಹಿಸಿ ಮೆರವಣಿಗೆ • ಅಶ್ರುವಾಯು ಸಿಡಿಸಿದ ಪೊಲೀಸರು

ವಿದ್ಯಾರ್ಥಿಗಳು, ಸ್ತ್ರೀಯರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರದಲ್ಲಿ ಶಾಂತಿ ಸ್ಥಾಪನೆಯಾಗಬೇಕು ಮತ್ತು ಇಂಟರ್‌ನೆಟ್ ಸೇವೆ ಪುನರಾರಂಭಗೊಳ್ಳಬೇಕು ಎಂದು ಆಗ್ರಹಿಸಿ ಇಂಫಾಲ್‌ನಲ್ಲಿ ವಿದ್ಯಾರ್ಥಿಗಳು ಸೋಮವಾರ ಪ್ರತಿಭಟನೆ ನಡೆಸಿದರು. ಹೋರಾಟ ನಿರತ ವಿದ್ಯಾರ್ಥಿಗಳನ್ನು ಚದುರಿಸಲು ಪೊಲೀಸರು ಅಶ್ರುವಾಯು ಶೆಲ್ ಸಿಡಿಸಬೇಕಾಯಿತು.

ಮಣಿಪುರ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಸದಸ್ಯರು ವಿಶ್ವವಿದ್ಯಾಲಯದ ದ್ವಾರದಿಂದ ಇಂಫಾಲ್‌ನ ಸಿಂಗ್ಜಮೈ ಬಜಾರ್ ವರೆಗೆ ಪ್ರತಿಭಟನಾ ಮೆರವಣಿಗೆ ಕೈಗೊಂಡರು.

ಶಿಕ್ಷಣದ ದೃಷ್ಟಿಯಿಂದ ರಾಜ್ಯದಲ್ಲಿ ಶಾಂತಿಯುತ ವಾತಾವರಣ ಪುನರ್ ಸ್ಥಾಪನೆಯಾಗಬೇಕು ಎಂಬ ಒಕ್ಕಣೆಯುಳ್ಳ ಫಲಕಗಳನ್ನು ಹಿಡಿದು ಬೀದಿಗಿಳಿದ ವಿದ್ಯಾರ್ಥಿಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಪೊಲೀಸರು ತಡೆಯಲು ಯತ್ನಿಸಿದಾಗ ವಾಗ್ವಾದ ನಡೆಯಿತು. ಆದರೂ ವಿದ್ಯಾರ್ಥಿಗಳು ಮೆರವಣಿಗೆ ಕೈಬಿಡಲಿಲ್ಲ.

ಮೈತೇಯಿ ಮತ್ತು ಕುಕಿ ಸಮುದಾಯಗಳ ನಡುವಿನ ಸಂಘರ್ಷ ಅಂತ್ಯಗೊಳಿಸುವಲ್ಲಿ ಸರ್ಕಾರ ವಿಫಲವಾಗಿದೆ. ಇದರಿಂದ ರಾಜ್ಯದಲ್ಲಿ ಶಿಕ್ಷಣಕ್ಕೆ ತೊಂದರೆ ಎದುರಾಗಿದೆ ಎಂದು ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದರು. ಇಂಟರ್‌ನೆಟ್ ಸೇವೆಗೆ ನಿರ್ಬಂಧ ವಿಧಿಸಿರುವುದರಿಂದ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿದೆ. ಕೂಡಲೇ ಇಂಟರ್‌ನೆಟ್ ಸೇವೆ ಪುನರ್‌ಸ್ಥಾಪನೆಯಾಗಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದರು.

ಪ್ರತಿಭಟನಾ ಮೆರವಣಿಗೆಯನ್ನು ವಿದ್ಯಾರ್ಥಿಗಳು ಕೈಬಿಡದ ಹಿನ್ನೆಲೆಯಲ್ಲಿ ಪೊಲೀಸರು ಅಶ್ರುವಾಯು ಶೆಲ್ ಸಿಡಿಸಿ ಅವರನ್ನು ಚದುರಿಸಿದರು. ಮೈತೇಯಿ ಮತ್ತು ಕುಕಿ ಸಮುದಾಯಗಳ ನಡುವೆ ಘರ್ಷಣೆ ಏರ್ಪಟ್ಟ ಹಿನ್ನೆಲೆಯಲ್ಲಿ ಮೇ 3ರಂದು ರಾಜ್ಯದಲ್ಲಿ ಇಂಟರ್‌ನೆಟ್‌ಸೇವೆ ನಿರ್ಬಂಧಿಸಲಾಯಿತು. ಅಲ್ಲಿಂದ ಇಲ್ಲಿಯವರೆಗೆ ನಿರ್ಬಂಧವನ್ನು ಹಲವು ಬಾರಿ ವಿಸ್ತರಿಸಲಾಗಿದೆ. ವದಂತಿ, ಸುಳ್ಳು ಮಾಹಿತಿ ಹರಡುವುದನ್ನು ತಡೆಯುವ ಸಲುವಾಗಿ ಇಂಟರ್‌ನೆಟ್ ಸೇವೆ ಸ್ಥಗಿತಗೊಳಿಸಿರುವುದಾಗಿ ಸರ್ಕಾರ ಹೇಳಿದೆ.

ಸುಳ್ಳು ಮಾಹಿತಿ ಹರಡುವುದರ ವಿರುದ್ಧ ಕ್ರಮ ಕೈಗೊಂಡು, ರಾಜ್ಯದಲ್ಲಿ ಇಂಟರ್‌ನೆಟ್ ಸೇವೆಯನ್ನು ಭಾಗಶಃ ಮರುಸ್ಥಾಪಿಸುವಂತೆ ಮಣಿಪುರ ಹೈಕೋರ್ಟ್ ಈ ಹಿಂದೆ ರಾಜ್ಯ ಸರ್ಕಾರಕ್ಕೆ ಸೂಚಿಸಿತ್ತು.



ಮಣಿಪುರದಲ್ಲಿ ಶಾಂತಿ ನೆಲೆಸುವಂತೆ ಒತ್ತಾಯಿಸಿ ಇಂಫಾಲ್‌ದಲ್ಲಿ ಸೋಮವಾರ ನಡೆದ ಪ್ರತಿಭಟನೆ ವೇಳೆ ಕಡಂಗಬಂದ್ ಗ್ರಾಮದ ಮೈತೇಯಿ ಸಮುದಾಯದ ಮಹಿಳೆಯರು ಘೋಷಣೆಗಳನ್ನು ಕೂಗಿದರು ಚಿತ್ರ–ಪಿಟಿಐ

14 ಆರೋಪಿಗಳ ಗುರುತು ಪತ್ತೆ

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ನಡೆದಿದ್ದ ಇಬ್ಬರು ಮಹಿಳೆಯರ ಬೆತ್ತಲೆ ಮೆರವಣಿಗೆ ಕೃತ್ಯಕ್ಕೆ ಸಂಬಂಧಿಸಿದಂತೆ 14 ಮಂದಿ ಆರೋಪಿಗಳನ್ನು ಗುರುತಿಸಲಾಗಿದ್ದು, ಅವರನ್ನು ಬಂಧಿಸಲು ಕ್ರಮವಹಿಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕೃತ್ಯಕ್ಕೆ ಸಂಬಂಧಿಸಿದಂತೆ ಪೊಲೀಸರು ಈಗಾಗಲೇ ಆರು ಜನರನ್ನು ಬಂಧಿಸಿದ್ದಾರೆ. ಮಣಿಪುರದ ಕಾಂಗ್‌ಪೋಕ್ಪಿ ಜಿಲ್ಲೆಯಲ್ಲಿ ಮೇ 4ರಂದು ನಡೆದಿದ್ದ ಈ ಕೃತ್ಯದ ವಿಡಿಯೊ ಜಾಲತಾಣದಲ್ಲಿ ಸಾಕಷ್ಟು ಹಂಚಿಕೆಯಾಗಿತ್ತು.

ದಿನದ ಬೆಳವಣಿಗೆ

- ಮಣಿಪುರ ಗಲಭೆಯ ಕುರಿತು ಸಂಸತ್‌ನಲ್ಲಿ ಧ್ವನಿಯೆತ್ತಬೇಕೆಂದು ಆಗ್ರಹಿಸಿ ಕೇಂದ್ರ ಸಚಿವ ಆರ್.ಕೆ. ರಂಜನ್ ಸಿಂಗ್ ಅವರ ನಿವಾಸದ ಮುಂಭಾಗದಲ್ಲಿ ಮಹಿಳೆಯರು ನಡೆಸಿದ ಪ್ರತಿಭಟನೆಯ ವೇಳೆ ಸಚಿವರ ಮನೆ ಮೇಲೆ ಕಲ್ಲು ತೂರಾಟ ನಡೆದಿದೆ ಎಂದು ಮೂಲಗಳು ತಿಳಿಸಿವೆ.
- ಉದ್ವಿಗ್ನ ವಾತಾವರಣದ ನಡುವೆಯೇ ಹಿಂಸಾಚಾರ ಬಾಧಿತ ಮಣಿಪುರಕ್ಕೆ ಸೋಮವಾರ ಸುಮಾರು 700 ಟನ್ ಅಗತ್ಯ ವಸ್ತುಗಳನ್ನು ಹೊತ್ತ ಸರಕುಸಾಗಣೆ ರೈಲು ತಲುಪಿತು.
- ಮಣಿಪುರದಲ್ಲಿ ನಡೆದಿರುವ ಲೈಂಗಿಕ ದೌರ್ಜನ್ಯ ಮತ್ತು ಹಿಂಸಾಚಾರ ಪ್ರಕರಣಗಳ ತನಿಖೆಗೆ ನಿವೃತ್ತ ನ್ಯಾಯಮೂರ್ತಿಯೊಬ್ಬರ ನೇತೃತ್ವದ ಸ್ವತಂತ್ರ ಸಮಿತಿ ರಚಿಸಬೇಕೆಂದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದೆ.
- ಮಣಿಪುರದ ಪರಿಸ್ಥಿತಿಯ ಬಗ್ಗೆ ಪ್ರಧಾನಿ ಮೋದಿ ಅವರು ಸಂಸತ್‌ನಲ್ಲಿ ಮಾತನಾಡಬೇಕು ಎಂಬ ವಿರೋಧ ಪಕ್ಷಗಳ ಬೇಡಿಕೆಯು ಸಮಂಜಸವಾಗಿದೆ ಎಂದು ಜಮ್ಮು ಕಾಶ್ಮೀರದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಅವರು ಸೋಮವಾರ ಹೇಳಿದ್ದಾರೆ.

ಕೇರಳದಲ್ಲಿ 3 ಸಾವು • ಉತ್ತರಾಖಂಡದಲ್ಲಿ ಕೊಚ್ಚಿಹೋದ ಹೆದ್ದಾರಿ

ಮೂರು ರಾಜ್ಯಗಳಲ್ಲಿ ವರುಣನ ಅಬ್ಬರ

ಔರಂಗಾಬಾದ್/ಡೆಹ್ರಾಡೂನ್ (ಪಿಟಿಐ): ಮಹಾರಾಷ್ಟ್ರ, ಉತ್ತರಾಖಂಡ ಮತ್ತು ಕೇರಳದ ವಿವಿಧೆಡೆ ಸೋಮವಾರ ಮಳೆ ಅಬ್ಬರಿಸಿದೆ. ಮಹಾರಾಷ್ಟ್ರದಲ್ಲಿ 176 ಗ್ರಾಮಗಳು ಬಾಧಿತವಾಗಿದ್ದು, 13000 ಹೆಕ್ಟೇರ್‌ನಲ್ಲಿ ಬೆಳೆ ಹಾನಿಯಾಗಿದೆ.

ಕೇರಳದ ಮೂರು ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗಿದ್ದು, ಏಳು ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ನೀಡಲಾಗಿದೆ. ರಾಜ್ಯದಲ್ಲಿ ಮಳೆಗೆ ಸಂಬಂಧಿತ ಅವಘಡಗಳಲ್ಲಿ ಇಬ್ಬರು ಬಾಲಕರು ಸೇರಿದಂತೆ ಮೂವರು ಅಸುನೀಗಿದ್ದಾರೆ. ಉತ್ತರಾಖಂಡದಲ್ಲಿ ಭಾನುವಾರ ರಾತ್ರಿಯಿಡೀ ಧಾರಾಕಾರ ಮಳೆಯಾಗಿದೆ. ಕಮೆರಾ ಬಳಿ ಬದರಿನಾಥ ಹೆದ್ದಾರಿಯು ಭಾಗಶಃ ಕೊಚ್ಚಿಹೋಗಿದೆ. ಮೂರು ದಿನಗಳ ಕಾಲ ಹೆದ್ದಾರಿ ಬಂದ್ ಮಾಡಲಾಗಿದ್ದು, ಯಾತ್ರಾರ್ಥಿಗಳ ಸಂಚಾರಕ್ಕೆ ತೀವ್ರ ತೊಡಕಾಗಿದೆ.

ಭಾರಿ ಮಳೆ, ಮೂರು ಸಾವು: ಕೇರಳದ ವಿವಿಧೆಡೆ ಸೋಮವಾರ ಭಾರಿ ಮಳೆಯಾಗಿದ್ದು, ಮೂವರು ಮೃತಪಟ್ಟರು. ಕೋಯಿಕ್ಕೋಡ್, ವಯನಾಡ್, ಕಣ್ಣೂರು ಜಿಲ್ಲೆಗಳಲ್ಲಿ ಶಾಲೆ, ಕಾಲೇಜುಗಳಿಗೆ ರಜೆ ಘೋಷಿಸಲಾಯಿತು.

ಜು.26ರವರೆಗೆ ಭಾರಿ ಮಳೆ ಮುನ್ಸೂಚನೆ ಇದೆ. ಎರ್ನಾಕುಳಂ, ಇಡುಕ್ಕಿ, ತ್ರಿಶ್ಶೂರು, ಪಾಲಕ್ಕಾಡ್, ಮಲಪ್ಪುರ, ಕಾಸರಗೋಡು ಸೇರಿದಂತೆ ಒಂಬತ್ತು ಜಿಲ್ಲೆಗಳಿಗೆ ಹವಾಮಾನ ಇಲಾಖೆ 'ಯೆಲ್ಲೋ ಅಲರ್ಟ್' ಘೋಷಿಸಲಾಗಿದೆ.

ವಯನಾಡ್ ಜಿಲ್ಲೆಯಲ್ಲಿ ಮನೆಪಾಠಕ್ಕೆ ತೆರಳುತ್ತಿದ್ದ ಇಬ್ಬರು ಮಕ್ಕಳು ಆಕಸ್ಮಿಕವಾಗಿ ನೀರಿನಲ್ಲಿ ಮುಳುಗಿ ಮೃತಪಟ್ಟರೆ, ತ್ರಿಶ್ಶೂರು ಜಿಲ್ಲೆಯಲ್ಲಿ ಯುವಕನೊಬ್ಬ ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಳೆ ಸಂತ್ರಸ್ತರಿಗಾಗಿ ಇಡುಕ್ಕಿ, ವಯನಾಡ್, ಕಾಸರಗೋಡು ಜಿಲ್ಲೆಗಳಲ್ಲಿ ಶಿಬಿರ ಆರಂಭಿಸಲಾಗಿದ್ದು, ಸದ್ಯ 38 ಜನರು ಆಶ್ರಯ ಪಡೆದಿದ್ದಾರೆ ಎಂದು ರಾಜ್ಯ ಪ್ರಕೃತಿ ವಿಕೋಪ ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

ವಾಡಿಕೆಗಿಂತಲೂ ಅಧಿಕ ಮಳೆ: ಮಹಾರಾಷ್ಟ್ರದಲ್ಲಿ ಈ ಹಂಗಾಮಿನಲ್ಲಿ ವಾಡಿಕೆಗಿಂತಲೂ ಅಧಿಕ ಮಳೆಯಾಗಿದ್ದು, ನಾಂದೇಡ್ ಜಿಲ್ಲೆಯ ಕಿನ್ವತ್ ತಾಲ್ಲೂಕಿನಲ್ಲಿ 13,246 ಹೆಕ್ಟೇರ್‌ನಲ್ಲಿ ಬೆಳೆಯಾನಿಯಾಗಿದೆ. 21,415 ರೈತರು ಬಾಧಿತರಾಗಿದ್ದಾರೆ ಎಂದು ಪ್ರಾಥಮಿಕ ಸಮೀಕ್ಷೆ ತಿಳಿಸಿದೆ.

ಕೊಚ್ಚಿಹೋದ 100 ಮೀ ಹೆದ್ದಾರಿ: ಉತ್ತರಾಖಂಡದಲ್ಲಿ ಗೌಚರ್ ಮತ್ತು ಬದರಿನಾಥ ಹೆದ್ದಾರಿಯಲ್ಲಿ ಕಮೆರಾ ಬಳಿ ಸುಮಾರು 100 ಮೀಟರ್‌ನಷ್ಟು ಹೆದ್ದಾರಿ ಕೊಚ್ಚಿಹೋಗಿದ್ದು, ಸಂಚಾರ ಅಸ್ತವ್ಯಸ್ತವಾಗಿದೆ. ಮುಖ್ಯವಾಗಿ ಧಾರ್ಮಿಕ ಕ್ಷೇತ್ರಕ್ಕೆ ಭೇಟಿ ನೀಡುತ್ತಿದ್ದ ಯಾತ್ರಾರ್ಥಿಗಳಿಗೆ ತೊಡಕಾಗಿದೆ.



ಪಂಜಾಬ್‌ನ ಜಲಂಧರ್‌ನಲ್ಲಿ ರಸ್ತೆ ಜಲಾವೃತವಾಗಿರುವುದು —ಪಿಟಿಐ ಚಿತ್ರ

ಮಧ್ಯಪ್ರದೇಶ: ಪ್ರಮುಖ ಆರೋಪಿ ಸೇರಿ ಮೂವರ ಬಂಧನ

ಬಾಯಿಂದ ಬೂಟು ಎತ್ತಿಕೊಡಲು ಒತ್ತಾಯ

ರೇವಾ (ಮಧ್ಯಪ್ರದೇಶ) (ಪಿಟಿಐ): ವ್ಯಕ್ತಿಯೊಬ್ಬರ ಕೈಯನ್ನು ಕಟ್ಟಿ ಅರೆನಗ್ನಗೊಳಿಸಿ, ಮನಬಂದಂತೆ ಥಳಿಸಿದ ನಂತರ ಬಾಯಿಯಿಂದ ಬೂಟು ಎತ್ತಿಕೊಡುವಂತೆ ಒತ್ತಾಯಿಸಿರುವ ಅಮಾನವೀಯ ಕೃತ್ಯ ಮಧ್ಯಪ್ರದೇಶದ ರೇವಾ ಜಿಲ್ಲೆಯಲ್ಲಿ ನಡೆದಿದೆ.

ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿ ಜವಾಹರ್ ಸಿಂಗ್ (55) ಮತ್ತು ಆತನ ಇಬ್ಬರು ಸಹಚರರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

34 ವರ್ಷದ ವ್ಯಕ್ತಿಯ ಎರಡೂ ಕೈಗಳನ್ನು ಹಿಂದಕ್ಕೆ ಕಟ್ಟಿದ್ದು, ಅವರು ದಯನೀಯವಾಗಿ ಬೇಡಿಕೊಳ್ಳುತ್ತಿರುವ ದೃಶ್ಯ ವಿಡಿಯೊದಲ್ಲಿದೆ.

'ಅಮಾನವೀಯ ಕೃತ್ಯಕ್ಕೆ ಆಸ್ತಿ ವ್ಯಾಜ್ಯವೇ ಕಾರಣವೆಂದು ಮೇಲ್ನೋಟಕ್ಕೆ ತಿಳಿದುಬಂದಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 'ಕಳೆದ ವಾರದಿಂದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದನ್ನು ಪಿಪ್ರಾಹಿ ಗ್ರಾಮದಲ್ಲಿ 2021ರ ಮೇ ನಲ್ಲಿ ಚಿತ್ರೀಕರಿಸಲಾಗಿದೆ. ಸಂತ್ರಸ್ತ ಪ್ರಬಲ ಸಮುದಾಯಕ್ಕೆ ಸೇರಿದವರು. ಪ್ರಮುಖ ಆರೋಪಿ ಗೋಂಡ ಬುಡಕಟ್ಟು ಸಮುದಾಯಕ್ಕೆ ಸೇರಿದ್ದು, ಸರ್ಕಾರಿ ಶಾಲೆಯಲ್ಲಿ ಗುಮಾಸ್ತನಾಗಿ ಕಾರ್ಯನಿರ್ವಹಿಸುತ್ತಿದ್ದಾರೆ' ಎಂದು ರೇವಾ ಪೊಲೀಸ್ ವರಿಷ್ಠಾಧಿಕಾರಿ ವಿವೇಕ್ ಸಿಂಗ್ ತಿಳಿಸಿದ್ದಾರೆ.

ಮೂವರು ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಎಫ್‌ಐಆರ್ ದಾಖಲಾಗಿದೆ. ಸ್ಥಳೀಯ ನ್ಯಾಯಾಲಯವು ಬಂಧಿತರನ್ನು ನ್ಯಾಯಾಂಗ ವಶಕ್ಕೆ ನೀಡಿದೆ.

ಇತ್ತೀಚೆಗೆ ಸಿಂಧ್ ಜಿಲ್ಲೆಯಲ್ಲಿ ಬುಡಕಟ್ಟು ಸಮುದಾಯದ ಯುವಕನೊಬ್ಬನ ಮೇಲೆ ವ್ಯಕ್ತಿಯೊಬ್ಬರು ಮೂತ್ರ ವಿಸರ್ಜನೆ ಮಾಡಿದ ವಿಡಿಯೊ ಜಾಲತಾಣಗಳಲ್ಲಿ ಹರಿದಾಡಿ ದೇಶದಾದ್ಯಂತ ಭಾರಿ ಆಕ್ರೋಶಕ್ಕೆ ಕಾರಣವಾಗಿತ್ತು.

ಅಂತಿಮ ದಿನ ಮಳೆಯದ್ದೇ ಆಟ: ವಿಂಡೀಸ್ ವಿರುದ್ಧದ ಎರಡನೇ ಟೆಸ್ಟ್ ಡ್ರಾ

ಸರಣಿ ಗೆದ್ದ ರೋಹಿತ್ ಬಳಗ


ಅರ್ಧಶತಕ ಗಳಿಸಿದ ಭಾರತ ತಂಡದ ಇಶಾನ್ ಕಿಶನ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಪೋರ್ಟ್ ಆಫ್ ಸ್ಪೇನ್ (ಪಿಟಿಐ): ವೆಸ್ಟ್ ಇಂಡೀಸ್ ವಿರುದ್ಧದ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಜಯಗಳಿಸಿ ಸರಣಿ 'ಕ್ಲೀನ್‌ಸ್ವೀಪ್' ಮಾಡುವ ಭಾರತದ ಕನಸಿಗೆ ಮಳೆ ಅಡ್ಡಿಯಾಯಿತು.

ಅಂತಿಮ ದಿನವಾದ ಸೋಮವಾರ ಮಳೆಯ ಕಾರಣ ಆಟ ನಡೆಯಲಿಲ್ಲ. ಚಹಾ ವಿರಾಮದವರೆಗೂ ಮಳೆ ನಿಲ್ಲದ ಕಾರಣ ದಿನದಾಟವನ್ನು ರದ್ದುಗೊಳಿಸಲಾಯಿತು. ಇದರಿಂದ ಪಂದ್ಯ ಡ್ರಾದಲ್ಲಿ ಕೊನೆಗೊಂಡಿತು.

ಮೊದಲ ಟೆಸ್ಟ್ ಪಂದ್ಯವನ್ನು ಇನಿಂಗ್ಸ್ ಹಾಗೂ 141 ರನ್‌ಗಳಿಂದ ಗೆದ್ದಿದ್ದ ರೋಹಿತ್ ಶರ್ಮಾ ಬಳಗ, ಎರಡು ಪಂದ್ಯಗಳ ಸರಣಿಯನ್ನು 1-0 ರಲ್ಲಿ ತನ್ನದಾಗಿಸಿಕೊಂಡಿತು.

ಪಂದ್ಯದ ನಾಲ್ಕನೇ ದಿನವಾದ ಭಾನುವಾರ 365 ರನ್‌ಗಳ ಗೆಲುವಿನ ಗುರಿಯನ್ನು ಆತಿಥೇಯ ತಂಡವು ಬೆನ್ನಟ್ಟಿತು. ಆದರೆ ಅಶ್ವಿನ್ (33ಕ್ಕೆ2) ದಾಳಿಯ ಮುಂದೆ ತಂಡವು 32 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 76 ರನ್ ಗಳಿಸಿತ್ತು. ವಿಂಡೀಸ್ ಗೆಲುವಿಗೆ ಇನ್ನೂ 289 ರನ್‌ಗಳು ಬೇಕಿದ್ದವು, ಭಾರತಕ್ಕೆ ಎಂಟು ವಿಕೆಟ್‌ಗಳ ಅಗತ್ಯವಿತ್ತು. ಆದರೆ ಮಳೆ ಅವಕಾಶ ನೀಡಲಿಲ್ಲ.

ಸರಣಿಯ ಎರಡೂ ಪಂದ್ಯಗಳನ್ನು ಗೆದ್ದಿದ್ದರೆ ಭಾರತಕ್ಕೆ ಡಬ್ಲ್ಯುಟಿಸಿ ಪಾಯಿಂಟ್ ಪಟ್ಟಿಯಲ್ಲಿ 24 ಪಾಯಿಂಟ್ಸ್‌ಗಳು ಲಭಿಸುತ್ತಿದ್ದವು. ಡಬ್ಲ್ಯುಟಿಸಿ ಋತುವಿನಲ್ಲಿ ಟೆಸ್ಟ್ ಗೆಲ್ಲುವ ತಂಡಕ್ಕೆ 12 ಪಾಯಿಂಟ್ಸ್‌ಗಳು ಲಭಿಸುತ್ತವೆ. ಡ್ರಾ ಆದರೆ ಎರಡೂ ತಂಡಗಳಿಗೆ ನಾಲ್ಕು ಪಾಯಿಂಟ್ಸ್‌ಗಳನ್ನು ನೀಡಲಾಗುತ್ತದೆ. ಭಾರತ ಈ ಸರಣಿಯಲ್ಲಿ ಒಟ್ಟು 16 ಪಾಯಿಂಟ್ಸ್ ಕಲೆಹಾಕಿತು.

ಭಾನುವಾರ ಎರಡನೇ ಇನಿಂಗ್ಸ್ ಆರಂಭಿಸಿದ್ದ ವಿಂಡೀಸ್ ತಂಡಕ್ಕೆ ನಾಯಕ ಕ್ರೇಗ್ ಬ್ರಾತ್‌ವೇಟ್ ಮತ್ತು ತೇಜನಾರಾಯಣ ಚಂದ್ರಪಾಲ್ ಮೊದಲ ವಿಕೆಟ್‌ಗೆ 38 ರನ್ ಸೇರಿಸಿದರು. ಅವರ ಜೊತೆಯಾಟವನ್ನು 18ನೇ ಓವರ್‌ನಲ್ಲಿ ಅಶ್ವಿನ್ ಮುರಿದರು. ತಮ್ಮ ಇನ್ನೊಂದು ಓವರ್‌ನಲ್ಲಿ ಕಿರ್ಕ್ ಮೆಕೆಂಜಿ ಅವರ ವಿಕೆಟ್ ಕೂಡ ತಮ್ಮದಾಗಿಸಿಕೊಂಡರು.

ಭಾರತ ತಂಡವು ಎರಡನೇ ಇನಿಂಗ್ಸ್‌ನಲ್ಲಿ 24 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 181 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ನಾಯಕ ರೋಹಿತ್ ಶರ್ಮಾ (57; 44ಎ) ಹಾಗೂ ಇಶಾನ್ ಕಿಶನ್ (ಔಟಾಗದೆ 52; 34ಎ) ಅವರು ವೇಗದ ಅರ್ಧಶತಕಗಳನ್ನು ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ: 128 ಓವರ್‌ಗಳಲ್ಲಿ 438. ವೆಸ್ಟ್ ಇಂಡೀಸ್: 115.4 ಓವರ್‌ಗಳಲ್ಲಿ 255. ಎರಡನೇ ಇನಿಂಗ್ಸ್: ಭಾರತ: 24 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 181 ಡಿಕ್ಲೇರ್ಡ್ (ಯಶಸ್ವಿ ಜೈಸ್ವಾಲ್ 38, ರೋಹಿತ್ ಶರ್ಮಾ 57, ಶುಭಮನ್ ಗಿಲ್ ಔಟಾಗದೆ 29, ಇಶಾನ್ ಕಿಶನ್ ಔಟಾಗದೆ 52) ವೆಸ್ಟ್ ಇಂಡೀಸ್: 32 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 76 (ಕ್ರೇಗ್ ಬ್ರಾತ್‌ವೇಟ್ 28, ಆರ್. ಅಶ್ವಿನ್ 33ಕ್ಕೆ2) ಫಲಿತಾಂಶ: ಪಂದ್ಯ ಡ್ರಾ

ಈಜು: ಸೆಮಿಫೈನಲ್ ತಲುಪಲು ಶ್ರೀಹರಿ ವಿಫಲ

ಫುಕೊವೊಕಾ (ಪಿಟಿಐ): ಭಾರತದ ಈಜುತಾರೆ ಶ್ರೀಹರಿ ನಟರಾಜ್ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಈಜು ಚಾಂಪಿಯನ್‌ಷಿಪ್‌ನಲ್ಲಿ 100 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯನ್ನು ಸೋಮವಾರ ಈ ಋತುವಿನ ಉತ್ತಮ ಅವಧಿಯೊಳಗೆ ಈಜಿದರೂ ಸೆಮಿಫೈನಲ್‌ಗೆ ಅರ್ಹತೆ ಪಡೆಯಲು ಅದು ಸಾಲಲಿಲ್ಲ.

ಏಷ್ಯನ್ ಗೇಮ್ಸ್‌ನಲ್ಲಿ ಸ್ಪರ್ಧಿಸಲಿರುವ ಶ್ರೀಹರಿ, 55.26 ಸೆ.ಗಳಲ್ಲಿ ದೂರ ಪೂರೈಸಿ ತಮ್ಮ ಹೀಟ್‌ನಲ್ಲಿ ಕೊನೆಯವರಾದರು. 22 ವರ್ಷದ ಕನ್ನಡಿಗ ಈಜುಪಟು ಒಟ್ಟಾರೆ 31ನೇ ಸ್ಥಾನ ಪಡೆದರು. ಏಳು ಹೀಟ್ಸ್‌ಗಳಲ್ಲಿ ಮೊದಲ 18 ಸ್ಥಾನ ಪಡೆದ ಈಜು ಸ್ಪರ್ಧಿಗಳು ಸೆಮಿಫೈನಲ್‌ಗೆ ಮುನ್ನಡೆದಿದ್ದಾರೆ.

100 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಶ್ರೀಹರಿ ಅವರ ವೈಯಕ್ತಿಕ ಶ್ರೇಷ್ಠ ಸಾಧನೆ 53.77 ಸೆ. 2021ರಲ್ಲಿ ಈ ಸಾಧನೆ ಮಾಡಿ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದರು. ಅವರು 50 ಮೀ. ಮತ್ತು 200 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲೂ ಭಾಗವಹಿಸಲಿದ್ದಾರೆ.

ಸಜನ್, ಕುಶಾಗ್ರಗೂ ನಿರಾಸೆ: ಸಜನ್ ಪ್ರಕಾಶ್ ಮತ್ತು ದೆಹಲಿಯ ಕುಶಾಗ್ರ ರಾವತ್ ಅವರೂ ಸ್ಫೂರ್ತಿಯುತ ಸಾಧನೆ ತೋರಲಿಲ್ಲ. ಪ್ರಕಾಶ್ 50 ಮೀ. ಬಟರ್‌ಫ್ಲೈ ಸ್ಪರ್ಧೆಯನ್ನು 24.93 ಸೆ.ಗಳಲ್ಲಿ ಪೂರ್ಣಗೊಳಿಸಿ, 57ನೇ ಸ್ಥಾನ ಪಡೆದರು. 91 ಮಂದಿ ಈಜುಪಟುಗಳು ಕಣದಲ್ಲಿದ್ದರು. ಇನ್ನೊಂದೆಡೆ 400 ಮೀ. ಫ್ರೀಸ್ಟೈಲ್‌ನಲ್ಲಿ ಭಾಗವಹಿಸಿದ್ದ ರಾವತ್ 35ನೇ ಸ್ಥಾನ ಪಡೆದರು.

ದೇವಧರ್ ಟ್ರೋಫಿ: ದಕ್ಷಿಣ ವಲಯ ಜಯಭೇರಿ

ವಿದ್ವತ್‌ಗೆ ಐದು ವಿಕೆಟ್


ವಿದ್ವತ್ ಕಾವೇರಪ್ಪ

ಪುದುಚೇರಿ (ಪಿಟಿಐ): ಐದು ವಿಕೆಟ್ ಗೊಂಚಲು ಗಳಿಸಿದ ಕನ್ನಡಿಗ ವಿದ್ವತ್ ಕಾವೇರಪ್ಪ ಅವರ ಅಮೋಘ ಬೌಲಿಂಗ್‌ನಿಂದ ದಕ್ಷಿಣ ವಲಯ ತಂಡವು ಸೋಮವಾರ ಆರಂಭವಾದ ದೇವಧರ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಮಳೆ ಅಡ್ಡಿಯಾದ ಪಂದ್ಯದಲ್ಲಿ ದಕ್ಷಿಣ ವಲಯ ತಂಡವು ವಿ.ಜಯದೇವನ್ ಪದ್ಧತಿಯ ಅನ್ವಯ, ಉತ್ತರ ವಲಯದ ವಿರುದ್ಧ 185 ರನ್‌ಗಳಿಂದ ಗೆದ್ದಿತು.

ಟಾಸ್ ಗೆದ್ದ ದಕ್ಷಿಣ ವಲಯ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ರೋಹನ್ ಕುನ್ನುಮಲ್ (70; 61ಎ, 4X8, 6X3) ಮತ್ತು ನಾಯಕ ಮಯಂಕ್ ಅಗರವಾಲ್ (64; 68ಎ, 4X7) ಮೊದಲ ವಿಕೆಟ್ ಜೊತೆಯಾಟದಲ್ಲಿ 117 ರನ್ ಸೇರಿಸಿದರು. ಇದರಿಂದಾಗಿ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 303 ರನ್ ಗಳಿಸಿತು.

ಆದರೆ ನಂತರದ ಅವಧಿಯಲ್ಲಿ ಮಳೆ ಸುರಿಯಿತು. ಅದಕ್ಕಾಗಿ ಗೆಲುವಿನ ಗುರಿಯ ಮೊತ್ತವನ್ನು ಪರಿಷ್ಕರಿಸಲಾಯಿತು. 40 ಓವರ್‌ಗಳಲ್ಲಿ 246 ರನ್‌ಗಳಿಗೆ ನಿಗದಿಗೊಳಿಸಲಾಯಿತು. ಆದರೆ, ವಿದ್ವತ್ ಕಾವೇರಪ್ಪ (6-1-17-5) ಅವರ ದಾಳಿಯ ಮುಂದೆ ಉತ್ತರ ವಲಯ ಕುಸಿಯಿತು. ಈಚೆಗೆ ದುಲೀಪ್ ಟ್ರೋಫಿ ಟೂರ್ನಿಯಲ್ಲಿಯೂ ವಿದ್ವತ್ ಎರಡು ಸಲ ಐದು ವಿಕೆಟ್‌ಗಳ ಗೊಂಚಲು ಗಳಿಸಿದ್ದರು.

ಆಕಾಶ್, ಶಹಬಾಜ್ ಮಿಂಚು: ಆಕಾಶ್ ದೀಪ್ ಮತ್ತು ಶಹಬಾಜ್ ಅಹಮದ್ ಅವರ ಪರಿಣಾಮಕಾರಿ ಬೌಲಿಂಗ್ ಬಲದಿಂದ ಪೂರ್ವ ವಲಯ ತಂಡವು 6 ವಿಕೆಟ್‌ಗಳಿಂದ ಕೇಂದ್ರ ವಲಯವನ್ನು ಸೋಲಿಸಿತು.

ಇನ್ನೊಂದು ಪಂದ್ಯದಲ್ಲಿ ಪಶ್ಚಿಮ ವಲಯವು ಈಶಾನ್ಯ ವಲಯದ ವಿರುದ್ಧ 9 ವಿಕೆಟ್‌ಗಳಿಂದ ಸುಲಭ ಜಯ ಸಾಧಿಸಿತು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ವಲಯ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 303 (ರೋಹನ್ ಕುನ್ನುಮಲ್ 70, ಮಯಂಕ್ ಅಗರವಾಲ್ 64. ಎನ್. ಜಗದೀಶನ್ 72, ರಿಕಿ ಭುಯ್ 31, ರಿಷಿ ಧವನ್ 30ಕ್ಕೆ2, ಮಯಂಕ್ ಮಾರ್ಕಂಡೆ 53ಕ್ಕೆ2) ಉತ್ತರ ವಲಯ: 23 ಓವರ್‌ಗಳಲ್ಲಿ 60 (ಶುಭಂ ಖಜೂರಿಯಾ 10, ಮನದೀಪ್ ಸಿಂಗ್ ಔಟಾಗದೆ 18, ವಿದ್ವತ್ ಕಾವೇರಪ್ಪ 17ಕ್ಕೆ5, ವೈಶಾಖ ವಿಜಯಕುಮಾರ್ 8ಕ್ಕೆ2) ಫಲಿತಾಂಶ: ದಕ್ಷಿಣ ವಲಯ ತಂಡಕ್ಕೆ 185 ರನ್ ಜಯ (ವಿಜೆಡಿ ಪದ್ಧತಿ)

ಕೇಂದ್ರ ವಲಯ: 50 ಓವರ್‌ಗಳಲ್ಲಿ 207 (ಆರ್ಯನ್ ಜುಯಾಲ್ ಔಟಾಗದೆ 39, ಶಿವಂ ಚೌಧರಿ 22, ರಿಂಕು ಸಿಂಗ್ 54, ಕರಣ್ ಶರ್ಮಾ 32, ಮಣಿಶಂಕರ್ ಮುರಾಸಿಂಗ್ 29ಕ್ಕೆ3, ಆಕಾಶ್ ದೀಪ್ 35ಕ್ಕೆ3, ಶಹಬಾಜ್ ಅಹಮದ್ 30ಕ್ಕೆ3) ಪೂರ್ವ ವಲಯ: 46.1 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 208 (ಅಭಿಮನ್ಯು ಈಶ್ವರನ್ 38, ಉತ್ಕರ್ಷ್ ಸಿಂಗ್ 89, ಶುಭ್ರಾಂಶು ಸೇನಾಪತಿ ಔಟಾಗದೆ 33, ಕರಣ್ ಶರ್ಮಾ 35ಕ್ಕೆ3) ಫಲಿತಾಂಶ: ಪೂರ್ವ ವಲಯಕ್ಕೆ 6 ವಿಕೆಟ್‌ಗಳ ಜಯ.

ಈಶಾನ್ಯ ವಲಯ: 47 ಓವರ್‌ಗಳಲ್ಲಿ 207 ಜೆಹು ಆ್ಯಂಡರ್ಸನ್ 24, ಲ್ಯಾಂಗ್‌ಲೊನಿಯಾಂಬ ಕೀಶಾಂಗ್‌ಬನ್ 30, ರೆಕ್ಸ್ ಸಿಂಗ್ 23, ಪಾಲ್ಜಾರ್ ತಮಾಂಗ್ 29, ಇಮ್ಲಿವತಿ ಲೆಮ್ಟೂರ್ 38, ಅರ್ಜನ್ ನಾಗವಾಸವಾಲಾ 31ಕ್ಕೆ3, ಶಮ್ಸ್ ಮುಲಾನಿ 37ಕ್ಕೆ2, ಶಿವಂ ದುಬೆ 36ಕ್ಕೆ2) ಪಶ್ಚಿಮ ವಲಯ: 25.1 ಓವರ್‌ಗಳಲ್ಲಿ 1 ವಿಕೆಟ್‌ಗೆ 208 (ಹರ್ವಿಕ್ ದೇಸಾಯಿ 85, ಪ್ರಿಯಾಂಕ್ ಪಾಂಚಾಲ್ ಔಟಾಗದೆ 99, ರಾಹುಲ್ ತ್ರಿಪಾಠಿ ಔಟಾಗದೆ 13) ಫಲಿತಾಂಶ:ಪಶ್ಚಿಮ ವಲಯಕ್ಕೆ 9 ವಿಕೆಟ್‌ಗಳ ಜಯ.

ವಿಶ್ವಕಪ್ ಶೂಟಿಂಗ್: ಭಾರತಕ್ಕೆ ಮತ್ತೆರಡು ಚಿನ್ನ


ಕಮಲ್‌ಜೀತ್ –ಎಸ್‌ಎಐ ಟ್ವಿಟರ್ ಚಿತ್ರ

ನವದೆಹಲಿ (ಪಿಟಿಐ): ಕಮಲ್‌ಜೀತ್ ಅವರು ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್ ಶೂಟಿಂಗ್‌ನಲ್ಲಿ ಭಾರತ ತಂಡ ಮತ್ತೆರಡು ಚಿನ್ನದ ಪದಕ ಗೆಲ್ಲಲು ಕಾರಣರಾದರು.

ಸೋಮವಾರ ನಡೆದ ಪುರುಷರ 50 ಮೀ. ಪಿಸ್ತೂಲ್ ಸ್ಪರ್ಧೆಯ ವೈಯಕ್ತಿಕ ವಿಭಾಗದಲ್ಲಿ ಅಗ್ರಸ್ಥಾನ ಪಡೆದುಕೊಂಡ ಅವರು ತಂಡ ವಿಭಾಗದಲ್ಲೂ ಭಾರತ ಚಿನ್ನ ಜಯಿಸಲು ನೆರವಾದರು.

ಕೊರಿಯಾದ ಚಾಂಗ್ವಾನ್‌ನಲ್ಲಿ ನಡೆದ ಕೂಟಕ್ಕೆ ಸೋಮವಾರ ತೆರೆಬಿತ್ತು. ಭಾರತ ತಂಡವು ಆರು ಚಿನ್ನ, ಆರು ಬೆಳ್ಳಿ ಮತ್ತು ಐದು ಕಂಚು ಸೇರಿದಂತೆ ಒಟ್ಟು 17 ಪದಕಗಳೊಂದಿಗೆ ಚೀನಾದ ಬಳಿಕ ಎರಡನೇ ಸ್ಥಾನ ಗಳಿಸಿತು. ಚೀನಾ ತಂಡ 12 ಚಿನ್ನ ಒಳಗೊಂಡಂತೆ 28 ಪದಕಗಳನ್ನು ಗೆದ್ದುಕೊಂಡಿತು.

ವೈಯಕ್ತಿಕ ವಿಭಾಗದಲ್ಲಿ ಕಮಲ್‌ಜೀತ್, 600 ರಲ್ಲಿ 544 ಪಾಯಿಂಟ್ಸ್ ಕಲೆಹಾಕಿದರು. ಉಜ್ಬೆಕಿಸ್ತಾನದ ವೆನಿಯಾಮಿನ್ ನಿಕಿತಿನ್ (542) ಎರಡನೇ ಸ್ಥಾನ ಪಡೆದರೆ, ಕೊರಿಯಾದ ಕಿಮ್ ತಾಯೆಮಿನ್ (541) ಕಂಚು ಪಡೆದುಕೊಂಡರು.

ಕಮಲ್‌ಜೀತ್, ಅಂಕಿತ್ ತೋಮರ್ ಮತ್ತು ಸಂದೀಪ್ ಬಿಷ್ಣೋಯ್ ಅವರನ್ನೊಳಗೊಂಡ ಭಾರತ ತಂಡ ಒಟ್ಟು 1,617 ಪಾಯಿಂಟ್ಸ್ ಸಂಗ್ರಹಿಸಿ ಚಿನ್ನ ಜಯಿಸಿತು. 1,613 ಪಾಯಿಂಟ್ಸ್‌ಗಳೊಂದಿಗೆ ಉಜ್ಬೆಕಿಸ್ತಾನ ಬೆಳ್ಳಿ ಗೆದ್ದರೆ, ಕೊರಿಯಾ (1,600) ಕಂಚು ತನ್ನದಾಗಿಸಿಕೊಂಡಿತು.

ಮಹಿಳೆಯರ 50 ಮೀ. ಪಿಸ್ತೂಲ್ ವಿಭಾಗದಲ್ಲಿ ಟಿಯಾನಾ ಅವರು 519 ಪಾಯಿಂಟ್ಸ್‌ಗಳೊಂದಿಗೆ ಬೆಳ್ಳಿ ಜಯಿಸಿದರು. ಚಿನ್ನ ಗೆದ್ದ ಖನಾ ಅಲಿಯೆವಾ ಅವರಿಗಿಂತ (520) ಕೇವಲ ಒಂದು ಪಾಯಿಂಟ್ಸ್‌ನಿಂದ ಹಿಂದೆ ಬಿದ್ದರು.

ವಿಶ್ವಕಪ್ ಫುಟ್‌ಬಾಲ್: ಇಟಲಿಗೆ ಪ್ರಯಾಸದ ಗೆಲುವು

ಜರ್ಮನಿ, ಬ್ರೆಜಿಲ್‌ಗೆ ಜಯ


ಮೊರೊಕ್ಕೊ ವಿರುದ್ಧ ಗೋಲು ಗಳಿಸಿದ ಜರ್ಮನಿ ತಂಡದ ಅಲೆಕ್ಸಾಂಡ್ರಾ ಪೊಪ್ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಮೆಲ್ಬರ್ನ್ (ಎಎಫ್‌ಪಿ): ಅಲೆಕ್ಸಾಂಡ್ರಾ ಪೊಪ್ ಅವರ ಎರಡು ಗೋಲುಗಳ ನೆರವಿನಿಂದ ಜರ್ಮನಿ ತಂಡ, ಮಹಿಳಾ ವಿಶ್ವಕಪ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ತನ್ನ ಮೊದಲ ಪಂದ್ಯದಲ್ಲಿ ಮೊರೊಕ್ಕೊ ತಂಡವನ್ನು ಸೋಮವಾರ 6–0 ಗೋಲುಗಳಿಂದ ಸದೆಬಡಿದು ಭರ್ಜರಿಯಾಗಿಯೇ ಆರಂಭ ಮಾಡಿತು. ಇಟಲಿ ತೀವ್ರ ಹೋರಾಟ ಕಂಡ ಇನ್ನೊಂದು ಪಂದ್ಯದಲ್ಲಿ ಅರ್ಜೆಂಟಿನಾ ತಂಡವನ್ನು 1–0 ಗೋಲಿನಿಂದ ಸೋಲಿಸಿತು.

ಅರಿ ಬೋರ್ಗೆಸ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಬ್ರೆಜಿಲ್, ಐದನೇ ದಿನದ ಕೊನೆಯ ಪಂದ್ಯದಲ್ಲಿ 4–0 ಗೋಲುಗಳಿಂದ ಮೊದಲ ಬಾರಿ ಆಡುತ್ತಿರುವ ಪನಾಮಾ ತಂಡಕ್ಕೆ ಸೋಲುಣಿಸಿತು. 'ಎಫ್' ಗುಂಪಿನ ಪಂದ್ಯದಲ್ಲಿ ಬೋರ್ಗೆಸ್ 19, 39 ಮತ್ತು 70ನೇ ನಿಮಿಷ ಗೋಲು ಗಳಿಸಿದರೆ, ಬೀಟ್ರಿಸ್ ಜನರೆಟ್ಟೊ 48ನೇ ನಿಮಿಷ ಗೋಲು ಗಳಿಸಿದರು.

ಎರಡು ಬಾರಿಯ ಚಾಂಪಿಯನ್ ಜರ್ಮನಿ, ಮಹಿಳಾ ಫುಟ್‌ಬಾಲ್‌ನಲ್ಲಿ ಭಾಗವಹಿಸುತ್ತಿರುವ ಮೊದಲ ಅರಬ್ ರಾಷ್ಟ್ರವೆನಿಸಿರುವ ಮೊರೊಕ್ಕೊದಿಂದ ಹೆಚ್ಚು ಸವಾಲು ಎದುರಿಸಲಿಲ್ಲ. ಜರ್ಮನಿ ತಂಡದ ನಾಯಕಿ ಪೊಪ್, ಎದುರಾಳಿ ತಂಡದ ದುರ್ಬಲ ರಕ್ಷಣಾ ವಿಭಾಗದ ಲಾಭ ಪಡೆದು ಎರಡು ಗೋಲುಗಳನ್ನು ಗಳಿಸಿದರು. ಕ್ಲಾರಾ ಬುಯಲ್ ಮತ್ತು ಲಿಯಾ ಶುಲ್ಲರ್ ಇನ್ನೆರಡು ಗೋಲುಗಳಿಗೆ ಕಾರಣರಾದರು. ಇನ್ನೆರಡು, 'ಉಡುಗೊರೆ' ರೂಪದಲ್ಲಿ ಬಂದವು.

ಜರ್ಮನಿ ಈ ಬಾರಿಯ ಟೂರ್ನಿಯ ನೆಚ್ಚಿನ ತಂಡಗಳಲ್ಲಿ ಒಂದಾಗಿದೆ.

31,000 ಪ್ರೇಕ್ಷಕರೆದುರು ನಡೆದ ಪಂದ್ಯದಲ್ಲಿ ಇಟಲಿ ತಂಡ ನಿರ್ಣಾಯಕ ಗೋಲಿಗಾಗಿ 87ನೇ ನಿಮಿಷ ಕಾಯಬೇಕಾಯಿತು. ಸಬ್‌ಸ್ಟಿಟ್ಯೂಟ್ ಆಟಗಾರ್ತಿ ಕ್ರಿಸ್ಟಿಯಾನಾ ಗಿರೆಲಿ ನಾಲ್ಕು ನಿಮಿಷಗಳ ನಂತರ ಆಕರ್ಷಕ ಹೆಡರ್ ಮೂಲಕ ಈ ಗೋಲು ಗಳಿಸಿದರು. ಅರ್ಜೆಂಟೀನಾ ಮೂರು ಬಾರಿ ವಿಶ್ವಕಪ್‌ನಲ್ಲಿ ಆಡಿದರೂ ಒಮ್ಮೆಯೂ ಜಯ ದಾಖಲಿಸಿಲ್ಲ.

ಮಂಗಳವಾರದ ಪಂದ್ಯಗಳು: ಎಚ್ ಗುಂಪು: ದಕ್ಷಿಣ ಕೊರಿಯಾ– ಕೊಲಂಬಿಯಾ (ಸಿಡ್ನಿ), 'ಎ' ಗುಂಪು: ನ್ಯೂಜಿಲೆಂಡ್– ಫಿಲಿಪ್ಪೀನ್ಸ್ (ವೆಲಿಂಗ್ಟನ್), 'ಎ' ಗುಂಪು: ಸ್ವಿಟ್ಜರ್‌ಲೆಂಡ್– ನಾರ್ವೆ (ಹ್ಯಾಮಿಲ್ಟನ್).

ಎಂಬಾಪೆಗೆ ₹ 2,716 ಕೋಟಿ ನೀಡಲು ಮುಂದಾದ ಅಲ್ ಹಿಲಾಲ್!



ಸಿಡ್ನಿ (ಎಪಿ): ಫ್ರಾನ್ಸ್ ಫುಟ್‌ಬಾಲ್ ತಂಡದ ಸ್ಟಾರ್ ಆಟಗಾರ ಕಿಲಿಯನ್ ಎಂಬಾಪೆ ಅವರನ್ನು ಸೆಳೆದುಕೊಳ್ಳಲು ಸೌದಿ ಅರೇಬಿಯಾದ ಅಲ್ ಹಿಲಾಲ್ ಕ್ಲಬ್, ದಾಖಲೆಯ ₹ 2,716 ಕೋಟಿ ಮೊತ್ತ ನೀಡಲು ಮುಂದಾಗಿದೆ.

ಎಂಬಾಪೆ ಅವರು ಈಗ ಫ್ರಾನ್ಸ್‌ನ ಪಿಎಸ್‌ಜಿ (ಪ್ಯಾರಿಸ್ ಸೇಂಟ್ ಜರ್ಮೈನ್) ಕ್ಲಬ್ ಪರ ಆಡುತ್ತಿದ್ದು, ಮುಂದಿನ ಋತುವಿನ ಬಳಿಕ ಒಪ್ಪಂದದ ಅವಧಿ ಕೊನೆಗೊಳ್ಳಲಿದೆ. ಪಿಎಸ್‌ಜಿ ಜತೆಗಿನ ಒಪ್ಪಂದವನ್ನು ಒಂದು ವರ್ಷಕ್ಕೆ ವಿಸ್ತರಿಸುವ ಅವಕಾಶ ಇದೆಯಾದರೂ, ಎಂಬಾಪೆ ಆಸಕ್ತಿ ತೋರಿಲ್ಲ. ಮುಂದಿನ ಋತುವಿನ ಬಳಿಕ ಕ್ಲಬ್ ತೊರೆಯಲು ಸಿದ್ಧತೆ ನಡೆಸಿದ್ದಾರೆ ಎನ್ನಲಾಗಿದೆ.

ಇದರ ನಡುವೆಯೇ ಅಲ್ ಹಿಲಾಲ್, ದೊಡ್ಡ ಮೊತ್ತ ನೀಡಿ ಅವರನ್ನು ಸೆಳೆಯಲು ಪ್ರಯತ್ನಿಸಿದೆ. ಸೌದಿ ಅರೇಬಿಯಾದ ಕ್ಲಬ್, ಎಂಬಾಪೆ ಅವರನ್ನು ಸಂಪರ್ಕಿಸಲು ಮುಂದಾಗಿರುವುದನ್ನು ಪಿಎಸ್‌ಜಿ ಕ್ಲಬ್ ಖಚಿತಪಡಿಸಿದೆ. ಮಾತ್ರವಲ್ಲ, ಒಪ್ಪಂದಕ್ಕೆ ಸಂಬಂಧಿಸಿದಂತೆ ಎಂಬಾಪೆ ಅವರೊಂದಿಗೆ ನೇರವಾಗಿ ಮಾತನಾಡಲು ಅಲ್ ಹಿಲಾಲ್ ಕ್ಲಬ್‌ಗೆ ಅನುಮತಿ ನೀಡಿದೆ.

ಅಲ್ ಹಿಲಾಲ್ ಕ್ಲಬ್ ಈಚೆಗೆ ಅರ್ಜೆಂಟೀನಾದ ಸ್ಟ್ರೈಕರ್ ಲಯೊನೆಲ್ ಮೆಸ್ಸಿ ಅವರಿಗೆ ಭಾರಿ ಮೊತ್ತ ನೀಡಿ ತಂಡಕ್ಕೆ ಸೇರಿಸಿಕೊಳ್ಳಲು ಪ್ರಯತ್ನಿಸಿತ್ತು. ಆದರೆ ಮೆಸ್ಸಿ ಅವರು ಸೌದಿ ಲೀಗ್‌ನಲ್ಲಿ ಆಡುವ ಬದಲು ಅಮೆರಿಕದ ಮೇಜರ್ ಲೀಗ್ ಸಾಕರ್‌ನಲ್ಲಿ (ಎಂಎಲ್‌ಎಸ್) ಇಂಟರ್ ಮಯಾಮಿ ಕ್ಲಬ್ ಪರ ಆಡಲು ಒಪ್ಪಂದ ಮಾಡಿಕೊಂಡಿದ್ದರು.

ಹರ್ಮನ್‌ಪ್ರೀತ್‌ಗೆ ಅಮಾನತು ಶಿಕ್ಷೆ?

ದುಬೈ (ಪಿಟಿಐ): ಬಾಂಗ್ಲಾದೇಶ ಎದುರಿನ ಮೂರನೇ ಏಕದಿನ ಪಂದ್ಯದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅಂಪೈರ್‌ಗಳನ್ನು ಟೀಕಿಸಿದ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರಿಗೆ ಎರಡು ಪಂದ್ಯಗಳ ಅಮಾನತು ಶಿಕ್ಷೆ ವಿಧಿಸುವ ಸಾಧ್ಯತೆ ಇದೆ.

ಶನಿವಾರ ನಡೆದ ಪಂದ್ಯವು ಟೈ ಆಗಿತ್ತು. ಬಾಂಗ್ಲಾದ ನಾಯಕಿ ನಿಗರ್ ಸುಲ್ತಾನಾ ಮತ್ತು ಹರ್ಮನ್‌ಪ್ರೀತ್ ಕೌರ್ ಜಂಟಿಯಾಗಿ ಟ್ರೋಫಿ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಹರ್ಮನ್, ಅಂಪೈರ್ ತೀರ್ಪು ಕಳಪೆಯಾಗಿತ್ತು ಎಂದು ಟೀಕಿಸಿದರು. ಅಂಪೈರ್‌ಗಳನ್ನೇ ವೇದಿಕೆಗೆ ಕರೆದು ಟ್ರೋಫಿ ನೀಡಬೇಕು ಎಂದು ವ್ಯಂಗ್ಯವಾಡಿದ್ದರು.

'ಈ ಘಟನೆಯ ಕುರಿತು ವಿಚಾರಣೆ ನಡೆಯುತ್ತಿದೆ. ಆಟಗಾರ್ತಿಗೆ ಎರಡು ಪಂದ್ಯಗಳ ಅಮಾನತು ಮತ್ತು ಮೂರು ಅಥವಾ ನಾಲ್ಕು ಡಿಮೆರಿಟ್ ಪಾಯಿಂಟ್‌ಗಳ ದಂಡ ವಿಧಿಸುವ ಕುರಿತು ಚಿಂತನೆ ಮಾಡಲಾಗುತ್ತಿದೆ. ಇದರಿಂದಾಗಿ ಹರ್ಮನ್‌ಪ್ರೀತ್ ಅವರು ಮುಂಬರುವ ಏಷ್ಯನ್ ಕ್ರೀಡಾಕೂಟದಲ್ಲಿ ಎರಡು ಪಂದ್ಯಗಳಲ್ಲಿ ಆಡಲು ಅವಕಾಶ ಸಿಗದಿರುವ ಸಾಧ್ಯತೆ ಇದೆ ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಟೆಸ್ಟ್: ಲಂಕಾ ವಿರುದ್ಧ ಪಾಕ್ ಮೇಲುಗೈ

ಕೊಲಂಬೊ (ಎಎಫ್‌ಪಿ): ಅಬ್ದುಲ್ಲಾ ಶಫೀಕ್ ಮತ್ತು ಶಾನ್ ಮಸೂದ್ ಅವರ ಅರ್ಧಶತಕಗಳ ನೆರವಿನಿಂದ ಪಾಕಿಸ್ತಾನ, ಎರಡನೇ ಟೆಸ್ಟ್ ಪಂದ್ಯದ ಮೊದಲ ದಿನವಾದ ಸೋಮವಾರ ಶ್ರೀಲಂಕಾ ವಿರುದ್ಧ ಮೇಲುಗೈ ಸಾಧಿಸಿತು. ಆತಿಥೇಯರನ್ನು 165 ರನ್‌ಗಳಿಗೆ ಉರುಳಿಸಿದ ಪಾಕ್ ತಂಡ ದಿನದಾಟದ ಕೊನೆಗೆ 2 ವಿಕೆಟ್‌ಗೆ 145 ರನ್ ಗಳಿಸಿದ್ದು ಉತ್ತಮ ಸ್ಥಿತಿಯಲ್ಲಿದೆ.

ಎರಡು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿರುವ ಪಾಕ್, ಆಕ್ರಮಣಕಾರಿ ಮನೋಭಾವ ಪ್ರದರ್ಶಿಸಿತು. ಶಫೀಕ್ ಅಜೇಯ 74 ರನ್ ಗಳಿಸಿದ್ದು, ಎಡಗೈ ಬ್ಯಾಟರ್ ಶಾನ್ ಮಸೂದ್ (51, 47 ಎಸೆತ) ಜೊತೆ ಲಗುಬಗನೇ 108 ರನ್ ಸೇರಿಸಿದರು.

ಇದಕ್ಕೆ ಮೊದಲು ಪಾಕಿಸ್ತಾನದ ಬೌಲರ್‌ಗಳು, ಶ್ರೀಲಂಕಾಕ್ಕೆ ಲಗಾಮು ಹಾಕಿದರು. ಲೆಗ್ ಸ್ಪಿನ್ನರ್ ಅಬ್ರಾರ್ ಅಹ್ಮದ್ ಮತ್ತು ವೇಗದ ಬೌಲರ್ ನಸೀಮ್ ಶಾ ಏಳು ವಿಕೆಟ್‌ಗಳನ್ನು ತಮ್ಮಲ್ಲಿ ಹಂಚಿಕೊಂಡು ಲಂಚ್ ಮತ್ತು ಟೀ ನಡುವೆ ಲಂಕಾ ತಂಡವನ್ನು ಆಲೌಟ್ ಮಾಡಿದರು.

ಮಳೆಯಿಂದ ಅರ್ಧಗಂಟೆ ತಡವಾಗಿ ಆರಂಭವಾದ ಪಂದ್ಯದಲ್ಲಿ, ಟಾಸ್ ಗೆದ್ದ ಶ್ರೀಲಂಕಾ ಕೂಡ ಬೇಗನೇ ತೊಂದರೆಗೆ ಒಳಗಾಯಿತು. 36 ರನ್‌ಗಳಾಗುವಷ್ಟರಲ್ಲಿ 4 ವಿಕೆಟ್‌ಗಳು ಉರುಳಿದವು. ಮೊದಲ ಪಂದ್ಯದಲ್ಲಿ 122 ಮತ್ತು 82 ರನ್ ಬಾರಿಸಿದ್ದ ಧನಂಜಯ ಡಿ'ಸಿಲ್ವ (57) ಮತ್ತು ದಿನೇಶ್ ಚಾಂದಿಮಾಲ್ (34) ಅವರು ಐದನೇ ವಿಕೆಟ್‌ಗೆ 85 ರನ್ ಸೇರಿಸಿದ್ದರಿಂದ ಆತಿಥೇಯರು ಮುಖಭಂಗದಿಂದ ಪಾರಾದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಶ್ರೀಲಂಕಾ: 48.4 ಓವರುಗಳಲ್ಲಿ 166 (ದಿನೇಶ್ ಚಾಂದಿಮಾಲ್ 34, ಧನಂಜಯ ಡಿಸಿಲ್ವ 57, ರಮೇಶ್ ಮೆಂಡಿಸ್ 27; ನಸೀಮ್ ಶಾ 41ಕ್ಕೆ3, ಅಬ್ರಾರ್ ಅಹ್ಮದ್ 69ಕ್ಕೆ4); ಪಾಕಿಸ್ತಾನ: 28.3 ಓವರುಗಳಲ್ಲಿ 2 ವಿಕೆಟ್‌ಗೆ 145 (ಅಬ್ದುಲ್ಲಾ ಶಫೀಖ್ ಬ್ಯಾಟಿಂಗ್ 74, ಶಾನ್ ಮಸೂದ್ 51)

ಜಪಾನ್ ಓಪನ್: ಚಿರಾಗ್– ಸಾತ್ವಿಕ್ ಜೋಡಿ ಮೇಲೆ ಕಣ್ಣು

ಟೋಕಿಯೊ (ಪಿಟಿಐ): ಕೊರಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪುರುಷರ ಡಬಲ್ಸ್ ಪ್ರಶಸ್ತಿ ಗೆದ್ದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಮಂಗಳವಾರ ಆರಂಭವಾಗಲಿರುವ ಜಪಾನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಭರವಸೆಯಾಗಿದ್ದಾರೆ.

ಕಳೆದ ಮಾರ್ಚ್‌ನಿಂದ ಇಲ್ಲಿಯವರೆಗೆ ಭಾರತದ ಈ ಜೋಡಿಯು ನಾಲ್ಕು ಪ್ರಶಸ್ತಿಗಳನ್ನು ಜಯಿಸಿದೆ. ಭಾನುವಾರ ನಡೆದಿದ್ದ ಕೊರಿಯಾ ಓಪನ್ ಫೈನಲ್‌ನಲ್ಲಿ ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ಫಜರ್ ಅಲ್ಫೈನ್ ಮತ್ತು ಮೊಹಮ್ಮದ್ ರಿಯಾನ್ ಆರ್ಡಿಯಾಂಟೊ ಜೋಡಿಯನ್ನು ಚಿರಾಗ್ ಮತ್ತು ಸಾತ್ವಿಕ್ ಮಣಿಸಿದ್ದರು. ಅಲ್ಲದೇ ಭಾರತದ ಜೋಡಿಯು ಕಳೆದ ಹತ್ತು ಪಂದ್ಯಗಳಲ್ಲಿ ಸತತ ಜಯ ಸಾಧಿಸಿದೆ.

ಒಲಿಂಪಿಯನ್ ಪಿ.ವಿ. ಸಿಂಧು ಅವರು ಮಹಿಳೆಯರ ಸಿಂಗಲ್ಸ್‌ನಲ್ಲಿ ಕಣದಲ್ಲಿದ್ದು, ಗೆಲುವಿನ ಲಯಕ್ಕೆ ಮರಳುವ ಪ್ರಯತ್ನದಲ್ಲಿದ್ದಾರೆ.

ಪುರುಷರ ವಿಭಾಗದಲ್ಲಿ ಎಚ್.ಎಸ್. ಪ್ರಣಯ್, ಕಿದಂಬಿ ಶ್ರೀಕಾಂತ್, ಯುವಪ್ರತಿಭೆಗಳಾದ ಲಕ್ಷ್ಯ ಸೇನ್, ಪ್ರಿಯಾಂಶು ರಾಜಾವತ್ ಕಣಕ್ಕಿಳಿಯುವರು.

ಜಿಪಿಬಿಎಲ್: ಹೈಕೋರ್ಟ್ ಅನುಮತಿ

ಬೆಂಗಳೂರು: ಗ್ರ್ಯಾನ್ ಪ್ರೀ ಬ್ಯಾಡ್ಮಿಂಟನ್ ಲೀಗ್ ಟೂರ್ನಿಯಲ್ಲಿ ಆಡಲು ಆಟಗಾರರಿಗೆ ಕರ್ನಾಟಕ ಹೈಕೋರ್ಟ್ ಅನುಮತಿ ನೀಡಿದೆ.

ನೋಂದಾಯಿತ ಆಟಗಾರರು ಖಾಸಗಿ ಲೀಗ್‌ಗಳಲ್ಲಿ ಆಡುವಂತಿಲ್ಲ ಎಂದು ಆದೇಶಿಸಿದ್ದ ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ಏಪ್ರಿಲ್ ತಿಂಗಳಿನಲ್ಲಿ ಎಲ್ಲ ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆಗಳಿಗೆ ಸುತ್ತೋಲೆ ಕಳಿಸಿತ್ತು. ಇದರಿಂದಾಗಿ ಬೆಂಗಳೂರಿನಲ್ಲಿ ನಡೆಯಲಿರುವ ಎರಡನೇ ಆವೃತ್ತಿಯ ಜಿಪಿಬಿಎಲ್ ಟೂರ್ನಿಯಲ್ಲಿ ಆಡಲು ಆಟಗಾರರಿಗೆ ನಿರಾಶೆಯಾಗಿತ್ತು.

ಬಿಎಐ ಸುತ್ತೋಲೆಯನ್ನು ಪ್ರಶ್ನಿಸಿ ಜಿಪಿಬಿಎಲ್ ಆಯೋಜಕರು ಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ ಹೈಕೋರ್ಟ್ ಕಳೆದ 21ರಂದು ಬಿಎಐ ಸುತ್ತೋಲೆಗೆ ತಡೆಯಾಜ್ಞೆ ನೀಡಿತು. ಇದರೊಂದಿಗೆ ಜಿಪಿಬಿಎಲ್‌ನಲ್ಲಿ ಆಡುವ ಆಟಗಾರರು, ತರಬೇತುದಾರರು, ತಾಂತ್ರಿಕ ಹಾಗೂ ಸಹಾಯಕ ಸಿಬ್ಬಂದಿಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಂತೆ ಬಿಎಐಗೆ ಸೂಚಿಸಿದೆ.

ಮುಂದಿನ ತಿಂಗಳು ಜಿಪಿಬಿಎಲ್ ನಡೆಯಲಿದೆ. 450ಕ್ಕೂ ಹೆಚ್ಚು ಪ್ರವೇಶಪತ್ರಗಳನ್ನು ಆಟಗಾರರಿಂದ ಆಯೋಜಕರು ಸ್ವೀಕರಿಸಿದ್ದಾರೆ.

'ಜಿಪಿಬಿಎಲ್ ಸಂಘಟಿಸಲು ಮಾನದಂಡಗಳು ಮತ್ತು ಮಾನ್ಯತೆ ಕುರಿತು ಸ್ಪಷ್ಟತೆ ನೀಡುವಂತೆ ಕೋರಿ ಜಿಪಿಬಿಎಲ್ ಪರವಾಗಿ ಬಿಟ್ ಸ್ಪೋರ್ಟ್ ಕಳೆದ ಒಂದು ವರ್ಷದಲ್ಲಿ 40ಕ್ಕೂ ಹೆಚ್ಚು ಬಾರಿ ಬಿಎಐ ಸಂಪರ್ಕಿಸಿದೆ. ಇಮೇಲ್, ಪತ್ರಗಳು, ಫೋನ್ ಕರೆಗಳು ಮತ್ತು ಮೊಬೈಲ್ ಸಂದೇಶಗಳ ಮೂಲಕ ಸಂಪರ್ಕಿಸಲಾಗಿದೆ. ಆದರೆ ಯಾವುದಕ್ಕೂ ಪ್ರತಿಕ್ರಿಯೆಯನ್ನು ಬಿಎಐ ನೀಡಿಲ್ಲವೆಂಬುದನ್ನು ನ್ಯಾಯಾಲಯಕ್ಕೆ ಸ್ಪಷ್ಟಪಡಿಸಲಾಯಿತು' ಎಂದು ಜಿಪಿಬಿಎಲ್ ಮೂಲಗಳು ತಿಳಿಸಿವೆ.

'ಟೂರ್ನಿಗೆ ಕೇವಲ ಒಂದು ತಿಂಗಳು ಬಾಕಿ ಇರುವಾಗ, ನೋಂದಾಯಿತ ಆಟಗಾರರು ಗೊಂದಲಲ್ಲಿದ್ದರು. ಅದಕ್ಕಾಗಿ ಶೀಘ್ರ ನಿರ್ಣಯ ಕೈಗೊಳ್ಳುವುದು ನಮ್ಮ ಉದ್ದೇಶವಾಗಿತ್ತು. ಹಾಗಾಗಿ ನ್ಯಾಯಾಲಯದ ಮೊರೆ ಹೋದೆವು. ನಾವು ಆಟಗಾರರಿಗೆ ಆರ್ಥಿಕವಾಗಿ ಸಹಾಯ ಮಾಡುತ್ತಿದ್ದೇವೆ' ಎಂದು ಜಿಪಿಬಿಎಲ್ ಲೀಗ್ ಆಯುಕ್ತ ಪ್ರಶಾಂತ್ ರೆಡ್ಡಿ ಹೇಳಿದ್ದಾರೆ.

ಹಾಕಿ: ಕೆನರಾ ಬ್ಯಾಂಕ್‌ಗೆ ಗೆಲುವು

ಬೆಂಗಳೂರು: ಎಂ.ಕೆ.ಚೇತನ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಕೆನರಾ ಬ್ಯಾಂಕ್ ತಂಡದವರು ಹಾಕಿ ಕರ್ನಾಟಕ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ 9–5 ಗೋಲುಗಳಿಂದ ಪೋಸ್ಟಲ್ ತಂಡವನ್ನು ಮಣಿಸಿದರು.

ಸೋಮವಾರ ನಡೆದ ಪಂದ್ಯದಲ್ಲಿ ಚೇತನ್ ಅವರು 5, 16 ಮತ್ತು 27ನೇ ನಿಮಿಷಗಳಲ್ಲಿ ಚೆಂಡನ್ನು ಗುರಿ ಸೇರಿಸಿದರು. ಕೆ.ಪಿ.ಸೋಮಯ್ಯ (19 ಮತ್ತು 39ನೇ ನಿ.) ಎರಡು ಗೋಲುಗಳನ್ನು ತಂದಿತ್ತರೆ, ಬಿ.ಎಂ. ಲಿಖಿತ್ (12), ಪ್ರಧಾನ್ ಸೋಮಣ್ಣ (29), ವರ್ಗೀಸ್ ಜಾನ್ (34) ಮತ್ತು ಪೃಥ್ವಿರಾಜ್ ಜಿ.ಎನ್ (52) ತಲಾ ಒಂದು ಗೋಲು ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಬಾಯ್ಸ್ ಸ್ಪೋರ್ಟ್ಸ್ ಕಂಪನಿ ಎಂಇಜಿ ಮತ್ತು ಸೆಂಟರ್ ತಂಡ 4–1 ಗೋಲುಗಳಿಂದ ಕಸ್ಟಮ್ಸ್ ಮತ್ತು ಜಿಎಸ್‌ಟಿ ತಂಡವನ್ನು ಮಣಿಸಿತು.


ಯಂಗ್ ಓರಿಯನ್ಸ್ ಎಸ್‌ಸಿ ತಂಡಕ್ಕೆ ವಿಧಾನ ಪರಿಷತ್ ಸದಸ್ಯ ಕೆ. ಗೋವಿಂದರಾಜ್ ಟ್ರೋಫಿ ನೀಡಿದರು

ಬ್ಯಾಸ್ಕೆಟ್‌ಬಾಲ್: ಯಂಗ್ ಓರಿಯನ್ಸ್, ಆಲ್ ಸ್ಟಾರ್ ಅಕಾಡೆಮಿ ಚಾಂಪಿಯನ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಂಗ್ ಓರಿಯನ್ಸ್ ಎಸ್‌ಸಿ ಮತ್ತು ಆಲ್ ಸ್ಟಾರ್ ಅಕಾಡೆಮಿ ಮೈಸೂರು ತಂಡಗಳು 13 ವರ್ಷದೊಳಗಿನವರ ರಾಜ್ಯ ಸಬ್ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿ ಮುಡಿಗೇರಿಸಿಕೊಂಡವು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ಆವ್ಯಮ್ (20) ಮತ್ತು ರಿದಾನ್ (14) ಅವರ ಆಟದ ನೆರವಿನಿಂದ ಯಂಗ್ ಓರಿಯನ್ಸ್ ತಂಡವು ಎಂಸಿಎಚ್‌ಎಸ್ ತಂಡವನ್ನು 59–42 ರಿಂದ ಮಣಿಸಿತು.

ಬಾಲಕಿಯರ ವಿಭಾಗದ ಪಂದ್ಯದಲ್ಲಿ ಅಂಚಲ್ (24) ಅವರ ಆಟದ ಬಲದಿಂದ ಆಲ್ ಸ್ಟಾರ್ ಅಕಾಡೆಮಿ ಮೈಸೂರು ತಂಡವು ಎಸ್. ಬ್ಲೂಸ್ ತಂಡವನ್ನು 64–59ರಿಂದ ಸೋಲಿಸಿತು.

ಮೂರು ಮತ್ತು ನಾಲ್ಕನೇ ಸ್ಥಾನಕ್ಕಾಗಿ ನಡೆದ ಬಾಲಕರ ವಿಭಾಗದ ಪಂದ್ಯದಲ್ಲಿ ಎಸ್. ಬ್ಲೂಸ್ ತಂಡವು ವಿಮಾನಪುರ ಎಸ್.ಸಿ ತಂಡವನ್ನು 64–59ರಿಂದ ಪರಾಭವಗೊಳಿಸಿತು. ಬಾಲಕಿಯರ ವಿಭಾಗದಲ್ಲಿ ಯಂಗ್ ಓರಿಯನ್ಸ್ ಎಸ್.ಸಿ ತಂಡವು ಅಪ್ಪಯ್ಯ ಬಿ.ಸಿ ತಂಡವನ್ನು 35–17ರಿಂದ ಮಣಿಸಿ ಮೂರನೇ ಸ್ಥಾನ ಪಡೆಯಿತು.

ಸಂಕ್ಷಿಪ್ತ ಸುದ್ದಿ

ಕರ್ಮನ್ ಕೌರ್‌ಗೆ ಐಟಿಎಫ್ ಪ್ರಶಸ್ತಿ

ನವದೆಹಲಿ (ಪಿಟಿಐ): ಭಾರತದ ಕರ್ಮನ್‌ಕೌರ್ ಥಾಂಡಿ ಅವರು ಅಮೆರಿಕದ ಇವಾನ್ಸ್‌ವಿಲೆ ಟೂರ್ನಿಯಲ್ಲಿ ಭಾನುವಾರ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಗೆದ್ದರು. ಇದು ಅವರಿಗೆ ವೃತ್ತಿ ಜೀವನದ ಎರಡನೇ ಡಬ್ಲ್ಯು60 ಐಟಿಎಫ್ ಪ್ರಶಸ್ತಿ ಆಗಿದೆ.

ಕರ್ಮನ್ ಕೌರ್ ಫೈನಲ್‌ನಲ್ಲಿ 7–5, 4–6, 6–1 ರಿಂದ ಉಕ್ರೇನ್‌ನ ಯುಲಿಲಾ ಸ್ಟಾರೊಡುಬುಟ್ಸೇವಾ ಅವರನ್ನು ಸೋಲಿಸಿದರು. ಅಮೆರಿಕದಲ್ಲಿ ವೃತ್ತಿಪರ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಎರಡನೇ ಆಟಗಾರ್ತಿ ಈಕೆ. ಸಾನಿಯಾ ಮಿರ್ಜಾ ಮೊದಲನೆಯವರು.

ಕೌರ್ ಅವರು ಮೊದಲ ಎಟಿಪಿ ಡಬ್ಲ್ಯು 60 ಪ್ರಶಸ್ತಿಯನ್ನು ಕೆನಡಾದ ಸಗುನೆಯಲ್ಲಿ ಕಳೆದ ವರ್ಷ ಜಯಿಸಿದ್ದರು. ಒಟ್ಟಾರೆ ಇದು ಅವರಿಗೆ ವೃತ್ತಿ ಜೀವನದ ನಾಲ್ಕನೇ ಪ್ರಶಸ್ತಿ.

ಐಟಿಎಫ್ ಮಹಿಳಾ ವಿಶ್ವ ಟೂರ್‌ನಲ್ಲಿ ಡಬ್ಲ್ಯು60 ಟೂರ್ನಿಗಳು ಬಹುಮಾನ ಹಣದ ದೃಷ್ಟಿಯಿಂದ ಮಧ್ಯಮ ಹಂತದವು ಆಗಿವೆ.

ಮುಂಬೈ ಸಿಟಿ ತಂಡಕ್ಕೆ ಜಯೇಶ್

ಮುಂಬೈ (ಪಿಟಿಐ): ಬೆಂಗಳೂರು ಎಫ್‌ಸಿ ತಂಡದ ಮಿಡ್‌ಫೀಲ್ಡರ್ ಜಯೇಶ್ ರಾಣೆ ಅವರು ಒಂದು ವರ್ಷದ ಅವಧಿಗೆ ಮುಂಬೈ ಸಿಟಿ ಎಫ್‌ಸಿ ತಂಡದ ಪರ ಆಡಲು ಒಪ್ಪಂದ ಮಾಡಿಕೊಂಡಿದ್ದಾರೆ.

30 ವರ್ಷದ ರಾಣೆ ಅವರು 2021–22ರ ಋತುವಿನಲ್ಲಿ ಬಿಎಫ್‌ಸಿ ತಂಡವನ್ನು ಸೇರಿಕೊಂಡಿದ್ದರು. ಇಂಡಿಯನ್ ಸೂಪರ್ ಲೀಗ್‌ನಲ್ಲಿ 103 ಪಂದ್ಯಗಳನ್ನು ಆಡಿರುವ ಅವರು ಅನುಭವಿ ಮಿಡ್‌ಫೀಲ್ಡರ್ ಎನಿಸಿಕೊಂಡಿದ್ದಾರೆ. ಒಪ್ಪಂದದ ಪ್ರಕಾರ ಅವರು 2023–24ರ ಋತುವಿನಲ್ಲಿ ಮುಂಬೈ ಪರ ಆಡಲಿದ್ದಾರೆ.

ಅಚ್ಚರಿ ತರಿಸಿದೆ: ವಿಜಯಕುಮಾರ್

ನವದೆಹಲಿ (ಪಿಟಿಐ): ಹೈಪರ್ಫಾರ್ಮೆನ್ಸ್ ಕೋಚ್ ಹುದ್ದೆಗೆ ತಮ್ಮನ್ನು ಪರಿಗಣಿಸದ ಭಾರತ ಕ್ರೀಡಾ ಪ್ರಾಧಿಕಾರದ ನಡೆಗೆ ಒಲಿಂಪಿಯನ್ ಶೂಟರ್ ವಿಜಯಕುಮಾರ್ ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ.

ಅಥ್ಲೆಟಿಕ್ಸ್, ಶೂಟಿಂಗ್, ಫೆನ್ಸಿಂಗ್, ಕಬಡ್ಡಿ ಮತ್ತು ಆರ್ಚರಿ ಕ್ರೀಡೆಗಳಿಗೆ ಹೈಪರ್ಫಾರ್ಮೆನ್ಸ್ ಕೋಚ್ (ಎಚ್‌ಪಿಸಿ) ಗಳನ್ನು ಆಯ್ಕೆ ಮಾಡಿರುವ ಸಾಯ್ ಜುಲೈ 21ರಂದು ಆದೇಶ ಹೊರಡಿಸಿದೆ. ಕಳೆದ ಫೆಬ್ರುವರಿ–ಮಾರ್ಚ್‌ನಲ್ಲಿ ಈ ಹುದ್ದೆಗಳಿಗೆ ಅರ್ಹರಿಂದ ಅರ್ಜಿ ಆಹ್ವಾನಿಸಿತ್ತು. 2012ರ ಲಂಡನ್ ಒಲಿಂಪಿಕ್ ಕೂಟದ ಪದಕ ವಿಜೇತ ವಿಜಯ್ ಅರ್ಜಿ ಹಾಕಿದ್ದರು. ಆದರೆ ಅವರನ್ನು ಆಯ್ಕೆಗೆ ಪರಿಗಣಿಸಲಾಗಿಲ್ಲ.

'ನಾನು ಎಚ್‌ಪಿಸಿಗಾಗಿ ಅರ್ಜಿ ಹಾಕಿದ್ದೆ. ಸಂದರ್ಶನಕ್ಕೆ ಹಾಜರಾಗಲು ಆಹ್ವಾನ ಬರುವ ವಿಶ್ವಾಸದಿಂದ ಕಾಯುತ್ತಿದ್ದೆ. ಆದರೆ ಪಟ್ಟಿ ಬಿಡುಗಡೆಯಾಗಿದ್ದು, ನನ್ನ ಹೆಸರು ಇರಲಿಲ್ಲ. ಇದು ಅಚ್ಚರಿ ತರಿಸಿದೆ' ಎಂದು ವಿಜಯ್ ಹೇಳಿದ್ದಾರೆ.